ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 25, 2009 ರೂ. 12/-


ಹೊಳೆಗೆ ಹೊಸನೀರು

ಶೈಲಜ ಹಿರೇಮಠ





ಲಂಗು ಲಗಾಮಿಲ್ಲದ ಲಾಯರ್‌ಗಳು



ಸೂಪರ್ ಸಿಎಂ

ಯಾರಿವನು ಸಂತೋಷ್



ಬ್ಲಾಕ್ ಮೇಲ್ ಸುಳಿಯಲ್ಲಿ ಶ್ರುತಿ



ಮುಲಾಮನ ಮನೆ ಪೋಲೀಸರ ಪಾಲು

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

'ವಂದೇ ಮಾತರಂ'ನಲ್ಲಿರುವುದು ಹಿಂದೂ ರಾಷ್ಟ್ರ, ಮುಸ್ಲಿಂ ದ್ವೇಷ, ಬ್ರಿಟಿಷ್ ಭಕ್ತಿ!

ವಂದೇ ಮಾತರಂ ಅನ್ನು ಮುಸ್ಲಿಮರು ಏಕೆ ಹಾಡಲು ನಿರಾಕರಿಸುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಮುಂಚೆಯೇ ಅವರ ವಿರುದ್ಧ ಅಂತಿಮ ತೀರ್ಮಾನ ಘೋಷಿಸಲಾಗಿದೆ. ಈ ತೀರ್ಮಾನಕ್ಕೆ ತಲುಪಲು ಇರುವ ಎರಡು ಪ್ರಮುಖ ಕಾರಣ 'ವಂದೇ ಮಾತರಂ' ಈ ದೇಶವನ್ನು ಬ್ರಿಟಿಷ್ ವಸಾಹತುಶಾಹಿ ವಿರೋಧೀ ದೇಶಭಕ್ತಿ ಆಶಯದಿಂದ ಬರೆಯಲಾಗಿದೆ ಎಂಬ ತಿಳಿವಳಿಕೆ. ಎರಡನೆಯದು ಈ ದೇಶಕ್ಕೆ ಮುಸ್ಲಿಮರು ಎಂದಿಗೂ ಬೇಷರತ್ ನಿಷ್ಠೆಯನ್ನು ತೋರುವುದಿಲ್ಲ ಎಂಬ ಪೂರ್ವಾಗ್ರಹ. ಎರಡು ತಿಳಿವಳಿಕೆಗಳೂ ಸಹ ತಪ್ಪೇ!

ಉತ್ತರ ಪ್ರದೇಶದ ದೇವಬಂದ್ ಮುಸ್ಲಿಂ ಸಂಘಟನೆಯೊಂದು 'ವಂದೇ ಮಾತರಂ' ಹಾಡುವುದರ ವಿರುದ್ಧ ಫತ್ವಾ ಹೊರಡಿಸಿರುವುದನ್ನು ವಿರೋಧಿಸಿ ದೇಶಾದ್ಯಂತ ಹೇಳಿಕೆಗಳು ಮತ್ತು ಪ್ರತಿ ಹೇಳಿಕೆಗಳು ಪ್ರಾರಂಭವಾಗಿವೆ. ನಿರೀಕ್ಷೆಯಂತೆ ಇಂಥಾ ಒಂದು ಸದವಕಾಶಕ್ಕಾಗಿಯೇ ಕಾಯುತ್ತಿದ್ದ ಸಂಘಪರಿವಾರದ ಹಲವು ಮಂಗಗಳು ವಂದೇ ಮಾತರಂ ಹಾಡದವರನ್ನು ದೇಶ ಬಿಟ್ಟು ಓಡಿಸಬೇಕೆಂದು ಕೂಗಾಡುತ್ತಿದ್ದಾರೆ. ಆದರೆ ಹಲವು ಮುಸ್ಲಿಂ ಸಂಘಟನೆಗಳೇ ವಂದೇ ಮಾತರಂ ವಿರುದ್ಧದ ಫತ್ವಾವನ್ನು ವಿರೋಧಿಸಿದ್ದಾರಲ್ಲದೆ ಉತ್ತರ ಪ್ರದೇಶದಲ್ಲಿ ಮುಸ್ಲಿಂ ಸಂಘಟನೆಯೊಂದು ಸಾಮೂಹಿಕವಾಗಿ ವಂದೇ ಮಾತರಂ ಹಾಡಿದ್ದಾರೆ. ಇಷ್ಟಾದರೂ ಇಡೀ ಮುಸ್ಲಿಂ ಸಮುದಾಯವನ್ನು ಸಂಘಪರಿವಾರದವರು ಮತ್ತು ಮಾಧ್ಯಮಗಳು ದೇಶದ್ರೋಹಿಗಳೆಂದು ಬಣ್ಣಿಸುವುದು ತಪ್ಪಲ್ಲ.

ಏಕೆಂದರೆ ಮುಸ್ಲಿಮರ ವಿರುದ್ಧ ಸಂಘಪರಿವಾರದ ರಾಜಕಾರಣ ಬಿತ್ತಿರುವ ಪೂರ್ವಗ್ರಹ ಅತ್ಯಂತ ಆಳವಾದದ್ದು. ಇದು ಎಷ್ಟು ಆಳವಾದದ್ದೆಂದರೆ ಈ 'ವಂದೇ ಮಾತರಂ' ಹಾಡಿನ ಒಟ್ಟು ಸಾರಾಂಶವನ್ನಾಗಲೀ, ಆ ಹಾಡು ಇರುವ 'ಆನಂದ ಮಠ' ಕಾದಂಬರಿಯ ಒಟ್ಟಾರೆ ತಿರುಳನ್ನಾಗಲೀ, ಅದನ್ನು ಬರೆದ ಬಂಕಿಮಚಂದ್ರ ಚಟ್ಟೋಪಾಧ್ಯಾಯರ ರಾಜಕೀಯವನ್ನಾಗಲೀ, ಆ ಕಾದಂಬರಿ ರಚನೆಯಾದ ಚಾರಿತ್ರಿಕ ಸಂದರ್ಭವನ್ನಾಗಲೀ ಮತ್ತು ಅದನ್ನು ಈಗ ಬಳಸುತ್ತಿರುವವರ ರಾಜಕಾರಣವನ್ನಾಗಲೀ ಕಿಂಚಿತ್ತೂ ತಿಳಿದುಕೊಳ್ಳದೆ ಪರಿವಾರದವರ ಜೊತೆ ಹಲವಾರು ಪ್ರಗತಿಪರರೂ ಮುಸ್ಲಿಮರ ವಿರುದ್ಧ ಫತ್ವಾ ಹೊರಡಿಸುತ್ತಿದ್ದಾರೆ. ಇತ್ತೀಚೆಗೆ ಮೂಡಬಿದ್ರೆಯ ಆಳ್ವಾಸ್ ನುಡಿಸಿರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಸಾಹಿತಿ ಹಂ.ಪ. ನಾಗರಾಜಯ್ಯನವರು ವಂದೇ ಮಾತರಂ ಹಾಡದವರು ಅರಬ್ಬಿ ಸಮುದ್ರಕ್ಕಾದರೂ ಬೀಳಲಿ, ಇಲ್ಲವೇ ವಿಮಾನ ಹತ್ತಿ ದೇಶ ಬಿಟ್ಟು ಹೋಗಲಿ ಎಂದು ಪಕ್ಕಾ ಪ್ರಮೋದ್ ಮುತಾಲಿಕ್ ಶೈಲಿಯಲ್ಲಿ ಫತ್ವಾ ಹೊರಡಿಸಿದ್ದರೆ, ಅನಂತ ಮೂರ್ತಿಗಳಂತವರೂ ಸಹ ಮುಸ್ಲಿಮರು ವಂದೇ ಮಾತರಂ ಹಾಡುವುದುದರಲ್ಲಿ ಏನೂ ತಪ್ಪಿಲ್ಲ ಎಂಬ ಫರ್ಮಾನು ಹೊರಡಿಸಿದ್ದಾರೆ.



ಹೀಗೆ ವಂದೇ ಮಾತರಂ ಅನ್ನು ಮುಸ್ಲಿಮರು ಏಕೆ ಹಾಡಲು ನಿರಾಕರಿಸುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಮುಂಚೆಯೇ ಅವರ ವಿರುದ್ಧ ಅಂತಿಮ ತೀರ್ಮಾನ ಘೋಷಿಸಲಾಗಿದೆ. ಈ ತೀರ್ಮಾನಕ್ಕೆ ತಲುಪಲು ಇರುವ ಎರಡು ಪ್ರಮುಖ ಕಾರಣ 'ವಂದೇ ಮಾತರಂ' ಈ ದೇಶವನ್ನು ಬ್ರಿಟಿಷ್ ವಸಾಹತುಶಾಹಿ ವಿರೋಧೀ ದೇಶಭಕ್ತಿ ಆಶಯದಿಂದ ಬರೆಯಲಾಗಿದೆ ಎಂಬ ತಿಳಿವಳಿಕೆ. ಎರಡನೆಯದು ಈ ದೇಶಕ್ಕೆ ಮುಸ್ಲಿಮರು ಎಂದಿಗೂ ಬೇಷರತ್ ನಿಷ್ಠೆಯನ್ನು ತೋರುವುದಿಲ್ಲ ಎಂಬ ಪೂರ್ವಾಗ್ರಹ. ಎರಡು ತಿಳಿವಳಿಕೆಗಳೂ ಸಹ ತಪ್ಪೇ!

'ವಂದೇ ಮಾತರಂ' ಹಾಡಿನ ರಾಜಕಾರಣವನ್ನು ಗಮನಿಸುವ ಮುನ್ನ ಇದನ್ನು ಹಾಡಲು ನಿರಾಕರಿಸುತ್ತಿರುವ ಕೆಲವು ಮುಸ್ಲಿಂ ಸಂಘಟನೆಗಳು ಕೊಡುತ್ತಿರುವ ಕಾರಣಗಳು ಸಕಾರಣವಾದದ್ದೇ ಎಂದು ನೋಡಬೇಕು. ಈ ಸಂಘಟನೆಗಳ ಆಕ್ಷೇಪ ಈ ದೇಶಕ್ಕೆ ಬದ್ಧತೆ ತೋರುವ ಗೀತೆಯನ್ನು ಹಾಡುವುದು ಇಸ್ಲಾಮಿಗೆ ವಿರೋಧ ಎಂಬುವುದಲ್ಲವೇ ಅಲ್ಲ. ಏಕೆಂದರೆ ಈವರೆಗೆ ಮುಸ್ಲಿಮರು ರಾಷ್ಟ್ರಗೀತೆಯಾದ 'ಜನ ಗಣಮನ' ಹಾಡಬಾರದೆಂದು ಯಾವ ಮುಸ್ಲಿಂ ಸಂಘಟನೆಗಳೂ ಫತ್ವಾ ಹೊರಡಿಸಿರಲಿಲ್ಲ. ಅಷ್ಟು ಮಾತ್ರವಲ್ಲ ದೇಶದೆಲ್ಲೆಡೆ ಎಲ್ಲಾ ಶಾಲೆಗಳಲ್ಲೂ ಮುಸ್ಲಿಮ್ ವಿದ್ಯಾರ್ಥಿಗಳು ಹಿಂದೂ ವಿದ್ಯಾರ್ಥಿಗಳಷ್ಟೇ ಬದ್ಧರಾಗಿ 'ಜನ ಗಣ ಮನ' ಹಾಡುತ್ತಿದ್ದಾರೆ. ದೇಶಭಕ್ತಿಯ ಲಾಂಛನಗಳು ಧರ್ಮಾತೀತವಾಗಿದ್ದಷ್ಟು ಕಾಲ ಅದರ ಬಗ್ಗೆ ಯಾರಿಗೂ ಆಕ್ಷೇಪಣೆ ಇರಲು ಸಾಧ್ಯವಿಲ್ಲ. ಅದರ ಬದಲಿಗೆ ದೇಶಭಕ್ತಿಯ ಲಾಂಛನಗಳು ಯಾವುದಾದರೂ ಒಂದು ಧರ್ಮದ ಹೇರಿಕೆಯ ಪರೋಕ್ಷ ಸಾಧನವಾದಾಗ ಅದು ಸಹಜವಾಗಿಯೇ ಅನುಮಾನಗಳನ್ನು ಮತ್ತು ವಿರೋಧಗಳನ್ನು ಹುಟ್ಟುಹಾಕುತ್ತದೆ.



ವಂದೇ ಮಾತರಂ ಕಾದಂಬರಿ ಆಧಾರಿತ ಅಮರ ಚಿತ್ರಕಥಾ ಪುಸ್ತಕದಲ್ಲಿ ವಂದೇ ಮಾತರಂ ಘೋಷಣೆಯೊಂದಿಗೆ ಹಿಂದೂಗಳು ಮುಸಲ್ಮಾನರನ್ನು ಕೊಲ್ಲುತ್ತಿರುವ ಚಿತ್ರ

'ವಂದೇ ಮಾತರಂ' ನಿಜಕ್ಕೂ ದೇಶಭಕ್ತಿಯನ್ನು ಅಂದರೆ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧದ ವಿಮೋಚನೆಯ ಆಶಯವನ್ನು ಪ್ರತಿನಿಧಿಸುತ್ತದೆಯೇ ಎಂದು ನಂತರ ನೋಡೋಣ. ಈಗ ಸದ್ಯಕ್ಕೆ 'ವಂದೇ ಮಾತರಂ' ಹಾಡು ಧರ್ಮಾತೀತವಾದ ರಾಷ್ಟ್ರಸೂಚಕ ಅಭಿವ್ಯಕ್ತಿಗಳನ್ನು ಹೊಂದಿದೆಯೇ ಎಂಬುದು ಪ್ರಶ್ನೆ: ಈಗ ಜನಪ್ರಿಯಗೊಂಡಿರುವ 'ವಂದೇ ಮಾತರಂ' ಹಾಡಿನ ಮೊದಲೆರಡು ಚರಣಗಳು ದೇಶವನ್ನು ತಾಯಿಯೆಂದು ಪರಿಭಾವಿಸಿ ಸ್ತುತಿಸುತ್ತದೆಯಾದರೂ ನಂತರದ ಚರಣಗಳಲ್ಲಿ ಈ ತಾಯಿ ಹಿಂದೂಗಳು ಆರಾಧಿಸುವ ಕಾಳಿಯಾಗುತ್ತದೆ, ದುರ್ಗೆಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸಂಪೂರ್ಣ ಆಯುಧಪಾಣಿಯಾಗಿ ಯುದ್ಧ ಸನ್ನದ್ಧಳಾಗಿ ತನ್ನ ಮಕ್ಕಳಿಗೆ ಯುದ್ಧ ಮಾಡಲು ಕರೆಕೊಡುತ್ತಾಳೆ. ಯಾರ ಮೇಲೆ? 'ಆನಂದ ಮಠ' ಕಾದಂಬರಿ ಸ್ಪಷ್ಟ ಪಡಿಸುವಂತೆ ಮುಸ್ಲಿಮರ ಮೇಲೆ ಹಿಂದೂಗಳು ಯುದ್ಧ ಸಾರುವುದಕ್ಕೆ ಸ್ಫೂರ್ತಿ ಕೊಡುವ ಯುದ್ಧಘೋಷವೇ 'ವಂದೇ ಮಾತರಂ'!

ದೇಶವನ್ನು ದೇವರಂತೆ, ಅದೂ ಹಿಂದೂ ದೇವರಂತೆ ಪರಿಭಾವಿಸುವ ಬಗ್ಗೆ ಮುಸ್ಲಿಮರಿಗೆ ಆಕ್ಷೇಪಣೆ ಇದ್ದರೆ ಅದರಲ್ಲಿ ತಪ್ಪೇನು? ಅದರ ಹಿಂದೆ ಎಲ್ಲಾ ಧರ್ಮೀಯರಿಗೂ ಸೇರಿದ ಈ ದೇಶವನ್ನು ಕೇವಲ ಹಿಂದೂ ಧರ್ಮೀಯರ ಸ್ವತ್ತೆಂಬಂತೆ ಚಿತ್ರಿಸುವ ರಾಜಕಾರಣವನ್ನು ಕಂಡರೆ ಅದರಲ್ಲಿ ತಪ್ಪೇನಿದೆ? ದೇಶಭಕ್ತಿಗೂ, ಧರ್ಮಕ್ಕೂ ನಂಟಿಲ್ಲದೆ ಈ ದೇಶದ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಈ ದೇಶದ ಮುಸ್ಲಿಮರು ಧಾರ್ಮಿಕವಾಗಿ ಇಸ್ಲಾಮನ್ನು ಅನುಸರಿಸುತ್ತಲೇ ಯಾವ ಹಿಂದೂಗಳಿಗೂ ಕಮ್ಮಿಯಿಲ್ಲದಷ್ಟು

ಚಾರ್ವಾಕ

ಶಿವಸುಂದರ್

ದೇಶಭಕ್ತರಾಗಿಯೇ ಹೋರಾಟ ನಡೆಸಿದ್ದರು. ಆದರೆ ದೇಶಭಕ್ತಿ ಬೇರೆ. ಧರ್ಮ ಶ್ರದ್ಧೆ ಬೇರೆ. ಒಂದು ಪ್ರಜಾತಾಂತ್ರಿಕ ದೇಶದಲ್ಲಿ ಹಲವು ಬಗೆಯ ಧಾರ್ಮಿಕ ಶ್ರದ್ಧೆಯನ್ನು ಆಚರಿಸುವ ಹಕ್ಕು ಇದ್ದೇ ಇರುತ್ತದೆ, ಭಾರತದ ಸಂವಿಧಾನ ಸಹ ಈ ದೇಶದ ನಾಗರಿಕರಿಗೆ ತಮಗಿಷ್ಟ ಬಂದ ಧಾರ್ಮಿಕ ಶ್ರದ್ಧೆಯನ್ನು ಆಚರಿಸುವ ಹಕ್ಕನ್ನು ನೀಡುತ್ತದೆ.

ಇಸ್ಲಾಮ್ ಶ್ರದ್ಧೆಯು ಏಕದೇವೋಪಾಸನೆಯಲ್ಲಿ ನಂಬಿಕೆಯಿಡುತ್ತದೆ ಮತ್ತು ವಿಗ್ರಹಾರಾಧನೆಯನ್ನು ವಿರೋಧಿಸುತ್ತದೆ. ಹೀಗಾಗಿ 'ವಂದೇ ಮಾತರಂ'ನಲ್ಲಿ ಪ್ರತಿನಿಧಿಸಲ್ಪಟ್ಟಿರುವ ದೈವದ ಕಲ್ಪನೆ ಮತ್ತು ಅದರ ಸ್ತುತಿ ಇಸ್ಲಾಮಿಕ್ ನಂಬಿಕೆಗಳಿಗೆ ವಿರುದ್ಧವಾಗುತ್ತದೆ. ಆದ್ದರಿಂದಲೇ ಒಂದು ಸೆಕ್ಯುಲಾರ್ ದೇಶದ ಲಾಂಛನಗಳು ಧರ್ಮಾತೀತವಾಗಿರಬೇಕು. ಆದ್ದರಿಂದಲೇ 'ವಂದೇ ಮಾತರಂ' ಹಾಡಲು ಕೆಲವು ಮುಸ್ಲಿಮರಿಗಿರಬಹುದಾದ ಆಕ್ಷೇಪಣೆಯನ್ನು 'ವಂದೇ ಮಾತರಂ'ನಲ್ಲಿರುವ ಹಿಂದೂ ಧರ್ಮ ಸೂಚಕಗಳಲ್ಲಿ ಕಾಣಬೇಕೇ ವಿನಃ ಮುಸ್ಲಿಮರ ದೇಶಭಕ್ತಿಯಲ್ಲಲ್ಲ.



ಆದರೆ ವಸಾಹತುಶಾಹಿ ವಿರೋಧೀ ಹೋರಾಟದಲ್ಲಿ ಲಕ್ಷಾಂತರ ಮಂದಿ ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಸಹ 'ವಂದೇ ಮಾತರಂ' ಘೋಷಿಸುತ್ತಾ ಭಾಗವಹಿಸಿದ್ದು ನಿಜ. ಆಗ ಆ ಹೋರಾಟಗಾರರ ಕಲ್ಪನೆಯಲ್ಲಿ 'ವಂದೇ ಮಾತರಂ' ಹಾಡು ಒಂದು ಅಮೂರ್ತವಾದ ಸ್ವಾತಂತ್ರ್ಯದ ಆಶಯವಾಗಿತ್ತಷ್ಟೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ 'ವಂದೇ ಮಾತರಂ' ಹಾಡಿದವರ ದೇಶಭಕ್ತಿ ಹೇಗೆ ಪ್ರಶ್ನಾತೀತವಾಗಿರಲಿಲ್ಲವೋ 'ಅಲ್ಲಾ ಹೋ ಅಕ್ಬರ್' ಎಂದವರ ರಾಷ್ಟ್ರಭಕ್ತಿಯೂ ಪ್ರಶ್ನಾತೀತವಾಗಿರಲಿಲ್ಲ. ಆದರೂ 'ಅಲ್ಲಾ ಹೋ ಅಕ್ಬರ್' ಎಷ್ಟು ಧರ್ಮ ಸೂಚಕವೋ 'ವಂದೇ ಮಾತರಂ' ಸಹ ಅಷ್ಟೇ ಧರ್ಮ ಸೂಚಕ. ಆದ್ದರಿಂದಲೇ ಒಂದು ಸೆಕ್ಯುಲಾರ್ ದೇಶದಲ್ಲಿ 'ಅಲ್ಲಾ ಹೋ ಅಕ್ಬರ್' ಸಹ ದೇಶಭಕ್ತಿ ಸೂಚಕ ಘೋಷಣೆಯಾಗಬಾರದು. 'ವಂದೇ ಮಾತರಂ' ಸಹ ದೇಶ ಭಕ್ತಿ ಸೂಚಕ ಘೋಷಣೆಯಾಗಬಾರದು.

ಇವೆಲ್ಲದರಾಚೆಗೆ ಉಳಿಯುವ ಅಸಲಿ ಪ್ರಶ್ನೆಯೇನೆಂದರೆ 'ವಂದೇ ಮಾತರಂ' ನಿಜಕ್ಕೂ ಬ್ರಿಟಿಷ್ ವಸಾಹತುಶಾಹಿ ವಿರೋಧೀ ಸ್ವಾತಂತ್ರ್ಯಪ್ರೇಮೀ ಗೀತೆಯೋ ಅಥವಾ ಕೇವಲ ಮುಸ್ಲಿಂ ವಿರೋಧಿ ಮತ್ತು ಬ್ರಿಟಿಷ್ ಓಲೈಕೆಯನ್ನೂ ಮಾಡುವ ಹಿಂದುತ್ವ ರಾಜಕಾರಣದ ಗೀತೆಯೋ ಎಂಬುದು?

'ವಂದೇ ಮಾತರಂ' ಹಾಡನ್ನು ಬಂಗಾಳದ ಪ್ರಸಿದ್ಧ ಸಾಹಿತಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರವರು 1870ರಲ್ಲೇ ರಚಿಸಿದರೂ ಅದು ಈಗಿರುವ ರೂಪದಲ್ಲಿ ತಿದ್ದುಪಡಿಗೊಂಡು ಅವರ 'ಆನಂದ ಮಠ' ಕಾದಂಬರಿಯಲ್ಲಿ ಸೇರ್ಪಡೆಯಾದದ್ದು 1881ರಲ್ಲಿ. 'ಆನಂದ ಮಠ' ಕಾದಂಬರಿಯ ತಿರುಳನ್ನು ಅರ್ಥಮಾಡಿಕೊಳ್ಳದೆ 'ವಂದೇ ಮಾತರಂ' ಗೀತೆಯನ್ನಾಗಲೀ, ಅದನ್ನು ಕಡ್ಡಾಯ ಮಾಡಲು ಈಗ 'ಚಳವಳಿ' ಮಾಡುತ್ತಿರುವ ಹಿಂದೂತ್ವವಾದಿಗಳ ನಿಜವಾದ ಉದ್ದೇಶವನ್ನಾಗಲೀ ಅರ್ಥಮಾಡಿಕೊಳ್ಳಲಾಗುವುದಿಲ್ಲ. 'ಆನಂದ ಮಠ' ಕಾದಂಬರಿ ಬ್ರಿಟಿಷರ ಆಡಳಿತದಿಂದಾಗಿ ಬಂಗಾಳವು ಹಿಂದೆಂದೂ ಕಾಣದಷ್ಟು ತೀವ್ರವಾಗಿ ಬರಗಾಲಕ್ಕೆ ತುತ್ತಾಗಿದ್ದ ಕಾಲಘಟ್ಟದಿಂದ ಪ್ರಾರಂಭವಾಗುತ್ತದೆ. ಬರಗಾಲದಿಂದ ತನ್ನ ಹಿಂದಿನ ಎಲ್ಲಾ ವೈಭವವನ್ನು ಕಳೆದುಕೊಂಡು ಹೆಂಡತಿ ಮತ್ತು ಮಗಳೊಂದಿಗೆ ಬದುಕನ್ನು ಅರಸುತ್ತಾ ಗುಳೆ ಹೊರಡುವ ಬ್ರಾಹ್ಮಣ ಭೂಮಾಲಿಕ ಮಹೇಂದ್ರ ಇದರ ಕಥಾನಾಯಕ. ಆದರೆ ಮಹೇಂದ್ರ ಇಲ್ಲಿ ಕಳೆದು ಹೋದ ಹಿಂದೂ ಬ್ರಾಹ್ಮಣ ವೈಭವಕ್ಕೆ ಪ್ರತಿನಿಧಿಯಷ್ಟೆ. ಹೀಗಾಗಿ ಮತ್ತೆ ಆ ವೈಭವವನ್ನು ಗಳಿಸಿಕೊಳ್ಳುವುದು ಹೇಗೆ ಎಂಬುದೇ 'ಆನಂದ ಮಠ'ದ ನಿಜವಾದ ಕಥೆ. ಇಲ್ಲಿ ವೈಭವ ಕಿತ್ತುಕೊಂಡವರು ಮುಸ್ಲಿಮ್ ದೊರೆಗಳು. ಹೀಗಾಗಿ ಈ ದೇಶದ ಪ್ರಧಾನ ಶತ್ರುಗಳು ಮುಸ್ಲಿಮರೆಂಬುದೇ ಕಾದಂಬರಿಯ ಸಂದೇಶ. ಆದ್ದರಿಂದಲೇ ಕಾದಂಬರಿಯು ಬರಗಾಲದ ಬವಣೆ, ರೈತಾಪಿಗಳು ಇರುವೆಗಳಂತೆ ಸಾಯುತ್ತಿರುವ ದೃಶ್ಯಗಳಿಂದ ಪ್ರಾರಂಭವಾದರೂ ಅವೆಲ್ಲವೂ ನಂತರ ಸಂಪೂರ್ಣ ಮರೆಯಾಗಿಬಿಡುತ್ತದೆ. ಅದೇ ರೀತಿ ಈ ಬರಗಾಲಕ್ಕೆ ಕಾರಣವಾದ ಬ್ರಿಟಿಷ್ ಆಡಳಿತದ ಪ್ರಸ್ತಾಪವೂ ಕಾದಂಬರಿಯಲ್ಲಿ ಬರುವುದಿಲ್ಲ, ಮುಸ್ಲಿಂ ದರೋಡೆಕೋರರು ಮತ್ತು ಮುಸ್ಲಿಂ ನವಾಬರ ದಾಳಿ ಇವೆರಡರ ವಿರುದ್ಧ ಸಮರ ಸಾರಲು ಹಿಂದೂಗಳು ಸಂಸಾರವನ್ನು ತೊರೆದು ಸನ್ಯಾಸಿಗಳಾಗಿ ಸಶಸ್ತ್ರ ಬಂಡಾಯ ಹೂಡಿರುತ್ತಾರೆ. ಮಹೇಂದ್ರನನ್ನು ಈ ಬಂಡಾಯದಲ್ಲಿ ಸೇರುವಂತೆ ಮಾಡಲು ಆತನನ್ನು ಗುಪ್ತ ಗುಹೆಯಲ್ಲಿ ಕರೆದುಕೊಂಡು ದೇವಿ-ಭಾರತ ಮಾತೆ-ಯ ದರ್ಶನ ಮಾಡಿಸಲಾಗುತ್ತದೆ. ಆ ದೇವಿಯ ಮುಂದೆ ಮುಸ್ಲಿಮರನ್ನು ಕೊಂದುಹಾಕಿ ಈ ದೇಶವನ್ನು ವಿಮೋಚನೆ ಮಾಡುವ ವೀರ ಪ್ರತಿಜ್ಞೆಯ ಭಾಗವಾಗಿಯೇ 'ವಂದೇ ಮಾತರಂ' ಹಾಡನ್ನು ಹಾಡಲಾಗುತ್ತದೆ. 'ವಂದೇ ಮಾತರಂ' ಹಾಡುತ್ತಲೇ ಮಹೇಂದ್ರನಂಥವರು ಮುಸ್ಲಿಮರ ಮಾರಣಹೋಮಕ್ಕೆ ಸಜ್ಜಾಗುತ್ತಾರೆ. ಇದಕ್ಕೆ ಪೂರಕವಾಗಿ ಈ ಬರಗಾಲದ ಬವಣೆಗೆ ಹಿಂದೂಗಳಷ್ಟೆ ಮುಸ್ಲಿಮ್ ರೈತರು ಸಹ ತುತ್ತಾಗಿ ಇರುವೆಗಳಂತೆ ಸಾಯುತ್ತಿದ್ದರೂ ಇಡೀ ಮುಸ್ಲಿಂ ಸಮುದಾಯವನ್ನೇ ಹಿಂದೂಗಳ ಬವಣೆಗೆ ಕಾರಣವೆಂಬಂತೆ ಚಿತ್ರಿಸಲಾಗಿದೆ. ಹೀಗೆ ಕಾದಂಬರಿ ಮೊದಲಿನಿಂದಲೂ ಇಡೀ ಮುಸ್ಲಿಮ್ ಸಮುದಾಯವನ್ನೇ ದೇಶದಿಂದ ಬಟ್ಟೋಡಿಸುವಂತೆ ಮಾಡುವುದನ್ನು ತನ್ನ ಗುರಿಯನ್ನಾಗಿರಿಸಿಕೊಳ್ಳುತ್ತದೆ. ಕಾದಂಬರಿಯ ನಾಯಕನಾದ ಸತ್ಯಾನಂದ ಘೋಷಿಸುವಂತೆ "ನಮಗೆ ಅಧಿಕಾರ ಬೇಕಿಲ್ಲ. ನಮ್ಮ ಉದ್ದೇಶ ಎಲ್ಲಾ ಮುಸ್ಲಿಮರನ್ನು ಕೊಂದುಹಾಕುವುದು. ಏಕೆಂದರೆ ಅವರು ದೇವರ ಶತ್ರುಗಳು!" ಇದೇ ಆ ಕಾದಂಬರಿಯ ಪ್ರಧಾನ ಧಾತು. "ಸನಾತನ ಧರ್ಮದ ಪುನರುತ್ಥಾನವೇ" ತಮ್ಮ ಗುರಿಯೆಂದು ಘೋಷಿಸುವ 'ಆನಂದ ಮಠ'ದ ಬಂಡಾಯಗಾರರು ತಮ್ಮನ್ನು ತಾವು ಸನಾತನಿಗಳೆಂದೇ ಗುರುತಿಸಿಕೊಳ್ಳುತ್ತಾರೆ.

ಹೀಗೆ 'ಆನಂದ ಮಠ' ಕಾದಂಬರಿಯಾಗಲೀ, 'ವಂದೇ ಮಾತರಂ' ಗೀತೆಯಾಗಲೀ ಸನಾತನ ಹಿಂದೂ ಬ್ರಾಹ್ಮಣ್ಯದ ಪುನರುತ್ಥಾನವನ್ನು ಆಶಯವಾಗಿಯುಳ್ಳ, ಮುಸ್ಲಿಮರೇ ಈ ದೇಶದ ವಿನಾಶಕ್ಕೆ ಕಾರಣ ಎಂದು ಘೋಷಿಸುತ್ತಾ ಸಾಮಾನ್ಯ ಮುಸ್ಲಿಮರನ್ನು ಕೊಚ್ಚಿಕೊಲ್ಲಬೇಕೆಂಬ ಗುರಿಯುಳ್ಳ ದ್ವೇಷಸಿಕ್ತ ಕಾದಂಬರಿಯಾಗಿದೆ. ಆದ್ದರಿಂದಲೇ ಇದು ದ್ವೇಷವನ್ನೇ ಉಸಿರಾಡುವ ಕೋಮುವಾದಿ ಹಿಂದುತ್ವ ರಾಜಕಾರಣ ಮಾಡುತ್ತಿರುವ ಇಂದಿನ ಹಿಂದುತ್ವವಾದಿಗಳಿಗೆ ಆಪ್ಯಾಯಮಾನವಾಗಿಯೂ ಕಾಣಿಸುತ್ತದೆ!

ಆದರೂ 'ಆನಂದ ಮಠ' ಕಾದಂಬರಿಯನ್ನೂ ಮತ್ತು 'ವಂದೇ ಮಾತರಂ' ಗೀತೆಯನ್ನೂ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಆಶಯ ಹೊಂದಿರುವ ಕೃತಿಗಳೆಂದು ಪ್ರಚಾರ ಮಾಡುವ ಸನ್ನಾಹಗಳು ನಡೆಯುತ್ತಿವೆ. ನಿಜಕ್ಕೂ 'ಆನಂದ ಮಠ' ಕಾದಂಬರಿ ವಸಾಹತುಶಾಹಿ ವಿರೋಧೀ ಆಶಯಗಳನ್ನು ಹೊಂದಿತ್ತೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಕಾದಂಬರಿಯಲ್ಲಿ ಬ್ರಿಟಿಷರನ್ನೂ ಹೇಗೆ ಪರಿಗಣಿಸಲಾಗಿದೆಯೆಂಬುದನ್ನು ಮತ್ತು ಈ ಕಾದಂಬರಿಯನ್ನು ಮತ್ತು ಕಾದಂಬರಿಕಾರರಾದ ಬಂಕಿಮಚಂದ್ರರನ್ನು ಬ್ರಿಟಿಷ್ ಆಡಳಿತ ಹೇಗೆ ನಡೆಸಿಕೊಂಡಿತು ಎಂಬುದನ್ನೂ ನೋಡಿದರೆ ಗೊತ್ತಾಗುತ್ತದೆ.

ಈ ಮೊದಲೇ ಹೇಳಿದಂತೆ ಬಂಗಾಳ ಕಂಡುಕೇಳರಿಯದ ಬರಗಾಲಕ್ಕೆ ಬ್ರಿಟಿಷರು ಜಾರಿಗೆ ತಂದಿದ್ದ ಕೃಷಿ ಮತ್ತು ಆಡಳಿತ ನೀತಿಗಳೇ ಕಾರಣವಾಗಿದ್ದವು. ಆ ನೀತಿಗಳನ್ನು ಜಾರಿಗೆ ತಂದವರು ಮುಸ್ಲಿಮ್ ನವಾಬರು. ಆದರೆ ಕಾದಂಬರಿಯಲ್ಲಿ ಬ್ರಿಟಿಷರ ವಿರುದ್ಧ ಸೊಲ್ಲೇ ಕೇಳಿಬರುವುದಿಲ್ಲ. ಉದಾಹರಣೆಗೆ ಮುಸ್ಲಿಂ ನವಾಬನ ಜೊತೆ ಬ್ರಿಟಿಷ್ ಸೈನ್ಯ ಸೇರಿಕೊಂಡಾಗ ಕಾದಂಬರಿಯ ನಾಯಕನಿಗೆ ಬಂಡಾಯಗಾರರು "ನಮಗೆ ಬ್ರಿಟಿಷರು ಶತ್ರುಗಳಲ್ಲ, ಅವರು ಗೆಲ್ಲಲಿ" ಎಂದು ಆದೇಶಿಸುತ್ತಾರೆ. ಕಾದಂಬರಿಯ ಅಂತಿಮದಲ್ಲಿ ನವಾಬರನ್ನು ಸಂಪೂರ್ಣವಾಗಿ ಸೋಲಿಸಿ ಸನಾತನ ಬಂಡಾಯ ಜಯಗಳಿಸಿದ ಮೇಲೆ ಒಂದು ಅಶರೀರ ವಾಣಿಯು ಕಾದಂಬರಿಯ

▶▶▶15

ಹೆಣ್ಣೆಂಬ ಮಾತ್ರಕ್ಕೆ...



ಕಂಡಹಾಗೆ


■ ಗೌರಿ ಲಂಕೇಶ್

...ಯಡಿಯೂರಪ್ಪನವರ ಸಚಿವ ಸಂಪುಟದಿಂದ ...ಭಾ ಕರಂದ್ಲಾಜೆಯ ಉಚ್ಚಾಟನೆಯನ್ನು ಹಲವರು ...ದಿಂದ ನೋಡಿ ಆಕೆ ಮಹಿಳೆ ಆಗಿರುವುದರಿಂದಲೇ ...ನ್ನು ಬಲಿಕೊಡಲಾಯಿತು ಎಂದೂ, ಆಕೆಗೆ ಆಗಿರುವ ಅನ್ಯಾಯದ ವಿರುದ್ಧ ಮಹಿಳಾ ಸಂಘಟನೆಗಳು ...ಟಿಸಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆದರೆ ನಿಜವಾಗಲೂ ಶೋಭಾ ಪ್ರಕರಣದಲ್ಲಿ ಲಿಂಗ ...ನ್ನು ನಡೆದಿದೆಯೇ ಎಂದು ನೋಡಬೇಕಿದೆ.

ಯಡಿಯೂರಪ್ಪ ಮತ್ತು ಶೋಭಾ ನಡುವಿನ ಸಂಬಂಧ ...ಹದ್ದೇ ಆಗಿರಲಿ ಅದು ಅವರ ವೈಯಕ್ತಿಕ ವಿಚಾರ. ...ರೆ ಏಳೆಂಟು ವರ್ಷಗಳ ಹಿಂದೆ ಯಾರೂ ಕಂಡರಿಯ ಕೇಳರಿಯದಿದ್ದ ಶೋಭಾ ರಾಜಕೀಯ ವಲಯದಲ್ಲಿ ...ತ್ತರಕ್ಕೆ ಬೆಳೆದಿದ್ದು ಯಡಿಯೂರಪ್ಪನ ಕೃಪೆಯಿಂದಲೇ ...ದರ ಬಗ್ಗೆ ಯಾವ ಅನುಮಾನಗಳೂ ಇಲ್ಲ. ಈ ...ರೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ...ಳಾ ಮೋರ್ಚಾದಂತಹ ಹಿಂದೂತ್ವವಾದಿ ...ಟನೆಗಳಲ್ಲಿ ಕಾರ್ಯಕರ್ತೆಯಾಗಿ ಕೆಲಸ ಮಾಡಿಕೊಂಡಿದ್ದ ...ಭಾರನ್ನು ಇದ್ದಕ್ಕಿದ್ದಂತೆ ರಾಜ್ಯ ಬಿಜೆಪಿಯ ಪ್ರಧಾನ ...ರ್ಯದರ್ಶಿ ಮಾಡಿದ್ದೂ ಯಡಿಯೂರಪ್ಪನವರೇ. ಆಗ ...ೇಕೆ, ಈಕೆಗಿಂತ ಬಿಜೆಪಿಗಾಗಿ ಹೆಚ್ಚು ಕೆಲಸ ...ದಿರುವವರಿರಲಿಲ್ಲವೇ ಎಂಬ ಪ್ರಶ್ನೆಗಳು ಉದ್ಭವವಾಗಿ ಅವುಗಳ ಬಗ್ಗೆ ಯಡಿಯೂರಪ್ಪ ಕೇರ್ ಮಾಡಿರಲಿಲ್ಲ. ...ಯೇ ಶೋಭಾರನ್ನು 2004ರಲ್ಲಿ ಎಂಎಲ್‌ಸಿ ...ದಿದ್ದೂ ಯಡಿಯೂರಪ್ಪನವರೇ. ಆಗಲೂ ಅದರ ಹಲವರು ತಕರಾರೆತ್ತಿದ್ದರೂ ರಾಜ್ಯದ ಉಪಮುಖ್ಯ ...ತ್ರಿಯಾಗಿದ್ದ ಯಡಿಯೂರಪ್ಪನನ್ನು ನೇರವಾಗಿ ಪ್ರಶ್ನಿಸುವ ...ತ್ತು ಬಿಜೆಪಿಯಲ್ಲಿ ಯಾರಿಗೂ ಇರಲಿಲ್ಲ.

...ನ್ನು ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ...ದರೂ ಮಾಡಿ ಶೋಭಾರನ್ನು ಗೆಲ್ಲಿಸಲೇಬೇಕೆಂದೂ, ...ಾರ ಬಂದಾಗ ಆಕೆಯನ್ನು ಮಂತ್ರಿ ಮಾಡಲೇ ...ದೂ ಯಡಿಯೂರಪ್ಪ ನಡೆಸಿದ ಕಸರತ್ತುಗಳು ...ಷ್ಟಲ್ಲ. ಒಂದೆಡೆ ಆಕೆಯನ್ನು ಬೆಂಗಳೂರಿನ ...ವಂತಪುರದಿಂದ ಚುನಾವಣಾ ಕಣಕ್ಕೆ ಇಳಿಸಿದರೆ, ...ಂದೆಡೆ ಪುತ್ತೂರಿನಿಂದ ಶಕುಂತಲಾ ಶೆಟ್ಟಿ ಸ್ಪರ್ಧಿಸದಂತೆ ...ಡಿಕೊಂಡಿದ್ದರು ಯಡಿಯೂರಪ್ಪ. ಅನಂತರ ...ಭಾರನ್ನು ಗ್ರಾಮೀಣಾಭಿವೃದ್ಧಿ ಸಚಿವೆಯನ್ನಾಗಿಸಿದ್ದು, ಹಿರಿಯ ನಾಯಕರಿದ್ದರೂ ಮುಖ್ಯಮಂತ್ರಿಯ ...ವ ಆಕೆಯೇ ಸೀನಿಯರ್ ಎಂಬಂತೆ ಬಿಂಬಿಸಿದ್ದು, ...ೂರಿನ ಉಸ್ತುವಾರಿ ಸಚಿವೆಯಾಗಿಸಿ ಅಲ್ಲಿನ ಬಿಜೆಪಿ ...ಯಕರನ್ನು ಮೂಲೆಗುಂಪು ಮಾಡಿದ್ದು... ಈಗ ...ಗೂ ಗೊತ್ತಿರುವ ಸಂಗತಿಗಳೇ. ಆದರೆ ಇವೆಲ್ಲವು ...ಂದಿಗೆ ಮುಖ್ಯಮಂತ್ರಿಗಳ ಗಮನಕ್ಕೆ ಬರಬೇಕಿದ್ದ ...ರಿ ಕಡತಗಳು ಶೋಭಾರ ಕೈ ಸೇರುತ್ತಿದ್ದದ್ದು, ಪಕ್ಷದಲ್ಲಿನ ...ವೈರಿಗಳ ವಿರುದ್ಧದ ಯಡಿಯೂರಪ್ಪ ಕಾರ್ಯಾಚರಣೆ ...ಲ್ಲಿ ಶೋಭಾ ಭಾಗವಹಿಸುತ್ತಿದ್ದದ್ದು, ಇತರೆ ಸಚಿವರ ...ಖೆಗಳಲ್ಲಿ ಶೋಭಾ ಮೂಗು ತೂರಿಸುತ್ತಿದ್ದುದ್ದು, ...ಎಲ್ಲವೂ ನಿಜವೇ. ಆದರೆ ಶೋಭಾ ಇದನ್ನೆಲ್ಲಾ ...ಸುತ್ತಿದ್ದದ್ದು ಓರ್ವ ಮಹಿಳೆಯಾಗಿ ಅಲ್ಲ, ಬದಲಾಗಿ ...ಡಿಯೂರಪ್ಪನ ಪ್ರಾಕ್ಸಿ ಆಗಿ. ಆದ್ದರಿಂದ ಇವತ್ತು ಆಕೆ ...ಸಚಿವ ಸ್ಥಾನ ಕಳೆದುಕೊಂಡಿದ್ದರೆ ಅದಕ್ಕೆ ಕಾರಣ ಆಕೆ ...ಳೆ ಎಂಬುದಲ್ಲ, ಬದಲಾಗಿ ಆಕೆ ಯಡಿಯೂರಪ್ಪನ ...ತ್ರ ರಾಜಕೀಯದಲ್ಲಿ ಭಾಗಿಯಾಗಿದ್ದಳು ಎಂಬುದು...



ಈಗ ಸ್ಪಷ್ಟವಾಗಿರುವಂತೆ ಬರುವ ದಿನಗಳಲ್ಲಿ ಗಣಿ ರೆಡ್ಡಿಗಳ ಗ್ಯಾಂಗ್ ಯಡಿಯೂರಪ್ಪನವರ ಕೈ, ಕಾಲು, ಬಾಲ ಎಲ್ಲವನ್ನು ಕತ್ತರಿಸಿ ಹಾಕಲಿದ್ದಾರೆ. ಹಾಗೆ ಮೊದಲು ಕತ್ತರಿಸಿ ಹಾಕಲ್ಪಟ್ಟ ಯಡಿಯೂರಪ್ಪನ ಬಲಗೈ ಅಷ್ಟೇ ಶೋಭಾ.

ಮೊನ್ನೆ ಎನ್‌ಡಿಟಿವಿ ಚಾನೆಲ್‌ನ ಚರ್ಚೆಯೊಂದರಲ್ಲಿ ಶೋಭಾ "ಮಹಿಳೆಯರಿಗೆ ರಾಜಕೀಯದಲ್ಲಿ ಅನ್ಯಾಯವಾಗುತ್ತಿದೆ, ಇದನ್ನು ತಡೆಯಬೇಕೆಂದರೆ ಇನ್ನೂ ಹೆಚ್ಚಿನ ಮಹಿಳೆಯರು ರಾಜಕಾರಣವನ್ನು ಪ್ರವೇಶಿಸಬೇಕು" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅದೇ ಚರ್ಚೆಯಲ್ಲಿ ನಾನೂ ಭಾಗವಹಿಸಿದ್ದರೂ ಅಂದು ಸಮಯದ ಅಭಾವದಿಂದ ಶೋಭಾರನ್ನು ಕೇಳಬಯಸಿದ್ದ ಪ್ರಶ್ನೆಯನ್ನು ಕೇಳಲಾಗಿರಲಿಲ್ಲ. ಅದೇನೆಂದರೆ : ಇವತ್ತು ನಿಮಗೆ ಅನ್ಯಾಯವಾಗಿದೆ ಎಂದು ಮಹಿಳೆಯರೆಲ್ಲ ಈ ಅನ್ಯಾಯವನ್ನು ಪ್ರತಿಭಟಿಸಬೇಕು ಎನ್ನುತ್ತಿದ್ದೀರಿ. ಆದರೆ ಕಳೆದ ವರ್ಷ ನಿಮ್ಮ ಹಿತರಕ್ಷಣೆಗಾಗಿಯೇ ಬಿಜೆಪಿಯಲ್ಲಿ ನಿಮಗಿಂತ ಹಿರಿಯರಾಗಿದ್ದ ಶಕುಂತಲಾ ಶೆಟ್ಟಿಗೆ ಟಿಕೆಟ್ ನಿರಾಕರಿಸುವ ಮೂಲಕ ಆಕೆಗೆ ಅನ್ಯಾಯ ಮಾಡಿದಾಗ ನೀವೇಕೆ ಸುಮ್ಮನಿದ್ದಿರಿ? ಯಾಕೆ ಆಕೆಯ ಪರವಹಿಸಿ ಪ್ರತಿಭಟಿಸದೆ ತೆಪ್ಪಗಿದ್ದಿರಿ?

ಇನ್ನು ರಾಜಕೀಯದಲ್ಲಿ-ಅದರಲ್ಲೂ ಮಹಿಳಾ ವಿರೋಧಿ ಆರೆಸ್ಸೆಸ್ ತುಂಡಾದ ಬಿಜೆಪಿಯಲ್ಲಿ-ಮಹಿಳೆಯರೇ ಬಲಿಯಾಗುತ್ತಾರೆ. ಅದಕ್ಕೆ ಉಮಾಭಾರತಿ, ವಸುಂಧರ ರಾಜೆ ಮತ್ತು ಶೋಭಾ ಉದಾಹರಣೆಗಳು ಎಂಬ ವಾದಕ್ಕೆ ಬರೋಣ.

ಉಮಾಭಾರತಿ ಓರ್ವ ಮಹಿಳೆ ಎಂಬುದು ಎಷ್ಟು ನಿಜವೋ, ಅಷ್ಟೇ ನಿಜ ಆಕೆ ಪ್ರಮೋದ್ ಮುತಾಲಿಕ್‌ನನ್ನು ಮೀರಿಸುವಂತೆ ಕೆಂಡಕಾರಬಲ್ಲಳು ಎಂಬುದು ಕೂಡ. ಅದಕ್ಕೆ ಸಾಕ್ಷಿ ಆಕೆ ನಮ್ಮ ಹುಬ್ಬಳ್ಳಿಯ ಈದ್ಗಾ ಮೈದಾನ ವಿವಾದದಲ್ಲಿ ಎಬ್ಬಿಸಿದ ದಾಂಧಲೆ ಮತ್ತು ಅದರಿಂದಾಗಿ ಹೆಣವಾದ ಹಲವಾರು ಅಮಾಯಕರು.

ಉಮಾಭಾರತಿ ಮಧ್ಯಪ್ರದೇಶದ ಮುಖ್ಯಮಂತ್ರಿಯಾದ ನಂತರ ಆಕೆಯ ಆಡಳಿತ ಅದಕ್ಷತೆಯಿಂದ ಕೂಡಿತ್ತಲ್ಲದೆ, ಚುನಾವಣೆಗಳ ಮುನ್ನ ಜನರಿಗೆ ರಸ್ತೆಗಳನ್ನು ನಿರ್ಮಿಸುತ್ತೇನೆಂದು ಭರವಸೆ ನೀಡಿದ್ದ ಉಮಾ ಭಾರತಿ ಅಧಿಕಾರ ಸಿಕ್ಕನಂತರ ಜನರಿಗೆ ದನದ ಕೊಟ್ಟಿಗೆಗಳನ್ನು ನಿರ್ಮಿಸಲು ಮುಂದಾಗಿದ್ದಳು. ವಿದ್ಯುತ್ ನೀಡುತ್ತೇನೆಂದಿದ್ದರೂ, ಗೋಬರ್ ಗ್ಯಾಸ್‌ನ ಮಹತ್ವದ ಬಗ್ಗೆ ಪಠಿಸಲಾರಂಭಿಸಿದಳು. ಕುಡಿಯುವ ನೀರನ್ನು ಕೊಡುವ ಬದಲಾಗಿ 'ಗಂಜಲ ಕುಡಿಯಿರಿ, ನಿಮ್ಮ ಆರೋಗ್ಯಕ್ಕೆ ಒಳ್ಳೆಯದು' ಅಂದಳು.

ಕೊನೆಗೆ ಬೇರೆ ಕಾರಣಗಳಿಗೆ ಬಿಜೆಪಿ ನಾಯಕರು ಆಕೆಯನ್ನು ಮುಖ್ಯಮಂತ್ರಿ ಸ್ಥಾನದಿಂದ ಕಿತ್ತೊಗೆದಿದ್ದು ನಿಜವಾದರೂ ಉಮಾಭಾರತಿ ಮಹಿಳೆ ಎಂಬ ಏಕೈಕ ಕಾರಣಕ್ಕೆ ಆಕೆಯ ಎಲ್ಲ ದೋಷಗಳನ್ನು ಮರೆತು ಆಕೆ ಪರ ವಹಿಸಲಾದೀತೇ?

ಇನ್ನು ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದ ವಸುಂಧರ ರಾಜೆಯ ಸರ್ಕಾರ ಕೂಡ ಭ್ರಷ್ಟಾಚಾರದ ಕೂಪವಾಗಿತ್ತು. ಹಾಗಿದ್ದರೂ ಅದನ್ನು ಮರೆತು ಆಕೆ ಮಹಿಳೆ ಎಂಬ ಕಾರಣಕ್ಕೆ ಮಹಿಳಾವಾದಿಗಳು ಆಕೆಯ ವಕಾಲತ್ತು ವಹಿಸಬೇಕೇ?

ಶೋಭಾ ಕರಂದ್ಲಾಜೆ ವಿಷಯಕ್ಕೆ ಬರುವುದಾದರೆ ಈಕೆ ಗ್ರಾಮೀಣಾಭಿವೃದ್ಧಿ ಸಚಿವೆಯಾಗಿ ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇದೆ. ಬದಲಾಗಿ ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ರಾಜ್ಯದೆಲ್ಲೆಡೆ ಯಡಿಯೂರಪ್ಪ ಮತ್ತು ತನ್ನ ಮಾತೇ ನಡೆಯಬೇಕೆಂದು 'ಆಕೆ ಶ್ರಮ ಪಟ್ಟದ್ದೇ ಹೆಚ್ಚು. ಅದಕ್ಕೆ ಉದಾಹರಣೆ ಆಕೆ ಸೃಷ್ಟಿಸಿದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಂಬ ನೂತನ ಹುದ್ದೆ. ಹೆಸರಿಗೆ ಇದು ಗ್ರಾಮ ಪಂಚಾಯತ್ ಅಧಿಕಾರಿ ಎಂದಿದ್ದರೂ, ಆ ಅಧಿಕಾರಿಗೆ ಹಲವಾರು ಗ್ರಾಮಗಳ ಮೇಲೆ ಚುನಾಯಿತ ಪ್ರತಿನಿಧಿಗಳಿಗಿಂತಲೂ ಹೆಚ್ಚು ಅಧಿಕಾರ ಸಿಗಲಿದೆ. ಹಾಗಾಗಿಯೇ ಈ ಹುದ್ದೆಗಳಿಗೆ ಸಂಘಪರಿವಾರದ ಸದಸ್ಯರನ್ನೇ ನೇಮಿಸುವ ತಂತ್ರಕ್ಕೆ ಶೋಭಾ ಕರಂದ್ಲಾಜೆ ಚಾಲನೆ ನೀಡಿದ್ದರು. ಈ ಕ್ರಮದ ಹಿಂದೆ ಮೂರು ಉದ್ದೇಶಗಳು ಅಡಗಿದ್ದವು. ಒಂದು: ಹಿಂದೂತ್ವವಾದಿ ಸಂಘಟನೆಗಳ ಸದಸ್ಯರಿಗೆ ಸರ್ಕಾರಿ ಕೆಲಸ ಸಿಗುವಂತೆ ಮಾಡಿ ತನ್ನ ಆರೆಸ್ಸೆಸ್ ನಿಷ್ಠೆಯನ್ನು ಪ್ರದರ್ಶಿಸುವುದು. ಎರಡು: ಆ ಅಧಿಕಾರಿಗಳ ಮೂಲಕ ಇಡೀ ರಾಜ್ಯದ ಮೇಲೆ ಹಿಡಿತ ಸಾಧಿಸುವುದು. ಮೂರನೆಯದು: ಅದೇ ಅಧಿಕಾರಿಗಳ ಮೂಲಕವೇ ರಾಜ್ಯದೆಲ್ಲೆಡೆ ಆರೆಸ್ಸೆಸಿನ ಕೋಮು ದ್ವೇಷದ ವಿಷವನ್ನು ಹರಡುವುದು.

ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನೇಮಕಾತಿ ಪರೀಕ್ಷೆಯ ಸಮಯದಲ್ಲಿ ಕೆಲವು ಕಡೆ ಪ್ರಶ್ನೆಪತ್ರಿಕೆಗಳು ಬಹಿರಂಗಗೊಂಡು ಕೆಲವರ ಬಂಧನವೂ ಆಯಿತು. ಆದರೆ ಯಾರಿಗೆ ಗೊತ್ತು, ಆ ಪ್ರಶ್ನೆ ಪತ್ರಿಕೆ ಅದೆಷ್ಟು ಚೆಡ್ಡಿಗಳಿಗೆ ಗುಪ್ತವಾಗಿ ರವಾನೆಯಾಗಿದೆ ಎಂದು? ಹಾಗೊಮ್ಮೆ ರಾಜ್ಯದೆಲ್ಲೆಡೆ ಹಿಂದೂತ್ವವಾದಿಗಳೇ ಬಹಳಷ್ಟು ಸಂಖ್ಯೆಯಲ್ಲಿ ನೇಮಕಗೊಂಡರೆ ಅದರಿಂದ ಬರುವ ದಿನಗಳಲ್ಲಿ ರಾಜ್ಯಕ್ಕೆ ದೊಡ್ಡ ಅಪಾಯ ಎದುರಾಗಲಿದೆ.

ಇಂತಹ ಸಾಹಸಕ್ಕೆ ಕೈ ಹಾಕಿದ ಶೋಭಾ ಕರಂದ್ಲಾಜೆ ಓರ್ವ ಮಹಿಳೆ, ಆ ಕಾರಣಕ್ಕೆ ಆಕೆಗೀಗ ಅನ್ಯಾಯವಾಗಿದೆ ಎಂಬ ತರ್ಕ ಅದೆಷ್ಟು ಸರಿ?

ಎಲ್ಲಾ ಧರ್ಮಗಳಲ್ಲಿನ ಮೂಲಭೂತವಾದಿ ಸಂಘಟನೆಗಳನ್ನು ಬೆಂಬಲಿಸುವ ಮಹಿಳೆಯರ ಬಗ್ಗೆಯೇ ನನ್ನಂತಹವರಲ್ಲಿ ಅಪಾರ ಅಸಮಾಧಾನವಿದೆ. ಇನ್ನು ಮಹಿಳೆಯರ ಸ್ಥಾನ ಅಡುಗೆ ಮನೆಯಲ್ಲಿ ಎಂದೇ ನಂಬಿರುವ ಆರೆಸ್ಸೆಸ್ ನೇತೃತ್ವದ ಹಿಂದೂತ್ವವಾದಿ ಸಂಘಟನೆಗಳಲ್ಲಿ ಮಹಿಳೆಯರಿಗೆ ಎಂತಹ ಮಾನ, ಮರ್ಯಾದೆ, ಸ್ಥಾನಗಳು ಸಿಗಬಹುದು? ಅಂತಹ ಸಂಘಟನೆಗಳನ್ನು ಯಾಕೆ ಮಹಿಳೆಯರು ಪ್ರೋತ್ಸಾಹಿಸಿ ಬೆಳೆಯುವುದಕ್ಕೆ ನೆರವಾಗಬೇಕು?

ಇವತ್ತು ತನಗೆದುರಾಗಿರುವ ಪರಿಸ್ಥಿತಿಯನ್ನು ಕಂಡು, "ಇದು ಮಹಿಳೆಗೆ ಆಗಿರುವ ಅನ್ಯಾಯ" ಎಂದು ವ್ಯಾಖ್ಯಾನಿಸುತ್ತಿರುವ ಶೋಭಾ ಕರಂದ್ಲಾಜೆ ಅವರಲ್ಲಿ ನಿಜವಾಗಲೂ ಮಹಿಳೆಯರ ಬಗ್ಗೆ ಕಾಳಜಿ ಇದ್ದಿದ್ದೇ ಆದರೆ, ಮಹಿಳೆಯರಿಗಾಗುವ ಅನ್ಯಾಯವನ್ನು ಪ್ರತಿಭಟಿಸಬೇಕೆನ್ನುವ ಇಚ್ಛೆ ಇದ್ದಿದ್ದೇ ಆದರೆ ಆಕೆ ಮಹಿಳಾ ವಿರೋಧಿಯಾದ ಮನುಸ್ಮೃತಿಯೇ ದೇಶದ ಸಂವಿಧಾನವಾಗಬೇಕೆಂದು ನಂಬಿರುವ ಸಂಘಪರಿವಾರವನ್ನೇ ವಿರೋಧಿಸುತ್ತಿದ್ದರು. ಆದರೆ ಇವತ್ತಿಗೂ ತನ್ನ ನಿಷ್ಠೆ ಆರೆಸ್ಸಿಸಿಗೆ ಎನ್ನುತ್ತಿದ್ದಾರೆ ಶೋಭಾ. ಖಂಡಿತವಾಗಿಯೂ ಶೋಭಾ ಅವರು ಬುದ್ಧಿಮಾಂದ್ಯರಲ್ಲ. ಆದ್ದರಿಂದ ಆಕೆ ಮಾಡುತ್ತಿರುವುದೂ ಅವಕಾಶವಾದಿ ರಾಜಕಾರಣವಲ್ಲವೇ? ಇಂತಹ ವ್ಯಕ್ತಿ ಮಹಿಳೆ ಎಂಬ ಕಾರಣಕ್ಕೆ ವಿನಾಯತಿ ತೋರಿಸಲಾಗುತ್ತದೆಯೇ?

'ಮಹಿಳೆ' ಶೋಭಾ ಕರಂದ್ಲಾಜೆ ಅವರು ಕ್ರಿಶ್ಚಿಯನ್ ನನ್‌ಗಳ ಮೇಲೆ ಭಜರಂಗಿ ಪುಂಡರು ದೈಹಿಕ ದಾಳಿ ಮಾಡಿದಾಗ ಹೇಗೆ ಪ್ರತಿಕ್ರಿಯಿಸಿದರು? ಅದೇ ಸಂಘಪರಿವಾರದವರು ಪಬ್‌ಗಳಲ್ಲಿದ್ದ ಯುವತಿಯರನ್ನು ಹೊಡೆದಾಡಿ ಉರುಳಿಸಿದಾಗ ಏನೆಂದರು? ಕರಾವಳಿಯ ಅಮಾಯಕ ಮುಸಲ್ಮಾನ ಮಹಿಳೆಯರ ಮೇಲೆ ಚೆಡ್ಡಿಗಳು ಮುಗಿಬಿದ್ದಾಗ ಯಾವ ಹೇಳಿಕೆ ನೀಡಿದರು? ಬಿಜೆಪಿಯ ಉಡುಪಿ ಶಾಸಕ ರಘುಪತಿ ಭಟ್ಟ ತನ್ನ ಹೆಂಡತಿ ಪದ್ಮಪ್ರಿಯಳನ್ನು ಆತ್ಮಹತ್ಯೆಗೆ ದೂಡಿದಾಗ ಆಕೆಯ ಸಾವಿನ ಬಗ್ಗೆ ಅನುಕಂಪ ಸೂಚಿಸಿದರೇ?

ಅದೆಲ್ಲ ಬದಿಗಿರಲಿ, ಇವತ್ತು ತನ್ನ ಬಗ್ಗೆಯೇ ಸಾರ್ವಜನಿಕವಾಗಿ ಕೆಟ್ಟದಾಗಿ ಮಾತನಾಡುತ್ತಿರುವ ರೇಣುಕಾಚಾರಿ ಎಂಬ ಬಿಜೆಪಿ ಶಾಸಕನ ನರ್ಸ್ ಜಯಲಕ್ಷ್ಮಿ ಪ್ರಕರಣ ಹೊರಬಿದ್ದಾಗ ಶೋಭಾರ ಮಹಿಳಾ ಪರ ನಿಲುವು ಎಲ್ಲಿ ಹೋಗಿತ್ತು? ಇದೆಲ್ಲದರ ಹಿನ್ನೆಲೆಯಲ್ಲಿ ಯಾವ ಕಾರಣಕ್ಕೆ ಇವತ್ತು ಶೋಭಾರ ಪರ ಮಹಿಳೆಯರು ನಿಲ್ಲಬೇಕು?

ಇವತ್ತು ಶೋಭಾ ಅವರು "ನನ್ನ ಪಕ್ಷದ ಹಿತಾಸಕ್ತಿಗಾಗಿ ನನ್ನ ಸಚಿವೆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ" ಎನ್ನುತ್ತಿರುವುದರಲ್ಲಿ, ಸಾಮಾನ್ಯ ಮಹಿಳೆಯೊಬ್ಬಳು ತನ್ನ ಸಂಸಾರದ ಹಿತರಕ್ಷಣೆಗಾಗಿ ತಾನು ಬಲಿಯಾಗಲು ಸಿದ್ಧ ಎಂಬ ದನಿಯನ್ನು ನೋಡಲೆತ್ನಿಸುವುದು ತಪ್ಪು. ಯಾಕೆಂದರೆ ಶೋಭಾರ ಹೇಳಿಕೆಯಲ್ಲಿ ಅಪ್ಪಟ ರಾಜಕಾರಣಿಯ ವರಸೆ ಅಡಗಿದೆ. ಶೋಭಾರ ಇದೇ ಹೇಳಿಕೆಯನ್ನು ಈ ಹಿಂದೆ ಅದೆಷ್ಟು ಪುರುಷ ರಾಜಕಾರಣಿಗಳೂ ಹೇಳಿದ್ದಾರೆ ಎಂಬುದರ ಬಗ್ಗೆ ಒಂದು ಕ್ಷಣ ಯೋಚಿಸಿದರೆ ಮಹಿಳಾವಾದ ಮತ್ತು ರಾಜಕಾರಣಿಗಳ ಪ್ರವೃತ್ತಿಗಳ ನಡುವಿನ ವ್ಯತ್ಯಾಸ ಅರಿವಾಗುತ್ತದೆ.

ವಾಸ್ತವವಾಗಿ ಶೋಭಾ ಕರಂದ್ಲಾಜೆ ಓರ್ವ ರಾಜಕಾರಣಿ. ಅಧಿಕಾರ ಮತ್ತು ಸ್ಥಾನಮಾನಗಳಿಗಾಗಿ ತನಗೆ ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು ಸಚಿವೆ ಸ್ಥಾನವನ್ನು, ಯಡಿಯೂರಪ್ಪನವರ ಆಪ್ತತೆ ಮತ್ತು ವಿಶ್ವಾಸವನ್ನು ಗಳಿಸಿಕೊಂಡ ವ್ಯಕ್ತಿ. ಇವತ್ತು ರಾಜಕಾರಣವೂ ಒಂದು ವೃತ್ತಿ ಆಗಿರುವುದರಿಂದ ಆಕೆ ಮಾಡಿದ್ದೆಲ್ಲ ಸರಿಯೋ ತಪ್ಪೋ ಎಂಬ ವಿಶ್ಲೇಷಣೆ ಅವರಿಗೇ ಬಿಟ್ಟ ವಿಚಾರ.

ಆದರೆ ಯಡಿಯೂರಪ್ಪರ ಸಚಿವ ಸಂಪುಟದಲ್ಲೂ, ಖಾಸಗಿ ಕಿಚನ್ ಕ್ಯಾಬಿನೆಟ್‌ನಲ್ಲೂ ಅಗ್ರಸ್ಥಾನ ಪಡೆದಿದ್ದರಲ್ಲದೇ ಅವರೊಂದಿಗಿನ ಆಪ್ತತೆಯಿಂದಾಗಿ ಅಪಾರ ಅಧಿಕಾರ ಹೊಂದಿದ್ದ ಶೋಭಾ ಒಂದು ರೀತಿಯಲ್ಲಿ ಯಡಿಯೂರಪ್ಪನ alter ego ಅಥವಾ ಪ್ರಾಕ್ಸಿ ಆಗಿದ್ದರು ಎಂಬುದು ಸತ್ಯ.

ಆ ಕಾರಣಗಳಿಂದಾಗಿಯೇ ಇವತ್ತು ಶೋಭಾ ತಮ್ಮ ಹುದ್ದೆಯನ್ನು ಕಳೆದುಕೊಂಡಿದ್ದಾರೆಯೇ ಹೊರತು ಆಕೆ ಮಹಿಳೆ ಎಂಬ ಕಾರಣಕ್ಕಾಗಿ ಅಲ್ಲ.

ಇಲ್ಲೊಂದು ವಿಪರ್ಯಾಸವನ್ನು ಗಮನಿಸಿ. ಯಡಿಯೂರಪ್ಪನ ಅಪ್ರಜಾತಾಂತ್ರಿಕ ನಿಲುವಿನಿಂದಾಗಿಯೇ ಅಧಿಕಾರ ಪಡೆದು ಮಿಂಚಿದ್ದ ಶೋಭಾ ಕರಂದ್ಲಾಜೆ ಇವತ್ತು ರೆಡ್ಡಿ ಗ್ಯಾಂಗಿನ ಅಂತಹದ್ದೇ ಅಪ್ರಜಾತಾಂತ್ರಿಕ ಧೋರಣೆಯಿಂದ ತಮ್ಮ ಹುದ್ದೆಯನ್ನು ಕಳೆದುಕೊಂಡಿದ್ದಾರೆ...

ಇಷ್ಟೆಲ್ಲಾ ಹೇಳಿದ ನಂತರವೂ ನನ್ನ ಹೃದಯ ಅದ್ಯಾಕೋ ಶೋಭಾ ಕರಂದ್ಲಾಜೆಯ ಸದ್ಯದ ಪರಿಸ್ಥಿತಿಯನ್ನು ಕಂಡು 'ಪಾಪ' ಅನ್ನುತ್ತಿದೆ...

ಕಾರ್ಟೂನ್ ಮತ್ತು ಫೋಟೋ



ಸಗ್ಗರೆ ರಾಮಸ್ವಾಮಿ

ಕಳೆದ ವಾರದಿಂದ ಪ್ರಸ್ತುತ ರಾಜಕೀಯ ವರದಿಗಳೊಂದಿಗೆ ರಾಜಕಾರಣಿಗಳ ...ಖಗಳ ಬದಲಾಗಿ ಪ್ರಸ್ತುತ ರಾಜಕೀಯ ವಿದ್ಯಮಾನಗಳನ್ನು ಬಿಂಬಿಸುವ ...ಫೋಟೋಗಳನ್ನು ಪ್ರಕಟಿಸುತ್ತಿದ್ದೇವೆ. ಇವುಗಳನ್ನು ನಾವು ಪಡೆಯುತ್ತಿರುವುದು ಅಪಾರ ...ಅನುಭವವುಳ್ಳ ಸುದ್ದಿ ಛಾಯಾಗ್ರಾಹಕ ಸಗ್ಗರೆ ರಾಮಸ್ವಾಮಿಯವರ 'ಕರ್ನಾಟಕ ...ಪ್ರೆಸ್ ಫೋಟೋ' ಎಂಬ ಸಂಸ್ಥೆಯಿಂದ. ಸಗ್ಗರೆ ತಂಡದ ಫೋಟೋಗಳು ನಮ್ಮ ...ಪತ್ರಿಕೆಯ ಅಂದವನ್ನು ಹೆಚ್ಚಿಸಿವೆ.

ಹಾಗೆಯೇ ಕಳೆದ ಹಲವು ವಾರಗಳಿಂದ ದಿನೇಶ್ ಕುಕ್ಕುಜಡ್ಕ ಎಂಬ ಯುವ ಕಲಾವಿದನ ಕಾರ್ಟೂನ್‌ಗಳನ್ನು ...ಪ್ರಕಟಿಸುತ್ತಿದ್ದೇವೆ. ದಿನೇಶನ ರೇಖಾ ಕಲೆ ಮತ್ತು ಹಾಸ್ಯಪ್ರಜ್ಞೆ ಈಗಾಗಲೇ ನಮ್ಮ ಹಲವಾರು ಓದುಗ ಮಿತ್ರರ ...ಮನ ಸೆಳೆದು "ತುಂಬಾ ಚೆನ್ನಾಗಿದೆ" ಎಂದು ಹೇಳಿದ್ದಾರೆ.

ನಮ್ಮ ತಂಡದ ಈ ಹೊಸ ಯುವಕರಿಗೆ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹ ಇರಲಿ.

-ಗೌರಿ

ಬರ್ಲಿನ್ ಗೋಡೆಯ ಪತನ ಕಮ್ಯೂನಿಸಂನ ಪತನವೇ?



ಬರ್ಲಿನ್ ಗೋಡೆ ನಿರ್ಮಾಣ ಸಂದರ್ಭ...

ಬರ್ಲಿನ್ ಗೋಡೆ ಅಸ್ತಿತ್ವಕ್ಕೆ ಬಂದಿದ್ದು, 28 ವರ್ಷಗಳ ಕಾಲ ಜರ್ಮನಿಯನ್ನು ಇಬ್ಭಾಗ ಮಾಡಿ ನಿಂತಿದ್ದು ಹಾಗೂ ಅಂತಿಮವಾಗಿ ಧ್ವಂಸಗೊಂಡಿದ್ದರ ಹಿಂದೆ ಒಂದು ರೋಚಕ ಚರಿತ್ರೆಯೇ ಇದೆ. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನ ಸಾವಿನೊಂದಿಗೆ, ತ್ರೈರಾಷ್ಟ್ರಗಳು (ಜಪಾನ್, ಜರ್ಮನಿ ಮತ್ತು ಇಟಲಿ) ಯುದ್ಧದಲ್ಲಿ ಸೋಲನ್ನೊಪ್ಪಿಕೊಳ್ಳುವುದರೊಂದಿಗೆ ದ್ವಿತೀಯ ವಿಶ್ವ ಮಹಾಸಮರ ಕೊನೆಗೊಂಡ ಮೇಲೆ ಏಕೀಕೃತ ಜರ್ಮನಿಯನ್ನು ಮಿತ್ರ ರಾಷ್ಟ್ರಗಳು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಹಂಚಿಕೊಂಡವು.


ಮೊನ್ನೆ ನವೆಂಬರ್ 9ಕ್ಕೆ ಬರ್ಲಿನ್ ಗೋಡೆ ಪತನವಾಗಿ ಬರೋಬ್ಬರಿ ಇಪ್ಪತ್ತು ವರ್ಷ ತುಂಬಿದೆ. ಏಕೀಕೃತ ಜರ್ಮನ್ ರಾಷ್ಟ್ರವನ್ನು ಪೂರ್ವ ಮತ್ತು ಪಶ್ಚಿಮ ಜರ್ಮನಿಗಳನ್ನಾಗಿ ಇಬ್ಭಾಗ ಮಾಡಿದ್ದ ಈ ಗೋಡೆಯನ್ನು 1989ರ ನವೆಂಬರ್ 9ರಂದು ಧ್ವಂಸಗೊಳಿಸಲಾಗಿತ್ತು. ವಾಸ್ತವದಲ್ಲಿ ಈ ಗೋಡೆ ಭೌಗೋಳಿಕವಾಗಿ ಜರ್ಮನಿಯನ್ನು ಇಬ್ಭಾಗ ಮಾಡಿದ್ದು ಮಾತ್ರವಾಗಿರಲಿಲ್ಲ. ಬದಲಿಗೆ, 28 ವರ್ಷಗಳ ಕಾಲ ಇಡೀ ವಿಶ್ವದ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಶಕ್ತಿಗಳ ನಡುವಿನ ಛೇದಕದ ಸಂಕೇತವಾಗಿಯೂ ನಿಂತಿತ್ತು. ಈ ಕಾರಣಕ್ಕೇನೇ ಸಾಮ್ರಾಜ್ಯಶಾಹಿ ಶಕ್ತಿಗಳು ಬರ್ಲಿನ್ ಗೋಡೆಯ ಪತನವನ್ನು ಕಮ್ಯೂನಿಸಂನ ಪತನವೆಂದೇ ಬಿಂಬಿಸಿ ಬಹಳ ಹರ್ಷದಿಂದ ಅದರ ಇಪ್ಪತ್ತನೆ ವಾರ್ಷಿಕೋತ್ಸವವನ್ನು ಆಚರಿಸುತ್ತಿವೆ.

ಬರ್ಲಿನ್ ಗೋಡೆ ಅಸ್ತಿತ್ವಕ್ಕೆ ಬಂದಿದ್ದು, 28 ವರ್ಷಗಳ ಕಾಲ ಜರ್ಮನಿಯನ್ನು ಇಬ್ಭಾಗ ಮಾಡಿ ನಿಂತಿದ್ದು ಹಾಗೂ ಅಂತಿಮವಾಗಿ ಧ್ವಂಸಗೊಂಡಿದ್ದರ ಹಿಂದೆ ಒಂದು ರೋಚಕ ಚರಿತ್ರೆಯೇ ಇದೆ. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನ ಸಾವಿನೊಂದಿಗೆ, ತ್ರೈ ರಾಷ್ಟ್ರಗಳು (ಜಪಾನ್, ಜರ್ಮನಿ ಮತ್ತು ಇಟಲಿ) ಯುದ್ಧದಲ್ಲಿ ಸೋಲನ್ನೊಪ್ಪಿಕೊಳ್ಳುವುದರೊಂದಿಗೆ ದ್ವಿತೀಯ ವಿಶ್ವ ಮಹಾಸಮರ ಕೊನೆಗೊಂಡ ಮೇಲೆ ಏಕೀಕೃತ ಜರ್ಮನಿಯನ್ನು ಮಿತ್ರ ರಾಷ್ಟ್ರಗಳು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಹಂಚಿಕೊಂಡವು. ಪಾಟ್ಸ್‌ಡಾಮ್ ಒಪ್ಪಂದದಂತೆ ಮಿತ್ರ ರಾಷ್ಟ್ರಗಳ ಗುಂಪಿನಲ್ಲಿ ಪ್ರಭಾವಶಾಲಿ ದೇಶಗಳಾಗಿದ್ದ ಅಮೆರಿಕ, ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ಸೋವಿಯತ್ ಒಕ್ಕೂಟಗಳು ಒಂದೊಂದು ವಿಭಾಗವನ್ನು ತಮ್ಮ ಕೈವಶದಲ್ಲಿಟ್ಟುಕೊಂಡಿದ್ದವು.

ಯುದ್ಧದ ನಂತರ ವಿಶ್ವದ ಬಲಿಷ್ಠ ರಾಷ್ಟ್ರಗಳಾಗಿ ಹೊರಹೊಮ್ಮಿದ ಸಾಮ್ರಾಜ್ಯಶಾಹಿ ಅಮೆರಿಕ ಮತ್ತು ಸಮಾಜವಾದಿ ಸೋವಿಯತ್ ಒಕ್ಕೂಟಗಳ ನಡುವಿನ ಬಾಂಧವ್ಯ ವೇಗವಾಗಿ ಹಳಸಿದ್ದರಿಂದ ಜರ್ಮನಿಯನ್ನು ಹರಿದು ಹಂಚಿಕೊಳ್ಳುವಾಗ ಇದ್ದ ಸ್ನೇಹಮಯ ಬಾಂಧವ್ಯ ಸ್ಪರ್ಧಾತ್ಮಕ ಸ್ವರೂಪ ಪಡೆದುಕೊಂಡಿತಲ್ಲದೇ ಪರಸ್ಪರ ಶತ್ರುತ್ವವೂ ಬೆಳೆದುನಿಂತಿತು. ಮಿತ್ರ ರಾಷ್ಟ್ರಗಳ ನಡುವಿನ ಈ ಹೊಸ ಶತ್ರುತ್ವ ಸಂಬಂಧಗಳು ಜರ್ಮನಿಯ ಏಕೀಕರಣ ಮಾಡಬೇಕೆಂಬ ಮೂಲ ಉದ್ದೇಶಕ್ಕೆ ತಿಲಾಂಜಲಿಯಿಟ್ಟು ಇಡೀ ಜರ್ಮನಿಯನ್ನು ಪೂರ್ವ ಹಾಗೂ ಪಶ್ಚಿಮ ಜರ್ಮನಿಗಳಾಗಿ ಇಬ್ಭಾಗ ಮಾಡಿದವು. ಅಮೆರಿಕ, ಫ್ರಾನ್ಸ್ ಮತ್ತು ಬ್ರಿಟನ್‌ಗಳ ವಶದಲ್ಲಿದ್ದ ಭಾಗಗಳು ಪಶ್ಚಿಮ ಜರ್ಮನಿಯೆಂತಲೂ ಹಾಗೂ ಸೋವಿಯತ್ ಒಕ್ಕೂಟದ ವಶದಲ್ಲಿದ್ದ ಭಾಗ ಪೂರ್ವ ಜರ್ಮನಿಯೆಂತಲೂ ಪರಿಗಣಿತವಾಯಿತು. ಅದೇ ರೀತಿಯಲ್ಲಿ ಪಶ್ಚಿಮ ಜರ್ಮನಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದ ರಾಷ್ಟ್ರಗಳು ಬಂಡವಾಳಶಾಹಿ ರಾಜಕೀಯ ವ್ಯವಸ್ಥೆ ಹೊಂದಿದ್ದರಿಂದ ಹಾಗೂ ಪೂರ್ವ ಜರ್ಮನಿಯನ್ನು ಹಿಡಿದಿಟ್ಟುಕೊಂಡಿದ್ದ ಸೋವಿಯತ್ ಒಕ್ಕೂಟ ಸಮಾಜವಾದಿ ರಾಜಕೀಯ ವ್ಯವಸ್ಥೆ ಅಳವಡಿಸಿಕೊಂಡಿದ್ದರಿಂದ ಈ ಇಬ್ಭಾಗವನ್ನು ಪ್ರಜಾತಂತ್ರ ಮತ್ತು ಕಮ್ಯೂನಿಸಂ ನಡುವಿನ ಇಬ್ಭಾಗ ಎಂದೇ ವಿಶ್ವದಾದ್ಯಂತ ಬಿಂಬಿಸಲಾಗಿತ್ತು. ಪಶ್ಚಿಮ ಜರ್ಮನಿಯನ್ನು ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ ಎಂದು ನಾಮಕರಣ ಮಾಡಿದರೆ ಪೂರ್ವ ಜರ್ಮನಿಗೆ ಜರ್ಮನ್ ಡೆಮಾಕ್ರೆಟಿಕ್ ರಿಪಬ್ಲಿಕ್ ಎಂದು ಹೆಸರಿಡಲಾಗಿತ್ತು. ಜರ್ಮನಿಯ ಪ್ರಮುಖ ನಗರವಾಗಿದ್ದ ಬರ್ಲಿನ್ ಸೋವಿಯತ್ ಒಕ್ಕೂಟದ ಆಧಿಪತ್ಯದಲ್ಲಿದ್ದ ಪೂರ್ವ ಜರ್ಮನಿಯ ಒಳಗೇ ಇತ್ತು. ಇನ್ನೂ ವಿಶೇಷ ಎಂದರೆ ಬರ್ಲಿನ್ ನಗರವನ್ನೂ ಕೂಡ ಪೂರ್ವ ಮತ್ತು ಪಶ್ಚಿಮ ಬರ್ಲಿನ್ ಎಂದು ಇಬ್ಭಾಗ ಮಾಡಿಕೊಂಡು ಹಂಚಿಕೊಳ್ಳಲಾಗಿತ್ತು. ಹಾಗಾಗಿ ಅಮೆರಿಕ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಆಧಿಪತ್ಯದಲ್ಲಿದ್ದ ಪಶ್ಚಿಮ ಬರ್ಲಿನ್ ಸೋವಿಯತ್ ಒಕ್ಕೂಟದ ಆಧಿಪತ್ಯದಲ್ಲಿದ್ದ ಪೂರ್ವ ಜರ್ಮನಿಯಲ್ಲಿ ಒಂದು ಪುಟ್ಟ ದ್ವೀಪದಂತಿತ್ತು.


ಪೂರ್ವ ಜರ್ಮನಿಯನ್ನು ಹಿಡಿದಿಟ್ಟುಕೊಂಡಿದ್ದ ಸೋವಿಯತ್ ಒಕ್ಕೂಟದ ಸಮಾಜವಾದಿ ರಾಜಕೀಯ ಸಿದ್ಧಾಂತ ಹಾಗೂ ಪಶ್ಚಿಮ ಜರ್ಮನಿಯನ್ನು ಹಿಡಿದಿಟ್ಟುಕೊಂಡಿದ್ದ ಅಮೆರಿಕ–ಇಂಗ್ಲೆಂಡ್–ಫ್ರಾನ್ಸ್‌ಗಳ ಬಂಡವಾಳವಾದಿ ರಾಜಕೀಯ ಸಿದ್ಧಾಂತ ಪರಸ್ಪರ ವಿರುದ್ಧವಾಗಿದ್ದುದರಿಂದ ಅವುಗಳ ಪ್ರಭಾವ ಜರ್ಮನಿಯ ಮೇಲೂ ಕಾಣಲಾರಂಭಿಸಿತು. ಸೋವಿಯತ್ ಒಕ್ಕೂಟವು ತನ್ನ ವಶದಲ್ಲಿದ್ದ ಪೂರ್ವ ಜರ್ಮನಿಯನ್ನು 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ನೀಡುವಂಥ ಸಮಾಜವಾದಿ ಜರ್ಮನಿಯನ್ನಾಗಿ ಪರಿವರ್ತಿಸುವುದಕ್ಕಾಗಿ ಪ್ರಯತ್ನಿಸುತ್ತಿದ್ದರೆ ಉಳಿದ ಮೂರು ರಾಷ್ಟ್ರಗಳು ತಮ್ಮ ವಶದಲ್ಲಿದ್ದ ಪಶ್ಚಿಮ ಜರ್ಮನಿಯನ್ನು ಬಂಡವಾಳಶಾಹಿ ರಾಷ್ಟ್ರವಾಗಿ ಪರಿವರ್ತಿಸಿದರು.

ಆದರೆ, ಸ್ಟಾಲಿನ್ ನಿಧನದ ನಂತರ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ನಿರ್ಮಾಣಕ್ಕೂ ದೊಡ್ಡ ಹೊಡೆತ ಬಿತ್ತು. ಅವರ ನಂತರ ಬಂದ ಎಲ್ಲಾ ನಾಯಕರೂ ಪೂರ್ವ ಜರ್ಮನಿಯನ್ನು ಸರ್ವಾಧಿಕಾರಿ ಧೋರಣೆಗೆ ಗುರಿಮಾಡಿದರು. ಅದರಿಂದಾಗಿ ಪೂರ್ವ ಜರ್ಮನಿಯಲ್ಲಿ ಸಾಮಾಜಿಕ ಸಂಕ್ಷೋಭೆ ಉಂಟಾಗಿ ಜನ ಸಾಮೂಹಿಕವಾಗಿ ಪಶ್ಚಿಮ ಜರ್ಮನಿಗೆ ವಲಸೆ ಹೋಗಲಾರಂಭಿಸಿದರು. ಒಂದು ಅಂದಾಜಿನ ಪ್ರಕಾರ 1961ರ ಹೊತ್ತಿಗೆ ಸುಮಾರು ಇಪ್ಪತ್ತೈದು ಲಕ್ಷ ಜನ ಪಶ್ಚಿಮ ಜರ್ಮನಿಗೆ ವಲಸೆ ಬಂದಿದ್ದರು. ವಲಸಿಗರಿಗೆ ಸುಲಭವಾದ ದಾರಿ ಎಂದರೆ ಪೂರ್ವ ಬರ್ಲಿನ್ ನಗರಕ್ಕೆ ಬಂದು ಅಲ್ಲಿಂದ ಪಶ್ಚಿಮ ಬರ್ಲಿನ್‌ಗೆ ನುಸುಳುವುದು. ಪಶ್ಚಿಮ ಬರ್ಲಿನ್ ನಗರವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡರೆ ವಲಸೆ ನಿಂತು ಹೋಗುತ್ತದೆಂದು ಎಣಿಸಿದ ಸೋವಿಯತ್ ಒಕ್ಕೂಟ ಒಂದು ಹಂತದಲ್ಲಿ ಮಿಲಿಟರಿ ಕಾರ್ಯಾಚರಣೆಗೂ ಸಿದ್ಧವಾಗಿತ್ತು. ಆದರೆ, ಅದು ಕೈಗೂಡಲಿಲ್ಲ. ಅಂತಿಮವಾಗಿ ಈ ಸಾಮೂಹಿಕ ವಲಸೆಯನ್ನು ನಿಲ್ಲಿಸುವುದಕ್ಕಾಗಿ ಪೂರ್ವ ಮತ್ತು ಪಶ್ಚಿಮ ಬರ್ಲಿನ್‌ಗಳ ನಡುವೆ ಬೃಹತ್ ಗೋಡೆಯೊಂದನ್ನು ನಿರ್ಮಿಸುವುದಕ್ಕೆ ಸೋವಿಯತ್ ಒಕ್ಕೂಟ ಮುಂದಾಯಿತು. ಇಡೀ ಕಾರ್ಯಾಚರಣೆಯನ್ನು ಅತ್ಯಂತ ಗೌಪ್ಯವಾಗಿಡಲಾಗಿತ್ತು. 1961ರ ಆಗಸ್ಟ್ 12–13ರ ರಾತ್ರಿಯಲ್ಲಿ ಬರ್ಲಿನ್ ನಗರವಾಸಿಗಳು ಗಾಢ ನಿದ್ರೆಯಲ್ಲಿದ್ದಾಗ ಸೈನಿಕರ ಬೆಂಗಾವಲಿನಲ್ಲಿ ಗೋಡೆ ಕಟ್ಟುವ ಕೆಲಸ ಪ್ರಾರಂಭವಾಯಿತು. ಜನ ಬೆಳಗ್ಗೆ ಎದ್ದು ನೋಡಿದಾಗ ಬರ್ಲಿನ್ ನಗರವನ್ನು ಇಬ್ಭಾಗ ಮಾಡುವ ಗೋಡೆಯೊಂದು ಎದ್ದುನಿಂತಿತ್ತು! ಪೂರ್ವ ಬರ್ಲಿನ್ ನಗರದಲ್ಲಿದ್ದುಕೊಂಡೇ ಪಶ್ಚಿಮ ಬರ್ಲಿನ್‌ಗೆ ಕೆಲಸಕ್ಕಾಗಿ ಪ್ರತಿದಿನ ಹೋಗುತ್ತಿದ್ದ ಸುಮಾರು 60,000 ಉದ್ಯೋಗಿಗಳಿಗಂತೂ ಇದರಿಂದ ಭಾರಿ ಆಘಾತವಾಯಿತು.



ಗೋಡೆಯನ್ನು ಕೆಡವಿದ್ದು...

ಈ ಗೋಡೆ ಎದ್ದು ನಿಂತ ಮೇಲೂ ಪೂರ್ವ ಬರ್ಲಿನ್‌ನಿಂದ ಪಶ್ಚಿಮ ಬರ್ಲಿನ್‌ಗೆ ನುಸುಳುವಲ್ಲಿ ಒಂದಷ್ಟು ಜನ ಯಶಸ್ವಿಯಾಗುತ್ತಿದ್ದರು. ಹಾಗಾಗಿ, ಗೋಡೆಯನ್ನು ಇನ್ನೂ ಭದ್ರಪಡಿಸುವ ಕೆಲಸ ಮುಂದುವರೆಯಿತು. ಪ್ರಾರಂಭದಲ್ಲಿ ಕೇವಲ ಕಾಂಕ್ರೀಟ್ ಬ್ಲಾಕ್ ಮತ್ತು ವೈರ್‌ಗಳಿಂದ ನಿರ್ಮಿಸಲಾಗಿದ್ದ ಈ ಗೋಡೆ ಒಂದು ಭದ್ರ ಬೇಲಿಯಂತಿತ್ತು. ನಂತರ 1965ರಲ್ಲಿ ಕಬ್ಬಿಣ ಕಂಬಗಳು ಮತ್ತು ಕಾಂಕ್ರಿಟ್ ಬಳಸಿ ಅದನ್ನು ಒಂದು ಸುಭದ್ರ



ಗೋಡೆಯನ್ನಾಗಿ ಪರಿವರ್ತಿಸಲಾಯಿತು. 1975 ಮತ್ತು 80ರ ನಡುವೆ 12 ಅಡಿ ಎತ್ತರ ಹಾಗೂ 4 ಅಡಿ ಅಗಲವಿರುವ ಕಾಂಕ್ರೀಟ್ ಸ್ಲಾಬ್‌ಗಳನ್ನು ಬಳಸಿ ಗೋಡೆಯನ್ನು ಭಾರಿ ಪ್ರಮಾಣದಲ್ಲಿ ಭದ್ರಗೊಳಿಸಲಾಯಿತು. ಜನ ಗೋಡೆಯನ್ನು ಹತ್ತಿ ದಾಟುವುದಕ್ಕೆ ಸಾಧ್ಯವಾಗದಂತೆ ಗೋಡೆಯ ತುದಿಯಲ್ಲಿ ನಯವಾದ ಪೈಪ್ ಒಂದನ್ನು ಅಳವಡಿಸಲಾಯಿತು. ನಂತರದ ದಿನಗಳಲ್ಲಿ ಆ ಗೋಡೆಯಿಂದ 300 ಅಡಿಗಳ ದೂರದಲ್ಲಿ ಇನ್ನೊಂದು ಒಳಗೋಡೆಯನ್ನು ನಿರ್ಮಾಣ ಮಾಡಿ ಅವೆರಡರ ನಡುವಿನ ಜಾಗವನ್ನು 'ಜನರಹಿತ ವಲಯ' ಎಂದು ಘೋಷಿಸಲಾಗಿತ್ತು. ಗೋಡೆಯ ಹತ್ತಿರ ಜನ ಬಾರದಂತೆ ತಡೆಯಲು ಸೈನಿಕರು ನಾಯಿಗಳೊಂದಿಗೆ ಪಹರೆ ಕಾಯಲಾರಂಭಿಸಿದರು. ವಾಹನಗಳನ್ನು ಗೋಡೆಗೆ ಡಿಕ್ಕಿ ಹೊಡೆಸದಂತೆ ತಡೆಯಲು ದೊಡ್ಡ ಕಂದಕಗಳನ್ನು ತೋಡಲಾಯಿತು. ಅಪಾಯಕಾರಿ ವಿದ್ಯುತ್ ವೈರ್‌ಗಳ ಬೇಲಿಯನ್ನು, ಬಂಕರ್‌ಗಳನ್ನು, ಸದಾ ಬೆಳಕಿರುವ ವ್ಯವಸ್ಥೆಗಳನ್ನು ನಿರ್ಮಿಸಲಾಗಿತ್ತು. ಹೀಗೆ, ಒಂದು ಸರಳ ಬೇಲಿಯಂತೆ



ಮೇಲೆದ್ದ ಬರ್ಲಿನ್ ಗೋಡೆ 1989ರಲ್ಲಿ ಅದನ್ನು ಧ್ವಂಸ ಮಾಡುವ ಸಮಯಕ್ಕೆ ಹತ್ತಿ ದಾಟಲಾಗದ ಅಭೇಧ್ಯ ಗೋಡೆಯಾಗಿ ಪರಿವರ್ತನೆಗೊಂಡಿತ್ತು.

ಈ ಗೋಡೆ ಬರ್ಲಿನ್ ನಗರವನ್ನು ಅಕ್ಷರಶಃ ಇಬ್ಭಾಗ ಮಾಡಿದ್ದರಿಂದ ಸಾಮಾಜಿಕ ಜೀವನವೇ ಅಸ್ತವ್ಯಸ್ತಗೊಂಡಿತು. ನೂರಾರು ಕುಟುಂಬಗಳು ಇಬ್ಭಾಗವಾದವು. ಗೋಡೆಯ ಒಂದು ಬದಿಯಲ್ಲಿರುವ ಜನ ಇನ್ನೊಂದು ಬದಿಯಲ್ಲಿದ್ದ ತಮ್ಮ ಸಂಬಂಧಿಗಳನ್ನು ಸ್ನೇಹಿತರನ್ನು ಭೇಟಿ ಮಾಡುವುದಕ್ಕೆ ಅವಕಾಶವೇ ಇಲ್ಲದಂತಾಯಿತು. ಬರ್ಲಿನ್ ಗೋಡೆ ಸಾಮೂಹಿಕ ವಲಸೆಯನ್ನು ಬಹುತೇಕ ತಡೆಯುವಲ್ಲಿ ಯಶಸ್ವಿಯಾದರೂ ಸಂಪೂರ್ಣವಾಗಿ ವಲಸೆಯನ್ನು ನಿಯಂತ್ರಿಸುವುದಕ್ಕೆ ಅದರಿಂದ ಸಾಧ್ಯವಾಗಲಿಲ್ಲ. ಬಿಡಿಬಿಡಿಯಾಗಿ, ಗುಂಪುಗುಂಪಾಗಿ ಗೋಡೆಯನ್ನು ದಾಟುವ ಸಾಹಸವನ್ನು ಜನ ಉದ್ದಕ್ಕೂ ಮಾಡುತ್ತಲೇ ಬಂದರು. ಗೋಡೆಯನ್ನು ಅಷ್ಟೊಂದು ಭದ್ರವಾಗಿ ಕಟ್ಟಿದ್ದರೂ, ಅದರ ಹತ್ತಿರಕ್ಕೆ ಸುಳಿಯದಂತೆ ಬಿಗಿ ಭದ್ರತೆಯಿಂದ ಕಾವಲು ಕಾಯುತ್ತಿದ್ದರೂ ಸುಮಾರು ಐದು ಸಾವಿರ ಜನ ಯಶಸ್ವಿಯಾಗಿ ಅದನ್ನು ದಾಟಿದರು. ಈ ಸಾಹಸದಲ್ಲಿ ಸುಮಾರು 100 ರಿಂದ 200 ಜನ ಸತ್ತಿದ್ದೂ ಉಂಟು.

ಯಾವುದೇ ಜನಸಮುದಾಯವನ್ನು ಅವರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಬಲವಂತವಾಗಿ ಹಿಡಿದಿಟ್ಟುಕೊಂಡರೆ ಎಂಥ ಸಂಕ್ಷೋಭೆಯುಂಟಾಗುತ್ತದೆ ಎಂಬುದಕ್ಕೆ ಬರ್ಲಿನ್ ಗೋಡೆ ಒಂದು ಜ್ವಲಂತ ನಿದರ್ಶನವಾಗಿತ್ತು. ಎಷ್ಟೊಂದು ಅವಸರದಲ್ಲಿ ಬರ್ಲಿನ್ ಗೋಡೆ ನಿರ್ಮಾಣವಾಯಿತೋ ಸಾಮಾಜಿಕ ದಂಗೆಯು ಅಷ್ಟೇ ತ್ವರಿತವಾಗಿ ಅದನ್ನು ಧ್ವಂಸ ಮಾಡಿತು. ತಮಗೆ ಸ್ವಾತಂತ್ರ್ಯ ಬೇಕು ಎಂಬ ಘೋಷಣೆಯಡಿಯಲ್ಲಿ 1989ರ ಸೆಪ್ಟೆಂಬರ್‌ನಲ್ಲಿ ಇಡೀ ಪೂರ್ವ ಜರ್ಮನಿಯಾದ್ಯಂತ ಜನಪ್ರತಿಭಟನೆಗಳು ಭುಗಿಲೆದ್ದವು. ಕೆಲವೇ ದಿನಗಳಲ್ಲಿ ಈ ಪ್ರತಿಭಟನೆಗಳು ಎಷ್ಟರಮಟ್ಟಿಗೆ ವಿಸ್ತರಿಸಿಕೊಂಡವೆಂದರೆ ನವೆಂಬರ್ 4ರಂದು ಪೂರ್ವ ಬರ್ಲಿನ್ ನಗರದಲ್ಲಿ ಐದು ಲಕ್ಷ ಜನ ಸೇರಿ ಬರ್ಲಿನ್ ಗೋಡೆಯನ್ನು ಒಡೆಯುವುದಕ್ಕೆ, ಜರ್ಮನಿಯ ಏಕೀಕರಣಕ್ಕೆ ಪಣ ತೊಟ್ಟರು. ಅದೇ ವೇಳೆಯಲ್ಲಿ ಜೆಕೋಸ್ಲೋವಾಕಿಯದ ಮೂಲಕ ಪೂರ್ವ ಜರ್ಮನಿಯನ್ನು ತೊರೆದು ಪಶ್ಚಿಮ ಜರ್ಮನಿಗೆ ತೆರಳುವವರ ಸಂಖ್ಯೆಯೂ ಅಗಾಧವಾಗಿ ಏರುತ್ತಿತ್ತು. ಹೀಗೆ ಉಕ್ಕೇರುತ್ತಿದ್ದ ಪ್ರತಿಭಟನೆಗಳನ್ನು ಶಮನ ಮಾಡುವುದಕ್ಕೆ ಬೇರೆ ದಾರಿಯೇ ಇಲ್ಲದೇ ನವೆಂಬರ್ 9, 1989ರಂದು ಪೂರ್ವ ಜರ್ಮನಿಯ ಸರ್ಕಾರ ಅಧಿಕೃತವಾಗಿ ಪೂರ್ವ ಮತ್ತು ಪಶ್ಚಿಮ ಬರ್ಲಿನ್ ನಡುವಿನ ಗಡಿಯನ್ನು ತೆರೆಯಲಾಗುವುದು ಎಂದು ಘೋಷಿಸಿತು. ಇದರೊಂದಿಗೆ ಬರ್ಲಿನ್ ಗೋಡೆಯನ್ನು ಜನ ಧ್ವಂಸಗೊಳಿಸಲಾರಂಭಿಸಿದರು. ಅದರ ಮುಂದಿನ ತಿಂಗಳೇ ಅಕ್ಟೋಬರ್ 3, 1990ರಂದು ಪೂರ್ವ ಮತ್ತು ಪಶ್ಚಿಮ ಜರ್ಮನಿಗಳು ವಿಲೀನಗೊಂಡು ಈಗಿನ ಏಕೀಕೃತ ಜರ್ಮನಿ ಉದಯವಾಯಿತು. ಇದು ಬರ್ಲಿನ್ ಗೋಡೆಯ ಸಂಕ್ಷಿಪ್ತ ಕತೆ. ವಾಸ್ತವದಲ್ಲಿ ಅದರ ಧ್ವಂಸ ಕಮ್ಯೂನಿಸಂನ ಪತನ ಎಂದು ವ್ಯಾಖ್ಯಾನಿಸುವುದಕ್ಕಿಂತ ಜನತೆಯ ಸ್ವಾತಂತ್ರ್ಯಕ್ಕೆ ಸಿಕ್ಕ ಜಯ ಎಂದಷ್ಟೇ ಹೇಳಬಹುದು.

ಇನ್ನೊಂದು ವಿಚಾರವನ್ನಿಲ್ಲಿ ಹೇಳಲೇಬೇಕು. ಮಧ್ಯಪ್ರಾಚ್ಯದಲ್ಲಿ ಪ್ಯಾಲೆಸ್ತೀನಿಯನ್ನರನ್ನು ಇಬ್ಭಾಗಿಸುವುದಕ್ಕಾಗಿ ಇಸ್ರೇಲ್ ಕೂಡ ಒಂದು ಗೋಡೆ ಕಟ್ಟುತ್ತಿದೆ. ಒಟ್ಟು 703 ಕಿ.ಮೀ. ಉದ್ದದ ಈ ಗೋಡೆಯನ್ನು ಕಟ್ಟುವ ಯೋಜನೆ ಇಸ್ರೇಲ್‌ಗಿದ್ದು ಈಗಾಗಲೇ 400 ಕಿ.ಮೀ.ನಷ್ಟು ಪೂರ್ಣಗೊಂಡಿದೆ. ಬರ್ಲಿನ್ ಗೋಡೆಗಿಂತಲೂ ಭೀಕರವಾಗಿರುವ ಇಸ್ರೇಲ್–ಪ್ಯಾಲೆಸ್ತೀನ್ ಗೋಡೆ ಸಾವಿರಾರು ಕುಟುಂಬಗಳನ್ನು, ಸಂಬಂಧಿಗಳನ್ನು ಅಕ್ಷರಶಃ ಇಬ್ಭಾಗ ಮಾಡಿಟ್ಟದೆ. ಆ ಹೊತ್ತು ಬರ್ಲಿನ್ ಗೋಡೆ ಕೆಡವುವದಕ್ಕೆ ಇದೇ ಅಮೆರಿಕ ಬೆನ್ನಿಗೆ ನಿಂತಿತ್ತು. ಆ ಮೂಲಕ ಜನತೆಯ ಸ್ವಾತಂತ್ರ್ಯದ ಪರವಾಗಿದ್ದೇನೆಂದು ಇಡೀ ವಿಶ್ವಕ್ಕೆ ಪೋಜು ಕೊಟ್ಟಿತ್ತು. ಬರ್ಲಿನ್ ಗೋಡೆಯ ಪತನವನ್ನು ಕಮ್ಯೂನಿಸಂ ವಿರುದ್ಧದ ಪ್ರಜಾತಂತ್ರದ ವಿಜಯ ಎಂದು ಬಣ್ಣಿಸಿತ್ತು. ಆದರೆ ಅದೇ ಅಮೆರಿಕ ಈಗ ಇಸ್ರೇಲ್ ಕಟ್ಟುತ್ತಿರುವ ಗೋಡೆಯ ರಕ್ಷಣೆಗೆ ಕಾವಲುಗಾರನಾಗಿ ನಿಂತಿದೆ!

ಮುಲಾಮನ ಸೊತ್ತು ಪೊಲೀಸ್ ಪಾಲು?

ಸಿಸಿಬಿಯ ಲಾಕಪ್ಪಿನಲ್ಲಿ ಕೂತು ತನ್ನ ಗಾಯ ನೆಕ್ಕುತ್ತಿರುವ ಮುಲಾಮನಿಗೆ 'ಪಾಪಿ ಸೊತ್ತು ಯಾವತ್ತಿದ್ದರೂ ಪರಾಯಿ ಪಾಲೇ' ಎಂಬ ಕಹಿ ಸತ್ಯದ ಅರ್ಥವಾಗಿರಬೇಕು-


ಯಾವ ರಾಜರಾಜೇಶ್ವರಿನಗರದ ಬಂಗಲೆಯನ್ನು ತನ್ನ ಅಭೇದ್ಯ ಕೋಟೆಯಂತೆ ಕಳೆದ ಮೂರು ವರ್ಷಗಳಿಂದ ರಕ್ಷಿಸುತ್ತಿದ್ದನೋ ಅದೇ ಪೊಲೀಸರ ಪಾಲಾಗಿದೆ. ಸಿಸಿಬಿಯ ಡೆಪ್ಯುಟಿ ಎಸಿಪಿ ಹಾದಿಮನಿ ತಂಡ ಸತತ ಒಂದು ತಿಂಗಳಿಂದ ಮುಲಾಮನಿಗಾಗಿ ಬಲೆ ಬೀಸುವುದಕ್ಕೂ, ಇತ್ತ ರಾಜರಾಜೇಶ್ವರಿನಗರದ ಆತನ ಮೂರು ಕೋಟಿಯ ಬಂಗಲೆಗೆ ಪೊಲೀಸರು ನುಗ್ಗುವುದಕ್ಕೂ ಮುಹೂರ್ತ ಕೂಡಿಬಂದದ್ದು ಮೊನ್ನೆ.

ನವೆಂಬರ್ ಆರರ ಬೆಳ್ಳಂಬೆಳಿಗ್ಗೆಯೇ ಮುಲಾಮನನ್ನು ಆತನ ರಾಜರಾಜೇಶ್ವರಿನಗರದ ಬಂಗಲೆಯಿಂದ ಎಳೆದೊಯ್ದ ಸಿಸಿಬಿ ಪೊಲೀಸರಿಗೆ ಆತನ ಬಂಧನಕ್ಕೆ ತಕ್ಷಣದ ಕಾರಣಗಳಿಲ್ಲದಿದ್ದರೂ ಆತನ ಜೀವತದ ಪಾಪದ ಚುಕ್ತಾ ಕಾರ್ಯವೇ ಮುಖ್ಯವಾಗಿತ್ತು. ಅದು ಆತನ ಮೂರು ಕೋಟಿಯ ಬಂಗಲೆ. ಅದನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಕೊರಂಗು ನಂತರದ ಎರಡನೇ ಆಸ್ತಿಜಪ್ತಿ ಪ್ರಕ್ರಿಯೆಗೆ ಚಾಲನೆ ಕೊಡುವುದು ಸಿಸಿಬಿಯ ಎಸಿಪಿ ಹಾದಿಮನಿಯವರದಾಗಿತ್ತು. ಈ ಹೊತ್ತಿಗಾಗಲೇ ಆಂಧ್ರದ ಚಿತ್ತೂರಿನಲ್ಲಿ ಕೊರಂಗು ಕಟ್ಟಿಸಿದ್ದ ಮನೆಯ ಮುಟ್ಟುಗೋಲಿಗೆ ಏನೇನು ಬೇಕೋ ಎಲ್ಲವನ್ನೂ ಮಾಡಿ ಮುಗಿಸಿದ್ದ ಸಿಸಿಬಿ ತಂಡಕ್ಕೆ ಕಣ್ಣು ಕುಕ್ಕುವಂತೆ ಹೊಳೆದದ್ದು ಮುಲಾಮನ ಮನೆ. ಪ್ರತಿಷ್ಠಿತ ರಾಜರಾಜೇಶ್ವರಿನಗರದ ಮಣಿಪಾಲ್ ಆಸ್ಪತ್ರೆಯ ಹಿಂಭಾಗದಲ್ಲೇ ಮುಲಾಮನ ಅಡ್ಡೆಯಿದೆ. ಅದು 50x80 ಅಡಿಗಳ ವಿಶಾಲ ಸೈಟಿನಲ್ಲಿ ತಲೆ ಎತ್ತಿದ ಮೂರಂತಸ್ತಿನ ಬಂಗಲೆ.

ಈಗಿನ ಮಾರುಕಟ್ಟೆಗೆ ಲೆಕ್ಕ ಹಾಕಿದರೆ ಸೈಟೇ ಒಂದು ಕೋಟಿಯ ಬೆಲೆ ಬಾಳುತ್ತದೆ. ಕಳೆದ ಮೂರು ವರ್ಷಗಳಿಂದಲೂ ಅದನ್ನು ಪೂರ್ತಿ ಮುಗಿಸದೇ ಅರ್ಧಂಬರ್ಧ ಕಟ್ಟಿದ ಸ್ಥಿತಿಯಲ್ಲೇ ಉಳಿಸಿಕೊಂಡು ಬಂದ ಮುಲಾಮನ ಉದ್ದೇಶ ಮಾತ್ರ ಇವತ್ತಿಗೂ ನಿಗೂಢ. ಹೊರಗಿನಿಂದ ನೋಡಿದರೆ ಅದಿನ್ನೂ ಪೂರ್ಣಗೊಳ್ಳದ ಸುಣ್ಣಬಣ್ಣ ಕಾಣದ ಅರೆಬರೆ ಕಟ್ಟಡವಾಗಿದ್ದರೂ ಒಳಗೆ ಬೇರೆಯದೇ ಲೋಕವಿತ್ತು. ಅದರ ಮೊದಲ ಮಹಡಿಯನ್ನು ಐಷಾರಾಮಿ ಶೈಲಿಯ ವಾಸಕ್ಕೆಂದೇ ಅಣಿಗೊಳಿಸಿದ್ದ. ಅಲ್ಲೇ ಮಲಗುತ್ತಿದ್ದ. ದಿನ ಬೆಳಿಗ್ಗೆಯಾದರೆ ಹಿಂದುಗಟ್ಟಲೇ ರೌಡಿಗಳನ್ನು ಜೊತೆ ಹಾಕಿಕೊಂಡು ಇಸ್ಪೀಟ್ ಆಡಲು ಕುಂತರೆಂದರೆ ನಡುರಾತ್ರಿಯ ತನಕ ಗುಂಡೂ ತುಂಡಿನ ಆರಾಧನೆಯಾಗುತ್ತಿತ್ತು.

ಅದೂ ಎಂಥಾ ಸಾಮ್ರಾಜ್ಯವೆಂದರೆ ಒಂದೆಡೆ ಇಸ್ಪೀಟ್ ಆಡುತ್ತಲೇ ತನ್ನ ಸುತ್ತ ಎರಡು ಡಜನ್ನುಗಳಷ್ಟು ಮೊಬೈಲುಗಳನ್ನು ಸಾಲಾಗಿ ಜೋಡಿಸಿ ಇಡುತ್ತಿದ್ದ. ಒಬ್ಬೊಬ್ಬರಿಗೆ ಒಂದೊಂದು ನಂಬರ್ ಕೊಟ್ಟು ಡೀಲು ನಡೆಸುವುದು ಆತನ ಶೈಲಿ. ಯಾವತ್ತೂ ಒಂದೇ ನಂಬರಿನಿಂದ ಆಪರೇಟ್ ಮಾಡದ ಮುಲಾಮು ಒಂದೊಂದು ಡೀಲಿಗೂ ಒಂದೊಂದು ಸಿಮ್‌ಕಾರ್ಡ್ ಬಳಸುತ್ತಿದ್ದ. ಒಂದಾನೊಂದು ಕಾಲಕ್ಕೆ ಒಪ್ಪತ್ತು ಅನ್ನಕ್ಕೂ ಗತಿಯಿಲ್ಲದ ಮುಲಾಮು ಇವತ್ತು ಕಮ್ಮಿಯೆಂದರೂ ಹತ್ತು ಕೋಟಿಯ ಧಣಿಯೆಂದು ಸ್ವತಃ ಭೂಗತ ಜಗತ್ತೇ ಹೇಳುತ್ತದೆ. ಅದಕ್ಕೆ ಕಾರಣನಾದವನು ಯಲಹಂಕದ ಬುಲೆಟ್ ರವಿ.

ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ಬೇಕಾಬಿಟ್ಟಿ ತಲೆ ಎತ್ತಿದ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮಂಚೂಣಿಯಲ್ಲಿದ್ದ ಬುಲೆಟ್ ರವಿ ಅದಕ್ಕೆ ಆಯುಧವಾಗಿ ಬಳಸಿದ್ದು ಮುಲಾಮನನ್ನೆ. ಜೊತೆಗೆ ತನ್ನದೇ ಪ್ರತ್ಯೇಕ ಗ್ಯಾಂಗ್


ಮುಲಾಮನ ಮನೆ

ಕೂಡ ಬುಲೆಟ್ ರವಿಗಿತ್ತು. ಹತ್ತೇ ವರ್ಷದಲ್ಲಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ನೂರು ಕೋಟಿಯಷ್ಟು ದುಡಿದ ಬುಲೆಟ್ ರವಿ ತನ್ನೆಲ್ಲಾ ಏಳಿಗೆಗೆ ಕಾರಣನಾದ ಮುಲಾಮನ ಋಣ ತೀರಿಸಿದ್ದು ಎರಡು ರೀತಿಯಲ್ಲಿ.

ಒಂದು ಮುಲಾಮನ ಕಡುವೈರಿ ಮಚ್ಚನ ಹತ್ಯೆಗೆ ನೆರವಾಗಿದ್ದು, ಮತ್ತೊಂದು ಮುಲಾಮನಿಗೆಂದೇ ರಾಜರಾಜೇಶ್ವರಿನಗರದಲ್ಲೊಂದು ಬಂಗಲೆ ಕಟ್ಟಿಸಲು ಕಾಣಿಕೆ ಸಲ್ಲಿಸಿದ್ದು. 2001 ರ ಹೊತ್ತಿಗೆ ರಿಯಲ್ ಎಸ್ಟೇಟ್ ಬೂಮ್ ಪರಾಕಾಷ್ಠೆಯಲ್ಲಿತ್ತು. ಲಗ್ಗೆರೆ, ಸುಂಕದ ಕಟ್ಟೆ, ಗೊಲ್ಲರ ಹಟ್ಟಿ, ಕಡಬಗೆರೆ ಇತ್ಯಾದಿ ಏರಿಯಾಗಳಲ್ಲಿ ರಿಯಲ್ ಎಸ್ಟೇಟ್ ಕಾರಣಕ್ಕೇ ಹುಟ್ಟಿಕೊಂಡ ಅಸಂಖ್ಯಾತ ರೌಡಿ ಗ್ಯಾಂಗುಗಳ ಪೈಕಿ ಮಂಡ್ಯ ಕೃಷ್ಣ ರಾಮ-ಲಕ್ಷ್ಮಣರ ಪಡೆ ಮುಲಾಮನ ಬೆನ್ನಿಗೆ ನಿಂತರೆ, ಕೋತಿರಾಮ, ಬೈಚಕುಪ್ಪೆ ಜಾನಿ, ಕುರಿಕೃಷ್ಣ ಸೂರಿ, ಹಂಡೆಕುಮಾರ, ಕಲಗಚ್ಚು ಸೀನ ಮುಂತಾದವರೆಲ್ಲ ಮಚ್ಚನ ಜೊತೆಯಾದರು.


ಬುಲೆಟ್ ರವಿ


ಕೊರಂಗು

ಸೈಟುಗಳ ವಿಷಯದಲ್ಲೇ ಭುಗಿಲೆದ್ದ ಮಾರಾಮಾರಿಗೆ ಮಚ್ಚನ ಇಬ್ಬರು ಶಿಷ್ಯರನ್ನು ಲಗ್ಗೆರೆಗೆ ಹೊತ್ತೊಯ್ದ ಮುಲಾಮನ ಗ್ಯಾಂಗ್ ಮಂಡ್ಯ ಕೃಷ್ಣನ ಅಡ್ಡೆಯಲ್ಲಿ ಅವರಿಬ್ಬರನ್ನು ಕೊಚ್ಚಿಕೊಂದರೆ ಪ್ರತೀಕಾರವಾಗಿ ಮಚ್ಚನ ಪಡೆ ಮುಲಾಮನ ಬಂಟ ಪುನಿತೇಶನನ್ನು ಹೆಗ್ಗನಹಳ್ಳಿಯಲ್ಲಿ ಕತ್ತರಿಸಿ ಹಾಕಿತು. ಇಂಥದೊಂದು ಗ್ಯಾಂಗ್‌ವಾರ್‌ನ ಪರಮಾವಧಿಯೇ ಮಚ್ಚನ ಹತ್ಯೆ.

2005 ರ ನವೆಂಬರ್ ಒಂದರಂದು ಯಲಹಂಕದ ಜಡ್ಜಸ್ ಕಾಲೋನಿಯಲ್ಲಿ ನಡುರಸ್ತೆಯಲ್ಲೇ ಮುಲಾಮನ ಗ್ಯಾಂಗ್ ಮಚ್ಚನನ್ನು ಕೊಚ್ಚಿ ಹಾಕಿತ್ತು. ಹೀಗೆ ಕಾಮಾಕ್ಷಿಪಾಳ್ಯದ ತನ್ನ ಮನೆಯನ್ನು ದೂರದ ಜಡ್ಜಸ್ ಕಾಲೋನಿಗೆ ಸ್ಥಳಾಂತರಿಸಿ ನಿಗೂಢವಾಗಿ ಬದುಕುತ್ತಿದ್ದ ಮಚ್ಚನ ವಾಸ್ತವ್ಯ ಪತ್ತೆಹಚ್ಚಿ ಆತನ ಓಡಾಟದ ಕುರಿತು ಮುಲಾಮನಿಗೆ ಮಾಹಿತಿ ಒದಗಿಸಿದ್ದೇ ಬುಲೆಟ್ ರವಿ.

ಮಚ್ಚನ ಶ್ರಾದ್ಧಕ್ಕೆ ಮೊದಲೇ ಮುಲಾಮನನ್ನು ತೆಗೆಯುತ್ತೇನೆಂದು ಪಣತೊಟ್ಟವನು ಕೋತಿರಾಮ. ಸತ್ತ ಹನ್ನೊಂದನೆಯ ದಿನಕ್ಕೇ ಶ್ರಾದ್ಧಕ್ಕೆಂದು ಜಮೆಯಾದ ಮಚ್ಚನ ಶಿಷ್ಯರು ಅದ್ಯಾವ ರೋಷದಿಂದ ಲಗ್ಗೆರೆಯ ಮುಲಾಮನ ಮನೆ ಮೇಲೆ ದಾಳಿಯಿಟ್ಟರೆಂದರೆ, ಆವತ್ತೇನಾದರೂ ಮುಲಾಮ ತನ್ನ ಲಗ್ಗೆರೆಯ ಮನೆಯಲ್ಲಿದ್ದರೆ ಕತೆಯೇ ಬೇರೆಯಾಗುತ್ತಿತ್ತು. ಆದರೆ ಮುಲಾಮ ಕಿಲಾಡಿ. ಇದನ್ನೆಲ್ಲ ಮೊದಲೇ ಲೆಕ್ಕ ಹಾಕಿ ದೂರದ ಹೈದರಾಬಾದ್ ಸೇರಿಕೊಂಡಿದ್ದ. ಆತನ ಲಗ್ಗೆರೆಯ ಮನೆ ಪೂರ್ತಿ ಮಚ್ಚನ ಶಿಷ್ಯರ ರೊಚ್ಚಿಗೆ ಸಿಲುಕಿ ಜಖಮ್ಮಾಗಿತ್ತು. ಹಾಗೇ ಮುಲಾಮನ ಮನೆಗೆ ನುಗ್ಗಿದ ಮಚ್ಚನ ಗ್ಯಾಂಗ್ ಅಷ್ಟಕ್ಕೇ ತೃಪ್ತಿಯಾಗದೇ ಲಗ್ಗೆರೆಯ ಮಂಡ್ಯ ಕೃಷ್ಣ ಎಂಬ ಮತ್ತೊಬ್ಬ ಮುಲಾಮನ ಬಂಟನನ್ನು ಕೊಚ್ಚಿ ಹಾಕಿತು.


ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಮುಲಾಮ ಮಾಡಿದ ಮತ್ತೊಂದು ಯಡವಟ್ಟೆಂದರೆ ಕೊಲೆಯಲ್ಲಿ ಕೊರಂಗು ಕೂಡ ಭಾಗವಹಿಸಿದ್ದ ಎಂದು ಶಿಷ್ಯರನ್ನು ಬಿಟ್ಟು ದೂರು ಕೊಡಿಸಿದ್ದು!

ಆ ಹೊತ್ತಿಗೆ ಕೋತಿರಾಮನ ಬೆನ್ನಿಗೆ ಕೊರಂಗು ನಿಂತಿದ್ದನಾದರೂ ಮಂಡ್ಯ ಕೃಷ್ಣನ ಕೊಲೆಯಲ್ಲಿ ಆತನ ಪಾತ್ರವಿರಲಿಲ್ಲ. ಅಲ್ಲಿಗೆ ಕೊರಂಗು ಮತ್ತು ಮುಲಾಮನ ನಡುವೆ ಹೊಸ ಜಿದ್ದಾಜಿದ್ದಿಯೊಂದು ಹೆಡೆಯೆತ್ತಿತ್ತು. ಮಚ್ಚನ ಹತ್ಯೆಗೆ ಪ್ರತೀಕಾರ ಹೇಳಲು ನಿಂತ ಆತನ ಗ್ಯಾಂಗ್‌ಗೆ ಕೋತಿರಾಮನೇ ದಂಡನಾಯಕನಾದರೂ ಗುರುವಿನಂತಿದ್ದ ಕೊರಂಗು ಮುಲಾಮನ ಬೇಟೆಗೆಂದೇ ಶಪಥಗೈದು ಬಿಟ್ಟಿದ್ದ. ರೊಚ್ಚಿಗೆದ್ದ ಮಚ್ಚನ ಗ್ಯಾಂಗ್ ತಿಮ್ಮೇನಹಳ್ಳಿ ಸೂರಿಯನ್ನು ಮುಗಿಸಿತು. ಸೈಕಲ್ ರವಿಗೆ ಸಾತು ಕೊಟ್ಟನೆಂದು ಮಂಡ್ಯದ ಜಡೇಜಾ ರವಿಯನ್ನು ಕೊಂದಿತು. ಆದರೆ ಮುಲಾಮ ಮಾತ್ರ ಮಚ್ಚನ ಶಿಷ್ಯರಿಗೆ ಸಿಗುವುದಿರಲಿ ಪೊಲೀಸರ ಕಣ್ಣಿಗೂ ಬೀಳದೇ ಭೂಗತನಾಗೇ ಇದ್ದುಬಿಟ್ಟ.

ಮೂರು ಕೋಟಿಯ ಬಂಗಲೆ!

ಕೆಲದಿನಗಳ ಕಾಲ ಆತ ಚಿಕ್ಕಮಗಳೂರಿನ ಯಾರದೋ ಕಾಫಿ ತೋಟದಲ್ಲಿದ್ದನಂತೆ. ಮಿಕ್ಕಂತೆ ಹೈದರಾಬಾದಿನಲ್ಲಿರುತ್ತಿದ್ದ. ಹಾಗೇ ಭೂಗತನಾಗಿದ್ದುಕೊಂಡೇ ಎಂಥಾ ಖತರ್‌ನಾಕ್ ಸ್ಕೆಚ್ಚಿಗೆ ಕೈಯಿಟ್ಟನೆಂದರೆ ಬದ್ಧವೈರಿ ಕೊರಂಗುನನ್ನು ಕೋರ್ಟಿಗೆ ತಂದಾಗಲೇ ನಿಕಾಲಿ ಮಾಡಲೆಂದು ಹೆಬ್ಬೆಟ್ಟು ಮಂಜನನ್ನು ರೆಡಿ ಮಾಡಿದ್ದ. ಆ ಹೊತ್ತಿಗೆ ಚಿತ್ರದುರ್ಗದ ಜೈಲಿನಲ್ಲಿದ್ದ ಕೊರಂಗು ಬೆಂಗಳೂರಿನ ಕೋರ್ಟ್ ಮುಗಿಸಿಕೊಂಡು ಪೊಲೀಸ್ ಬೆಂಗಾವಲಿನಲ್ಲೇ ವಾಪಸ್ಸು ಚಿತ್ರದುರ್ಗಕ್ಕೆ ಹೊರಟನಲ್ಲ; ಹಿರಿಯೂರಿನ ಸಮೀಪದ ಜವಗೊಂಡನಹಳ್ಳಿಯ ದಾಬಾದಲ್ಲಿ ಊಟಕ್ಕೆಂದು ಪೊಲೀಸ್ ವ್ಯಾನ್ ನಿಂತರೆ ಭೋಜನ ಮಗ್ನ ಕೊರಂಗು ಮೇಲೆ ಹೆಬ್ಬೆಟ್ಟು ಮಂಜನ ಗ್ಯಾಂಗ್ ದಾಳಿಯಿಟ್ಟಿತ್ತು.

ಬಂದೂಕುಧಾರಿ ಪೊಲೀಸರು ಬೆಂಗಾವಲಿಗಿದ್ದದ್ದನ್ನೂ ಲೆಕ್ಕಿಸದೇ ದಾಬಾಕ್ಕೆ ನುಗ್ಗಿದ ಹೆಬ್ಬೆಟ್ಟು ಮಂಜನ ದಾಳಿಗೆ ಕೊರಂಗು ಕೈಯೇ ಕತ್ತರಿಸಿ ಬಿತ್ತು, ಕೊರಂಗು ಶಿಷ್ಯ ದೀಪು ಗುಂಡಿಗೆ ಸಿಲುಕಿ ಸಿಂತಲ್ಲೇ ಹೆಣವಾಗಿದ್ದ, ಮುಲಾಮನ ಸ್ಕೆಚ್ಚೆಂದರೆ ಅದು. ಆತ ದುಡುಕುವುದಿಲ್ಲ, ಹುಂಬನಂತೆ ನುಗ್ಗಿ ಯಡವಟ್ಟು ಮಾಡಿಕೊಳ್ಳುವುದಿಲ್ಲ, ವರ್ಷಗಟ್ಟಲೇ ಕಾಯುತ್ತಾನೆ. ತನ್ನ ಎದುರಾಳಿಯ ಚಲನವಲನದ ಮೇಲೆ ನಿಖರವಾಗಿ ಕಣ್ಣಿಡುತ್ತಾನೆ. ತಣ್ಣಗೆ ಕೂತು ತನ್ನೆಲ್ಲಾ ಸಾಮರ್ಥ್ಯದೊಂದಿಗೆ ಮುಹೂರ್ತವಿಟ್ಟನೆಂದರೆ ಬೇಟೆ ಮಿಸ್ಸೇ ಇಲ್ಲ.


ಮುಲಾಮ

ಆದರೆ ಮಚ್ಚನ ಹಾಗೇ ಕೊರಂಗು ಮಾತ್ರ on the spot ನಿಕಾಲಿಯಾಗಲೇ ಇಲ್ಲ. ಬದುಕುಳಿದುಬಿಟ್ಟ. ಕೈ ಲ್ಯಾಪ್ಸ್ ಆಗಿತ್ತಾದರೂ ಕೊರಂಗು ತಾಕತ್ತಿರುವುದು ಆತನ ಮೆದುಳಿನಲ್ಲಿ. ಅದೆಂಥಾ ದುಷ್ಕಾಲದಲ್ಲೂ ತನ್ನ ಮಾತುಗಾರಿಕೆಯಿಂದಲೇ ಚಿಲ್ಟೆ ಹುಡುಗರನ್ನೂ ರೆಡಿ ಮಾಡಿ ಕೈಗೆ ಬಾಂಬ್ ಕೊಟ್ಟು ಕಾರ್ಯ ಸಾಧಿಸುವ ನಿಷ್ಣಾತಿ ಕೊರಂಗು.

ಇನ್ನೆಲ್ಲಿ ಕೊರಂಗು ತನ್ನನ್ನು ಬೇಟೆಯಾಡುತ್ತಾನೋ ಎಂದು ಭೀತಿಗೆ ಬಿದ್ದ ಮುಲಾಮನಿಗೆ ಒಂದೆಡೆ ಪೊಲೀಸ್ ಕಾಟ. ಮತ್ತೊಂದೆಡೆ ದುಷ್ಮನ್‌ಗಳ ಭಯ. ಮಗದೊಂದೆಡೆ ರಿಯಲ್ ಎಸ್ಟೇಟ್ ಆಮಿಷ. ಅದಕ್ಕೆಂದು ಲಗ್ಗೆರೆಯ ತನ್ನ ಮನೆಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟ. ಉಳಿದಂತೆ ಆತನ ಅಡ್ಡೆಯಂತಿದ್ದದ್ದು ರಾಜರಾಜೇಶ್ವರಿನಗರದ ನೆಲಗಳ್ಳ ಅರುಣಾ ಚಲಂ ಎಂಬ ಸ್ಲಂ ರಮೇಶ್ ಶಿಷ್ಯನ ಬೆಸ್ಟ್ ಕ್ಲಬ್ಬು ಬಿಟ್ಟರೆ ಯಲಹಂಕದ ಬುಲೆಟ್ ರವಿಯ ಅಡ್ಡೆ. ಹೀಗೆ ಬೆಸ್ಟ್ ಕ್ಲಬ್ಬಿನಲ್ಲಿ ಅಡ್ಡೆ ಹಾಕುತ್ತಿದ್ದಾಗಲೇ ಮುಲಾಮನಿಗೆ ದಕ್ಕಿದ್ದು ಬೆಮೆಲ್ ಲೇಔಟಿನ 50x80 ಸೈಟು. ಮೂಲತಃ ಬೆಮೆಲ್ ಲೇಔಟ್‌ಗೆ ಸೇರಿದ ಆ ಸೈಟನ್ನು ಉಂಬಳಿಯಂತೆ ಕೊಟ್ಟವನು ಬೆಸ್ಟ್ ಕ್ಲಬ್ ಮಾಲೀಕ ಅರುಣಾಚಲಂ.

ಬೆಮೆಲ್ ನೌಕರನಾಗಿದ್ದ ಅರುಣಾಚಲಂ ತಾನೇ ಬೆಮೆಲ್ ಹೌಸಿಂಗ್ ಸೊಸೈಟಿಗೆ ಅಧ್ಯಕ್ಷನಾಗಿ ರಾಜರಾಜೇಶ್ವರಿನಗರದ ಸಮೀಪ ಬೆಮೆಲ್ ಲೇಔಟ್ ನಿರ್ಮಿಸಿದ್ದ. ದೋಚಿದ ಜಮೀನಲ್ಲಿ ತನ್ನ ಬೆಸ್ಟ್ ಕ್ಲಬ್ಬನ್ನು ನಿರ್ಮಿಸಿ ಉಳಿಕೆ ಸೀಎ ಸೈಟನ್ನು ಕಂಡಕಂಡ ರೌಡಿ-ಪುಢಾರಿಗಳಿಗೆ ಹಂಚಿದ. ಈ ಪೈಕಿ 50x80 ಅಳತೆಯ ಒಂದು ಸೈಟನ್ನು ಮುಲಾಮ ಗಿಟ್ಟಿಸಿಕೊಂಡ. ಅದನ್ನು ತನ್ನ ಎರಡನೇ ಪತ್ನಿ ವಿಜಯಾ ಎಂಬಾಕೆಯ ಹೆಸರಿಗೆ ರಿಜಿಸ್ಟರ್ ಮಾಡಿಸಿದ.


ಈ ಸೈಟಿನಲ್ಲೇ ಮೂರಂತಸ್ತಿನ ಡ್ಯೂಪ್ಲೆಕ್ಸ್ ಬಂಗಲೆ ಎಬ್ಬಿಸಿ ಅದನ್ನೇ ತನ್ನ ಅಡ್ಡೆಯನ್ನಾಗಿ ಮಾಡಿಕೊಂಡ. ಬೆಳಿಗ್ಗೆಯಾದರೆ ಸಾಕು ಪಟಾಲಮ್ಮು ಸೇರುತ್ತಿತ್ತು. ಲಗ್ಗೆರೆಯ ತನ್ನ ಮನೆಗೆ ಮಚ್ಚನ ಶಿಷ್ಯರು ದಾಳಿಯಿಟ್ಟ ನಂತರ ಅಲ್ಲಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟಿದ್ದ ಮುಲಾಮ ಭಾರೀ ಮಹತ್ವಾಕಾಂಕ್ಷೆಯಿಟ್ಟುಕೊಂಡೇ ರಾಜರಾಜೇಶ್ವರಿನಗರದ ಬಂಗಲೆ ನಿರ್ಮಿಸಲಾರಂಭಿಸಿದ್ದ. ಅದಕ್ಕೆ ಬುಲೆಟ್ ರವಿ ಸೇರಿದಂತೆ ಬೆಂಗಳೂರಿನ ಕೆಲ ರಿಯಲ್ ಎಸ್ಟೇಟ್ ಖದೀಮರಿಂದ ದುಡ್ಡು ಕಿತ್ತಿದ್ದ. ಯಾವತ್ತು ಬುಲೆಟ್ ರವಿಯ ಹತ್ಯೆಯಾಯಿತೋ ಕಮೀಷನರ್ ಬದರಿ ಕಣ್ಣು ಲ್ಯಾಂಡ್ ಡೀಲ್‌ಗೆ ಕೈಯಿಟ್ಟಿದ್ದ ರೌಡಿಗಳ ಮೇಲೆ ಬಿದ್ದಿದೆ. ಈ ನಿಟ್ಟಿನಲ್ಲಿ ಪೊಲೀಸರ ಮೊದಲು ಕೈಹಾಕಿದ್ದು ಕೊರಂಗುನ ಚಿತ್ತೂರಿನ ಬಂಗಲೆಗೆ.

ಈಗ ಕೊರಂಗುನ ಕಡುವೈರಿ ಮುಲಾಮನ ಬಂಗಲೆಯೂ ಪೊಲೀಸರ ಪಾಲಾಗಿದೆ. ಮೊನ್ನೆ ಬೆಳ್ಳಂಬೆಳಿಗ್ಗೆಯೇ ಮುಲಾಮನ ಬಂಗಲೆಗೆ ನುಗ್ಗಿದ ಎಸಿಪಿ ಹಾದಿಮನಿ ತಂಡದಲ್ಲಿದ್ದದ್ದು ಇನ್ಸ್‌ಪೆಕ್ಟರ್‌ಗಳಾದ ಕೃಷ್ಣಕುಮಾರ್, ರವಿಕುಮಾರ್, ಅಶೋಕನ್, ಲೋಕೇಶ್ ಮುಂತಾದವರು. ಮುಲಾಮನ ಬಂಗಲೆಗೆ ನುಗ್ಗಿದ್ದೇ ಅಲ್ಲಿನ ಕೆಲಸಗಾರರನ್ನೆಲ್ಲ ಹೊರಹಾಕಿ ಬೀಗ ಜಡಿದಿದ್ದಾರೆ. ಸೈಟಿನ ದಾಖಲೆಗಳನ್ನೂ ವಶಪಡಿಸಿಕೊಂಡಿದ್ದಾರೆ. ಮುಲಾಮನನ್ನು ಎಳೆದೊಯ್ದು ಲಾಕಪ್ಪಿಗೆ ಹಾಕಿ ಈ ಪಾಟ ಮತ್ತು ಬಂದಿದ್ದೆಲ್ಲಿಂದ ಎಂದು ಬಾಯಿಬಿಡಿಸಿದ್ದಾರೆ.

ಮುಲಾಮು ಅದೇನೇನು ಲೆಕ್ಕ ಕೊಟ್ಟನೋ, ಪೊಲೀಸರು ಏನೇನು ಬಾಯಿಬಿಡಿಸಿದರೋ ಅಂತೂ ಪಾಪದ ಖಯಾಯಿ ಪೊಲೀಸರ ಪಾಲಾಗಿದೆ.

● ರಾ. ಸೋಮನಾಥ್

ಅಷ್ಟಕ್ಕೂ ಕಾನೂನು ಏನು ಹೇಳುತ್ತದೆ?



ಕ್ರಿಮಿನಲ್‌ಗಳ ಪಾಪದ ಖಯಾಯಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಕಮೀಷನರ್ ಶಂಕರ್ ಬಿದರಿಯವರ ಕಾಳಜಿಯೇನೋ ಪ್ರಾಮಾಣಿಕವಾದದ್ದೆ. ಈ ನಿಟ್ಟಿನಲ್ಲಿ ಬಿದರಿ ಬೆಂಗಳೂರಿನ ಹತ್ತು ಮಂದಿ ಶ್ರೀಮಂತ ರೌಡಿಗಳ ಪಟ್ಟಿ ಮಾಡಿದ್ದಾರೆ. ಇದರಲ್ಲಿ ಕಾಲಾಪತ್ಥರ್, ಸುನೀಲ, ಮುಲಾಮ, ಇಷ್ತಿಯಾಕ್ ಪೈಲ್ವಾನ್, ರೌಡಿ ಮಾಹಿನ್, ಬಿಟಿಎಂ ಲೇಔಟಿನ ರಿಯಲ್ ಎಸ್ಟೇಟ್ ಪಾತಕಿಗಳಾದ ರೇಹಾನ್ ಮತ್ತು ರಿಜ್ವಾನ್, ಕೊರಂಗು, ಗೋರಿಪಾಳ್ಯದ ಆರಿಫ್ ಮತ್ತು ಇಮ್ರಾನ್ ಮುಂತಾದವರ ಹೆಸರಿದೆಯಂತೆ!

ಆದರೆ ಇಂಥವರ ಆಸ್ತಿ ಮುಟ್ಟುಗೋಲಿಗೆ ನಿಜಕ್ಕೂ ಕಾನೂನಿನಲ್ಲಿ ಅವಕಾಶವಿದೆಯೆ?

ಪೊಲೀಸರದೇನಿದ್ದರೂ ಕ್ರಿಮಿನಲ್‌ಗಳನ್ನು ಹಿಡಿದು ಬಂಧಿಸುವ ಕೆಲಸವೇ ಹೊರತು ಅವರ ಆಸ್ತಿಪಾಸ್ತಿಗಳನ್ನು ಜಪ್ತಿ ಮಾಡಿಕೊಳ್ಳಲು ಕಾನೂನು ಪ್ರಕಾರ ಸಾಧ್ಯವಿಲ್ಲ. ಕಮಿಷನರ್ ಬದರಿಯಾಗಲಿ, ಸಿಸಿಬಿಯ ಎಸಿಪಿ ಹಾದಿಮನಿಯವರಾಗಲಿ ರೌಡಿಗಳ ಸೊತ್ತನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆಂದು ಏನೇ ಹೇಳಿಕೆ ಕೊಟ್ಟರೂ ನೇರವಾಗಿ ಆ ಕೆಲಸ ಮಾಡುವಂತಿಲ್ಲ, ಹೆಚ್ಚೆಂದರೆ ಪಾತಕಿಯೊಬ್ಬನನ್ನು ಬಂಧಿಸಿ ಆತನ ಗಳಿಕೆಯ ಲೆಕ್ಕ ಕೇಳಬಹುದು. ಅದರ ಸತ್ಯಾಸತ್ಯತೆ ಪರಿಶೀಲಿಸಿ ಕೇಂದ್ರ ಹಣಕಾಸು ಇಲಾಖೆಯ ಡೈರೆಕ್ಟೋರೇಟ್ ಆಫ್ ಎನ್‌ಫೋರ್ಸ್‌ಮೆಂಟ್‌ಗೆ ವರದಿ ಸಲ್ಲಿಸಬಹುದು. ಇಂಥ ವರದಿಯ ಆಧಾರದ ಮೇಲೆ ಕ್ರಿಮಿನಲ್‌ಗಳ ಸೊತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವಿರುವುದು ಡೈರೆಕ್ಟೋರೇಟ್ ಆಫ್ ಎನ್‌ಫೋರ್ಸ್‌ಮೆಂಟಗೇ. Prevention of money laundering act ಅಂದರೆ ಧನ ಶೋಧನಾ ನಿವಾರಣಾ ಅಧಿನಿಯಮ 2002 ರ ಸೆಕ್ಷನ್ 121 ರ ಪ್ರಕಾರ ಯಾರೇ ಕ್ರಿಮಿನಲ್ ಅಥವಾ ರಾಷ್ಟ್ರದ್ರೋಹಿಯೊಬ್ಬ ಅನೈತಿಕ, ಅಕ್ರಮ, ಪಾತಕ ಕೃತ್ಯಗಳಿಂದ ಗಳಿಸಿದ ಆಸ್ತಿ ಸಂಪತ್ತನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು. ಹಾಗಂತ ಏಕಾಏಕಿ ಪೊಲೀಸರಿಗಾಗಲಿ, ಸರ್ಕಾರಕ್ಕಾಗಲಿ ಆ ಅಧಿಕಾರವಿಲ್ಲ, ಸಂಬಂಧಪಟ್ಟ ಪಾತಕಿಯ ವಿರುದ್ಧ ಕೊಲೆ, ಕೊಲೆಯತ್ನ, ಸುಲಿಗೆ, ಸಶಸ್ತ್ರ ಹೊಂದಿದ್ದು, ಡಕಾಯಿತಿ, ರಾಬರಿ, ಅರಣ್ಯ ಸಂರಕ್ಷಣಾ ಕಾಯ್ದೆ, ಕಿಡ್ನಾಪ್, ವನ್ಯಜೀವಿ ಕಾಯ್ದೆ, ವೇಶ್ಯಾವಾಟಿಕೆ, ಸರ್ಕಾರಿ ನೌಕರನಾಗಿರದೆ ಭ್ರಷ್ಟಾಚಾರದ ಆರೋಪ ಇತ್ಯಾದಿ ಗಂಭೀರ ಸ್ವರೂಪದ ಪ್ರಕರಣಗಳು ದಾಖಲಾಗಿರಬೇಕಾಗುತ್ತದೆ.


ಇವತ್ತೇನಾದರೂ ಮುಖ್ಯಮಂತ್ರಿ ಯಡಿಯೂರಪ್ಪ ಮನಸ್ಸು ಮಾಡಿಬಿಟ್ಟರೆ ಮಂತ್ರಿಗಳಾದ ಜನಾರ್ದನ ರೆಡ್ಡಿ, ಶ್ರೀರಾಮುಲು, ಕರುಣಾಕರ ರೆಡ್ಡಿ ಮುಂತಾದವರನ್ನು ರಾತ್ರೋರಾತ್ರಿ ಜೈಲಿಗೆ ಹಾಕಿ ಅವರ ಬಜಾರಾದಿ ಆಸ್ತಿಪಾಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಳ್ಳಬೇಕೆಂದರೆ ಈ ಒಂದೇ ಕಾಯ್ದೆಯಲ್ಲಿ ಸಾಕಷ್ಟು ಅವಕಾಶಗಳಿವೆ.

ಪೊಲೀಸರು ಸಂಬಂಧಪಟ್ಟ ಆರೋಪಿಯನ್ನು ಬಂಧಿಸಿ ಆತನ ಹೇಳಿಕೆ ದಾಖಲಿಸಿ ಎನ್‌ಫೋರ್ಸ್‌ಮೆಂಟ್ ಡೈರೆಕ್ಟೋರೇಟಗೆ ದೂರು ಕೊಟ್ಟರೆ ಸಾಕು. ಮುಂದಿನ ಕಾರ್ಯಾಚರಣೆಯನ್ನೆಲ್ಲ ಅವರೇ ನಿರ್ವಹಿಸುತ್ತಾರೆ. ಬಂಧಿಸುವ ಅಧಿಕಾರವಿದೆ. ಜೈಲಿಗೆ ಹಾಕಬಹುದು. ಆಸ್ತಿ ಜಪ್ತಿ ಮಾಡಬಹುದು. ಮನೆ ಶೋಧಿಸಬಹುದು. ಇಂಥ ಕಾಯ್ದೆಯಡಿಯಲ್ಲಿ ಈಗ ಮುಲಾಮನ ಬಂಧನವಾಗಿದೆ. ಆತನ ಬಂಗಲೆಗೆ ಬೀಗ ಹಾಕಿ ಪೊಲೀಸರು ಅದನ್ನು ಎನ್‌ಫೋರ್ಸ್‌ಮೆಂಟಗೆ ಒಪ್ಪಿಸುತ್ತಾರೆ.

ಕಾಡುಗಳ್ಳ ವೀರಪ್ಪನ್, ಶಿಂಗ, ದಾವೂದ್ ಇಬ್ರಾಹಿಂ, ಮುಂಬಯಿ ಸ್ಫೋಟದ ಮೆಮೊನ್ ಸಹೋದರರ ಮೇಲೆಲ್ಲ ಇದೇ ಕೇಸಿದೆ.

ಆದರೆ ಮುಲಾಮನ ಮೇಲೆ ಈತನ ರಾಬರಿ, ಡಕಾಯಿತಿಯಂಥ ಯಾವುದೇ ಪ್ರಕರಣಗಳು ದಾಖಲಾಗಿಲ್ಲ, ಬಹುಶಃ ಕೊಲೆ ಮತ್ತು ಕೊಲೆ ಯತ್ನದ ಹೊರತಾಗಿ ಸುಲಿಗೆ, ಕಿಡ್ನಾಪ್‌ನಂಥ ಕೇಸುಗಳು ಮುಲಾಮನ ಮೇಲಿಲ್ಲ, ತಾನು ನ್ಯಾಯವಾಗಿಯೇ ದುಡಿದು ಮನೆ ಕಟ್ಟಿಸುತ್ತೇನೆಂದು ಸಾಬೀತು ಮಾಡಬೇಕಾದ ಜವಾಬ್ದಾರಿಯೇನಿದ್ದರೂ ಮುಲಾಮನದ್ದೆ. ಅದರಲ್ಲಿ ಆತ ಯಶಸ್ಸು ಗಳಿಸಿದರೆ ಮನೆ ದಕ್ಕುತ್ತದೆ. ಇಲ್ಲದೇ ಹೋದರೆ ಬಂಗಲೆ ಸರ್ಕಾರದ ಪಾಲಾಗುತ್ತದೆ.


ಲಂಗುಲಗಾಮಿಲ್ಲದ ಲಾಯರ್‌ಗಳು



ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ದಿನಕರನ್ ವಿರುದ್ಧ ಇರುವ ಆರೋಪಗಳ ವಿಚಾರಣೆ ಇನ್ನೂ ನಡೆಯುತ್ತಿರುವಾಗಲೇ, ಸತ್ಯಾಸತ್ಯತೆ ಏನೆಂದು ಗೊತ್ತಾಗುವ ಮುನ್ನವೇ ಬೆಂಗಳೂರಿನ ವಕೀಲರ ಸಂಘ ಅವರ ವಿರುದ್ಧ ನೇರ ಯುದ್ಧಕ್ಕಿಳಿದಿದೆ. ನವೆಂಬರ್ 9 ರಂದು ನಡೆದ ಕೋರ್ಟ್ ಕಲಾಪಗಳ ಬಾಯ್ಕಾಟ್ ಕರೆ ಈ ಕದನದ ಭಾಗವೇ ಆಗಿತ್ತು. ಆದರೆ ವಕೀಲರ ಒಂದು ಗುಂಪಿನ ಈ ಪ್ರತಿಭಟನೆಯು ಕೇವಲ ನ್ಯಾಯಾಂಗದ ಪಾವಿತ್ರ್ಯ ಕಾಪಾಡುವ ಕಾಳಜಿ ಹೊಂದಿತ್ತಾ ಎಂದು ಪರಿಶೀಲಿಸ ಹೊರಟರೆ ಇದರೊಳಗೆ ಬೇರೆ ಅನೇಕ ಪಿತೂರಿಗಳೂ ಕಾಣಿಸುತ್ತಿವೆ.

ಬೆಂಗಳೂರಿನ ವಕೀಲರ ಸಂಘಟನೆಯೊಳಗಿರುವ ಕೆಲವು ರೌಡಿ ಎಲಿಮೆಂಟುಗಳ ನೀಚತನ, ಕ್ರೌರ್ಯಗಳಿಂದಾಗಿ ಇಂಡಿಯಾ ದೇಶದ ನ್ಯಾಯಾಂಗದ ಇತಿಹಾಸದಲ್ಲೇ ಕಂಡುಕೇಳರಿಯದ ದುರ್ಘಟನೆ ಮೊನ್ನೆ ನವೆಂಬರ್ 9 ರಂದು ಕರ್ನಾಟಕ ಹೈಕೋರ್ಟ್‌ನಲ್ಲಿ ನಡೆದುಹೋಗಿದೆ.


ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ದಿನಕರನ್‌ರ ವಿರುದ್ಧ ಇರುವ ಆರೋಪಗಳ ವಿಚಾರಣೆ ಇನ್ನೂ ನಡೆಯುತ್ತಿರುವಾಗಲೇ, ಸತ್ಯಾಸತ್ಯತೆ ಏನೆಂದು ಗೊತ್ತಾಗುವ ಮುನ್ನವೇ ಬೆಂಗಳೂರಿನ ವಕೀಲರ ಸಂಘ ಅವರ ವಿರುದ್ಧ ನೇರ ಯುದ್ಧಕ್ಕಿಳಿದಿದೆ. ನವೆಂಬರ್ 9 ರಂದು ನಡೆದ ಕೋರ್ಟ್ ಕಲಾಪಗಳ ಬಾಯ್ಕಾಟ್ ಕರೆ ಈ ಕದನದ ಭಾಗವೇ ಆಗಿತ್ತು.



ನ್ಯಾ.ವಿ.ಗೋಪಾಲ್ ಗೌಡ

ಆದರೆ ವಕೀಲರ ಒಂದು ಗುಂಪಿನ ಈ ಪ್ರತಿಭಟನೆಯು ಕೇವಲ ನ್ಯಾಯಾಂಗದ ಪಾವಿತ್ರ್ಯ ಕಾಪಾಡುವ ಕಾಳಜಿ ಹೊಂದಿತ್ತಾ ಎಂದು ಪರಿಶೀಲಿಸ ಹೊರಟರೆ ಇದರೊಳಗೆ ಬೇರೆ ಅನೇಕ ಪಿತೂರಿಗಳೂ ಕಾಣಿಸುತ್ತಿವೆ.

ನ್ಯಾಯಮೂರ್ತಿಗಳಾದ ನಾಗಮೋಹನದಾಸ್, ನ್ಯಾ. ಗೋಪಾಲ ಗೌಡ, ನ್ಯಾ. ಬಿ.ವಿ. ನಾಗರತ್ನರ ವಿರುದ್ಧ ನಡೆದಿರುವ ವೈಯಕ್ತಿಕ ದಾಳಿಗಳು, ವಕೀಲರಾದ ರವಿವರ್ಮಕುಮಾರ್, ಅಖಿಲ ದಲಿತ ವಕೀಲರ ಮುಖಂಡ ಸುಬ್ರಮಣ್ಯರನ್ನು ಗುರಿಯಾಗಿಸಿ ನಡೆಸಿರುವ ದೈಹಿಕ ಹಲ್ಲೆಗಳು ಬೇರೆಯದೆ ಕತೆ ಹೇಳುತ್ತಿವೆ. ಈ ದಾಳಿಗಳ ಹಿಂದಿದ್ದ ಜನ ಯಾರೆಂದು ನೋಡಲು ಹೊರಟರೆ ಆಶ್ಚರ್ಯವಾಗುತ್ತದೆ.



ರವಿವರ್ಮಕುಮಾರ್


ಅದು ಸಂಘ ಪರಿವಾರದ ಕೇಸರಿ ವಕೀಲರ ಗುಂಪು!

ಇವರೊಂದಿಗೆ ವಕೀಲರ ಸಂಘದ ಕೆಲವು ಒಕ್ಕಲಿಗ ಗುಂಪಿನ ವಕೀಲರೂ ಗಲಾಟೆಗೆ ಪ್ರಚೋದನೆ ನೀಡಿದ್ದಾರೆ. ಒಟ್ಟಾರೆಯಾಗಿ ಇದೊಂದು ವ್ಯವಸ್ಥಿತ ಪಿತೂರಿಯಾಗಿತ್ತೆಂಬ ಬಗ್ಗೆ ಈಗ ಯಾರಲ್ಲೂ ಅನುಮಾನಗಳು ಉಳಿದಿಲ್ಲ.

ಮೀಟಿಂಗ್‌ನಲ್ಲೂ ಗೂಂಡಾಗಿರಿ

ನವೆಂಬರ್ 9 ರಂದು ಕೋರ್ಟ್ ಕಲಾಪ ಬಹಿಷ್ಕರಿಸುವ ಬಗ್ಗೆ ತೀರ್ಮಾನಿಸಲು ಬೆಂಗಳೂರು ವಕೀಲರ ಸಂಘದ ಲೀಡರ್‌ಗಳು ನವೆಂಬರ್ 4 ರಂದು ಒಂದು ಸಭೆ ನಡೆಸಿದರು. ಗಲಾಟೆ, ಹಲ್ಲೆಗಳ ವ್ಯವಸ್ಥಿತ ಪಿತೂರಿ ಶುರುವಾಗಿದ್ದೇ ಇಲ್ಲಿಂದ ಎಂಬುದಕ್ಕೆ ಆ ಸಭೆ ನಡೆದ ವಿಧಾನವೇ ಸಾಕ್ಷಿಯಾಗಿದೆ.

ಸಾಮಾನ್ಯವಾಗಿ ಈ ಮೊದಲೆಲ್ಲಾ ವಕೀಲರ ಸಂಘದ ಜನರಲ್ ಬಾಡಿ ಮೀಟಿಂಗ್‌ಗಳು ಹೈಕೋರ್ಟ್ ಕಟ್ಟಡದಲ್ಲಿ ನಡೆಯುತ್ತಿದ್ದವು. ಆದರೆ ನವೆಂಬರ್ 4 ರ ಸಭೆಯನ್ನು ಅಧ್ಯಕ್ಷ ಪುಟ್ಟೇಗೌಡ ಮತ್ತವರ ಗುಂಪು ಬೇಕಂತಲೇ ಕಾವೇರಿ ಭವನದ ಹಿಂದಿರುವ ಸಿಟಿ ಸಿವಿಲ್ ಕೋರ್ಟ್ ಕಟ್ಟಡದಲ್ಲಿ ಕರೆಯಿತು. ಆ ಸಭೆಯಲ್ಲಿ ಬಾಯ್ಕಾಟ್ ಬಗ್ಗೆ ರಣೋತ್ಸಾಹ ತೋರಿದ್ದು ಸಂಘಪರಿವಾರದ ವಕೀಲೆ ಪ್ರಮೀಳಾ ನೇಸರ್ಗಿ. ಅವತ್ತು ಅಲ್ಲಿ ನೆರೆದಿದ್ದ ಮುನ್ನೂರು ನಾನ್ನೂರು ವಕೀಲರ ಪೈಕಿ ಅರ್ಧದಷ್ಟು ಮಂದಿ ಬಾಯ್ಕಾಟ್‌ಗೆ ವಿರುದ್ಧವಿದ್ದರು. ಅನೇಕ ವಕೀಲರು ಚರ್ಚೆಯಲ್ಲಿ ಭಾಗವಹಿಸಲು ತಮ್ಮ ಹೆಸರನ್ನು ಬರೆದು ಚೀಟಿ ಕಳಿಸಿದ ಮೇಲೂ ಅಂತವರಿಗೆ ಅವಕಾಶ ನೀಡಲೇ ಇಲ್ಲ. ಅಭಿಪ್ರಾಯ ವ್ಯಕ್ತಪಡಿಸಿದ ಕೆಲವರು ಬಾಯ್ಕಾಟ್ ಬೇಕಿಲ್ಲ ಎಂದದ್ದಕ್ಕೆ ಅವರನ್ನು ಸಭೆಯಿಂದ ಆಚೆ ತಳ್ಳಲಾಯಿತು. ಒಟ್ಟಿನಲ್ಲಿ ತರಾತುರಿಯಿಂದ ನವೆಂಬರ್ 9 ರಂದು ಬಾಯ್ಕಾಟ್ ನಿರ್ಣಯ ಪಾಸಾಗುವಂತೆ ಒಂದು ಗುಂಪು ನೋಡಿಕೊಂಡಿತು. ಈ ನಿರ್ಣಯ ತಪ್ಪು ಎಂದವರ ಮೇಲೆ ಏರಿ ಹೋದ ಕೆಲ ಸಂಘ ಪರಿವಾರದ ಲಾಯರ್‌ಗಳು 'ಅವನ್ನ ಒದೀರಿ, ಆಚೆ ಹಾಕಿ' ಎಂದೂ ಆರ್ಭಟಿಸಿದರು.



ದಿನಕರನ್

Once again ಈ ನಿರ್ಣಯ ಮಂಡಿಸಿ ನಂತರದ ಪತ್ರಿಕಾಗೋಷ್ಠಿಯಲ್ಲಿ ಬಾಯ್ಕಾಟ್ ಕರೆ ಬಗ್ಗೆ ಮಾತನಾಡಿದ್ದು ಬಿಜೆಪಿಯ ಪ್ರಮೀಳಾ ನೇಸರ್ಗಿ! ಸಭೆಯಲ್ಲಿ ಸಂಘದ ಅಧ್ಯಕ್ಷ ಪುಟ್ಟೇಗೌಡ, ಸೆಕ್ರೆಟರಿ ರಾಜಣ್ಣ, ಖಜಾಂಚಿ ರವಿ ಇದ್ದರಾದರೂ ಅವರಿಗಿಂತ ಹೆಚ್ಚು ಆರ್ಭಟಿಸಿದವರು ಸುಬ್ರಮಣ್ಯ ಜೋಯಿಸ್, ಐತಾಳ್, ರೆಡ್ಡಿ, ಶ್ರೀನಿವಾಸ್, ಲಲಿತಾಂಬ ಇತ್ಯಾದಿಗಳು.

ಇವರಲ್ಲಿ ಬಹುತೇಕರು ಕೇಸರಿ ಸಿದ್ಧಾಂತಿಗಳೆಂದು ಇನ್ನುಳಿದ ವಕೀಲರೇ ಹೇಳುತ್ತಿದ್ದಾರೆ.

ಕೇಸರಿ ಕೆಸರು

ನ್ಯಾ. ದಿನಕರನ್‌ರಿಗೆ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ಬಡ್ತಿ ನೀಡುವ ವಿಚಾರ ಈಗ ಪೆಂಡಿಂಗ್‌ನಲ್ಲಿದೆ. ಅಲ್ಲದೆ ಅವರ ವಿರುದ್ಧ ಇರುವ ಆರೋಪಗಳ ಬಗ್ಗೆ ತನಿಖೆಯೂ ನಡೆಯುತ್ತಿದೆ. ನ್ಯಾಯಾಂಗದ ನೀತಿಸಂಹಿತೆಯನ್ನೇ ಆಧರಿಸಿ ಹೇಳಬೇಕೆಂದರೆ ತಮ್ಮ ಮೇಲಿನ ಆರೋಪಗಳು ಸುಳ್ಳೆಂದು ಸಾಬೀತಾಗುವವರೆಗಾದರೂ ನ್ಯಾ. ದಿನಕರನ್ ದೀರ್ಘ ರಜೆಯ ಮೇಲೆ ತೆರಳಿದ್ದರೆ ಸರಿಯಾಗುತ್ತಿತ್ತು. ಆದರೆ ಈ ಅಘೋಷಿತ ನೀತಿಸಂಹಿತೆ ಸ್ವಯಂಸ್ಫೂರ್ತಿಯಿಂದ ಜಾರಿಯಾಗಬೇಕೆ ವಿನಃ ಬಂದ್, ಬಾಯ್ಕಾಟ್‌ಗಳ ಮೂಲಕ ಹೇರಲಾಗುವುದಿಲ್ಲ. ಅತ್ತ ಚೆನ್ನೈ ವಕೀಲರೂ ನ್ಯಾ. ದಿನಕರನ್ ವಿರುದ್ಧ ದನಿ ಎತ್ತುತ್ತಲೇ ಇದ್ದಾರೆ. ಆದರೆ ಬೆಂಗಳೂರು ವಕೀಲರ ಸಂಘದೊಳಗೆ ಸೇರಿಕೊಂಡಿರುವ ಕೇಸರಿ ಕೆಸರಿನ ಕೆಲ ವಕೀಲರಿಗೆ ನ್ಯಾಯಾಂಗದ ಪಾವಿತ್ರ್ಯ ಕಾಪಾಡುವುದೊಂದೆ ಅಜೆಂಡಾ ಆಗರಲಿಲ್ಲ, ನ್ಯಾ. ದಿನಕರನ್ ದಲಿತ ಜನಾಂಗದವರೆಂಬ ಅಸಹನೆ ಒಂದೆಡೆಯಿತ್ತು. ಜೊತೆಗೆ ಕೋರ್ಟ್‌ಗಳಲ್ಲಿ ಗಾಂಧಿ ಫೋಟೋ ಹೊರತುಪಡಿಸಿ ಉಳಿದವುಗಳನ್ನು ತೆಗೆದು ಹಾಕುವಂತೆಯೂ, ನ್ಯಾಯಾಲಯಗಳಲ್ಲಿ ದೇವಾನು ದೇವತೆಗಳ ಫೋಟೋಗಳ ಪೂಜೆ ಪುರಸ್ಕಾರಗಳನ್ನು ನಿಲ್ಲಿಸುವಂತೆಯೂ ದಿನಕರನ್ ಸುತ್ತೋಲೆ ಹೊರಡಿಸಿದ್ದರು. ಇದು ನಮ್ಮ ಜಾತ್ಯತೀತ ಸಂವಿಧಾನದ ನೀತಿಯೇ ಆಗಿದೆ. ಆದರೆ ಈ ಸುತ್ತೋಲೆ ನೋಡಿ ಕಿಟಾರನೆ ಕಿರುಚಿಕೊಂಡ ಕೆಲ ಹಿಂದೂತ್ವವಾದಿ ವಕೀಲರು ಆಗಲೂ ಪ್ರತಿಭಟಿಸಿದ್ದರು. ಈ ಮಧ್ಯೆ ನ್ಯಾಯಾಧೀಶರ ಪರವಾಗಿಯೂ ಕೆಲವರು ದನಿ ಎತ್ತಿದ್ದರು. ದಲಿತ ವಕೀಲರ ಸಂಘಟನೆ, ಹಿರಿಯ ನ್ಯಾಯವಾದಿ ರವಿವರ್ಮಕುಮಾರ್ ಮುಂತಾದವರು ವಕೀಲರ ಸಂಘದ ಈ ಕೇಸರಿ ಪಟಾಲಂನ ದುಂಡಾ ವರ್ತನೆಗಳ ವಿರುದ್ಧ ನಿಲುವು ತಳೆದಿದ್ದರು.

ನವೆಂಬರ್ 9 ರಂದು ಈ ಕೇಸರಿ ವಕೀಲರ ಗ್ಯಾಂಗ್ ಇವರೆಲ್ಲರನ್ನೂ ಹಲ್ಲೆಗೆ ಗುರಿ ಮಾಡಿಕೊಂಡು ಬಡ್ಡಿ ಸಮೇತ ಸೇಡು ತೀರಿಸಿಕೊಂಡಿದೆ.

ಬಾಯ್ಕಾಟ್ ಕರೆಗೆ ಓಗೊಡುವುದು, ಬಿಡುವುದು ಆಯಾ ವಕೀಲರ ವೈಯಕ್ತಿಕ ನಿರ್ಧಾರಕ್ಕೆ ಬಿಟ್ಟ ವಿಚಾರ. ಆದರೆ ಯಾವ ನ್ಯಾಯಾಧೀಶರೂ ಕಲಾಪ ನಡೆಸದಂತೆ ಗೂಂಡಾಗಿರಿ ಮಾಡುವ ಹಕ್ಕು ವಕೀಲರಿಗಿಲ್ಲ. ಆದರೂ ನವೆಂಬರ್ 9 ರ ಬೆಳಗ್ಗೆ ಹನ್ನೊಂದೂವರೆಯ ಹೊತ್ತಿಗೆ ಈ ಕೇಸರಿ ವಕೀಲರ ಗ್ಯಾಂಗ್ ಹೈಕೋರ್ಟಿಗೆ ದಾಳಿ ಇಟ್ಟಿತು. ಮೂರನೇ ಮಹಡಿಯ ಒಂದನೇ ಕೋರ್ಟ್ ಹಾಲ್‌ಗೆ ನುಗ್ಗಿದಾಗ ಅಲ್ಲಿ ನ್ಯಾ. ದಿನಕರನ್ ಆರೆಂಟು ಕೋರ್ಟ್ ನೌಕರರು, ವಕೀಲರಾದ ರವಿವರ್ಮಕುಮಾರ್ ಅಖಿಲಾ, ಜಗದೀಶ್ ಹಾಗೂ ಕ್ಲಿಫ್ಟನ್ ಇದ್ದರು. ಜೊತೆಗೆ ಹತ್ತಿಪ್ಪತ್ತು ಕಕ್ಷಿದಾರರೂ ಹಾಜರಿದ್ದರು. ಆಗ ಅಲ್ಲಿಗೆ ನುಗ್ಗಿ ಬಂದ ಗುಂಪು ನ್ಯಾ. ದಿನಕರನ್ ವಿರುದ್ಧ 'ಡೌನ್ ಡೌನ್' ಘೋಷಣೆ ಹಾಕಿದೆ. ರವಿವರ್ಮರನ್ನು ಬೆದರಿಸುತ್ತಾ 'ಎತ್ರೋ ಅವನ್ನ, ತಗೊಳ್ರೋ ಜಲ್ಲಿ ಕಲ್ಲು' ಎಂದಬ್ಬರಿಸಿದ ಈ ಗುಂಪಿನಲ್ಲಿ ಎದ್ದು ಕಾಣುತ್ತಿದ್ದ ದಾಳಿಖೋರರಲೆಂದರೆ ಲಲಿತಮ್ಮ ಎಂಬಾಕೆ!

ಈಕೆ ವಕೀಲರ ಸಂಘದೊಳಗೆ ಸೇರಿಕೊಂಡಿರುವ **RSS** ಏಜೆಂಟ್! 'ಏಯ್ ಎದ್ದೋಗೋ ಆಚೆಗೆ' ಎಂಬ ಬೈಯ್ಗುಳವೂ ಸೇರಿದಂತೆ ಅನೇಕ ರೀತಿಯ ಈ ಗುಂಪಿನ ಗಲಾಟೆ ಸಹಿಸಲಾಗದೆ ಕಲಾಪ ನಿಲ್ಲಿಸಿ ನ್ಯಾಯಾಧೀಶರು ಎದ್ದು ಹೊರಟುಹೋದರು. ಆದರೆ ಹಾಗೆ ಹೊರಡುವ ಮುನ್ನ ಅವರು ಒಂದು ತಪ್ಪು ಮಾಡಿಬಿಟ್ಟರು. ಅದೇ ಕೋರ್ಟ್ ಹಾಲ್‌ನಲ್ಲಿ ಅನೇಕ ಪೊಲೀಸರಿದ್ದರೂ ಕೂಡ ಗಲಾಟೆ ಮಾಡುತ್ತಿದ್ದವರನ್ನು ತಡೆಯಬೇಡಿ ಎಂದು ಆದೇಶಿಸಿಬಿಟ್ಟರು. ಇದರಿಂದ ಉನ್ಮಾದಗೊಂಡ ಗುಂಪು ಅಲ್ಲಿಂದ ಸೀದಾ ನ್ಯಾ. ನಾಗಮೋಹನ್ ದಾಸ್ ಹಾಗೂ ನ್ಯಾ. ಗೋಪಾಲ ಗೌಡ ಹಾಗೂ ನ್ಯಾ. ನಾಗರತ್ನರವ ಕೋರ್ಟ್ ಹಾಲ್‌ಗಳಿಗೆ ನುಗ್ಗಿತು. ▶▶▶



ಹಲ್ಲೆಗೊಳಗಾದ ದಲಿತ ವಕೀಲ ಸುಬ್ರಮಣ್ಯ...

ವಕೀಲರು ಕಾನೂನಿಗಿಂತ ದೊಡ್ಡವರಾ?

ಅದು ವಕೀಲರಿರಲಿ ಅಥವಾ ಸಾಮಾನ್ಯ ಪ್ರಜೆಯಾಗಲಿ, ಪ್ರತಿಯೊಬ್ಬರಿಗೂ ಭ್ರಷ್ಟಾಚಾರ ಇರದ ಸಮಾಜ ಬೇಕಿದೆ ಎಂಬುದು ಸತ್ಯ. ಆದರೆ ಯಾರೊಬ್ಬರ ಮೇಲಾಗಲಿ ಭ್ರಷ್ಟಾಚಾರ, ಹತ್ಯೆ, ಅಧಿಕಾರ ದುರುಪಯೋಗ ಹೀಗೆ ಏನೇ ಆರೋಪ ಬಂದಾಕ್ಷಣ ಅದೇ ತೀರ್ಪು ಆಗಿಬಿಡುವುದಿಲ್ಲ. ಉದಾಹರಣೆಗೆ ಶಾಕರೆ ಕಲೀಲ್‌ರನ್ನು ಕೊಂದ ಶ್ರದ್ಧಾನಂದನ ಮೇಲೆ ಕೊಲೆ ಆರೋಪ ಬಂದಾಕ್ಷಣ ಅವನನ್ನು ಲಾಯರ್‌ಗಳು ಅಪರಾಧಿ ಎಂದು ನಿರ್ಧರಿಸಿಬಿಡಲಿಲ್ಲ. ಅವನ ಪರವಾಗಿ ವಾದಿಸಿದ ಲಾಯರ್‌ಗಳು ಇರಲಿಲ್ಲವೆ?

ಕೆ.ಜಿ.ಎಫ್. ಶಾಸಕ ಸಂಪಂಗಿ 5 ಲಕ್ಷ ಲಂಚ ತೆಗೆದುಕೊಂಡು ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದ. ಆದರೂ ಅವನು ನಿರ್ದೋಷಿ ಎಂದು ಅವನ ಲಾಯರ್‌ಗಳು ವಾದಿಸುತ್ತಿಲ್ಲವೆ?

ಯಾರೇ ಒಬ್ಬನನ್ನು ಪೊಲೀಸರು ಅಪರಾಧಿ ಎಂದು ಆರೋಪಿಸಿದಾಗ, ಆ ಆರೋಪಿಯನ್ನು ನಿರಪರಾಧಿ ಎಂದು ವಾದಿಸುವ ಲಾಯರ್‌ಗಳು ಇದ್ದೇ ಇರುತ್ತಾರೆ.


ಇಲ್ಲಿ ಒಂದು ವಿಚಾರ ಸ್ಪಷ್ಟಪಡಿಸಬೇಕಿದೆ. ಸಾಮಾನ್ಯನೊಬ್ಬನ ಮೇಲಿನ ಆರೋಪಗಳಿಗೂ ಹೈಕೋರ್ಟ್ ನ್ಯಾಯಾಧೀಶರ ಮೇಲಿನ ಆರೋಪಗಳಿಗೂ ವ್ಯತ್ಯಾಸವಿದ್ದೇ ಇದೆ. ನ್ಯಾಯಾಂಗ ಅಂದರೆ ಅದೊಂದು ರೀತಿ **Custodian of law** ಇದ್ದಂತೆ. ಅದೊಂದು **Noble profession** ಕೂಡ ಹೌದು. ಈ ವೃತ್ತಿಯಲ್ಲಿರುವವರಿಗೆ ಅದರದ್ದೇ ಆದ ಮೌಲ್ಯ ಹಾಗೂ ನೀತಿಸಂಹಿತೆ ಇದೆ. ನ್ಯಾ. ದಿನಕರನ್ ಇದನ್ನು ಸ್ವಯಂಪ್ರೇರಣೆಯಿಂದ ಪಾಲಿಸಿದಿದ್ದರೆ ಅದೊಂದು ಶ್ಲಾಘನೀಯ ಕೆಲಸವಾಗಿರುತ್ತಿತ್ತು.

ಅದಿರಲಿ,

ಭ್ರಷ್ಟಾಚಾರದ ವಿರುದ್ಧ ಈ ಪಾಟ ಹೋರಾಟ ನಡೆಸುತ್ತಿದ್ದಾರಲ್ಲ ಬೆಂಗಳೂರಿನ ಕೇಸರಿ ವಕೀಲರು...

ಇವರ ಸಂಘದ ಎಲೆಕ್ಷನ್ ಹೇಗೆ ನಡೆಯುತ್ತಿದೆ. ಅಲ್ಲಿ ಜಾತಿ, ತೋಳ್ಬಲ, ದುಡ್ಡು ಗುಂಡು-ತುಂಡು ಎಲ್ಲಾ ನಡೆಯುತ್ತಿದೆಯಲ್ಲ, ಅದು ಭ್ರಷ್ಟತೆಯಲ್ಲವಾ?

ವಕೀಲರು ಕೊಂಚ ಆತ್ಮವಿಮರ್ಶೆ ಮಾಡಿಕೊಳ್ಳಲಿ.



ಜರ್ನಲಿಸ್ಟ್ ವೆಂಕಟೇಶನ ಕಂಪ್ಲೇಂಟ್ ನಾಟಕ

ದಲಿತ ವಕೀಲ ಸುಬ್ರಮಣ್ಯ ನ್ಯಾ. ದಿನಕರನ್ ವಿರುದ್ಧದ ಬಾಯ್ಕಾಟ್ ಕರೆ ವಿರೋಧಿಸಿದರೆಂದು ಕೇಸರಿ ವಕೀಲರು ಭಯಾನಕ ಹಲ್ಲೆ ನಡೆಸಿಬಿಟ್ಟರು. ಆದರಲ್ಲಿ ದಲಿತನೊಬ್ಬ ಬ್ರಾಹ್ಮಣ-ಒಕ್ಕಲಿಗ ನಾಯಕತ್ವದ ನಿರ್ಣಯಗಳನ್ನು ಪ್ರಶ್ನಿಸುವ ಧೈರ್ಯ ತೋರಿದನಲ್ಲ ಎನ್ನುವ ಸಿಟ್ಟೇ ಪ್ರಧಾನವಾಗಿತ್ತು. ದಲಿತ ಸುಬ್ರಮಣ್ಯರನ್ನು ಈ ಕೇಸರಿ ಗುಂಪು ಅಟ್ಟಾಡಿಸಿ ಹೊಡೆಯುತ್ತಿದ್ದಾಗ ...ಲ್ಲೇ ಇದ್ದ ವೆಂಕಟೇಶ್ ಎಂಬ ಫೋಟೋಗ್ರಾಫರ್ ಫೋಟೋ ತೆಗೆದ ಎಂದು ಆತನ ಮೇಲೂ ...ಲ್ಲೆಯಾಯಿತು.

ಈಗ ಏನಾಗಿದೆ ಗೊತ್ತೆ?

ವೆಂಕಟೇಶ್ ವಕೀಲರ ವಿರುದ್ಧ ಪೊಲೀಸರಿಗೆ ...ಲ್ಲೆಯ ದೂರು ನೀಡುವ ಬದಲು ಚೈನ್ ಕಳುವಾಗಿದೆ ಎಂದು ಗೋಳಾಡಿದ್ದಾರೆ!

ಸಂಘ ಪರಿವಾರದೊಂದಿಗಿನ ಈತನ ಲಿಂಕ್‌ಗಳೇ ...ದಕ್ಕೆ ಕಾರಣ ಎನ್ನುವ ಅನುಮಾನಗಳಿವೆ.

▶▶

ಈ ರೌಡಿ ಲಾಯರ್‌ಗಳಿದ್ದ ಗುಂಪಿನಲ್ಲಿ ಒಬ್ಬನಂತೂ ... ನಾಗಮೋಹನ ದಾಸ್‌ರತ್ತ ಕೈ ತೋರಿಸುತ್ತಾ "ಇವನು ಕಮ್ಯುನಿಸ್ಟ್ ಕಣ್ರೋ" ಅಂದ.

ಏನಿದರ ಅರ್ಥ?

...ನ್ಯಾ. ದಿನಕರನ್ ಮೇಲಿರುವ ಆರೋಪಗಳಿಗೂ ... ನಾಗಮೋಹನ್ ದಾಸ್ ಈ ಹಿಂದೆ ಕಮ್ಯುನಿಸ್ಟ್ ...ಕ್ಷವೊಂದರ ಸದಸ್ಯ ಆಗಿದ್ದರೆಂಬುದಕ್ಕೂ ಹೇಗೆ, ಯಾವ ...ಕ್ ಕಾಣಿಸಿರಬಹುದು ಈ ರೌಡಿ ಲಾಯರ್‌ಗಳಿಗೆ?

ಇನ್ನು ನ್ಯಾ. ಗೋಪಾಲ ಗೌಡರೊಂದಿಗೆ ತಾನೆ ಏನು....

ಅವರ ಮುಖ, ಬಣ್ಣ, ಕುಟುಂಬದ ಬಗ್ಗೆಯೆಲ್ಲಾ ...ಶಾಯವಾಗಿ ಕಿರುಚಾಡಿದ್ದಾರೆ. ಪ್ರಖ್ಯಾತ ...ಯಾಧೀಶರಾಗಿದ್ದ ವೆಂಕಟಾಚಲರ ಪುತ್ರಿ ನ್ಯಾ. ನಾಗರತ್ನರ ...ರುದ್ಧವೂ ಒರಟಾಗಿ ನಡೆದುಕೊಂಡಿದ್ದಾರೆ. ಈ ...ನಾಟೆಯುದ್ದಕ್ಕೂ, ಈ ಕೇಸರಿ ಲಾಯರ್‌ಗಳು ...ನ್ಯಾ-ಅಶ್ಲೀಲ ಮಾತುಗಳನ್ನೆಲ್ಲಾ ಆಡಿ ತಮ್ಮ ಬಾಯಿ ...ಗೂ ಬದುಕು ಎಷ್ಟು ಹೊಲಸೆಂಬುದನ್ನು ...ಸಿಕೊಂಡಿದ್ದಾರೆ. ಈ ಗುಂಪು ನ್ಯಾ. ಗೋಪಾಲ ...ರ ಹಾಗೂ ನಾಗರತ್ನರನ್ನು ಕೊಠಡಿಯಲ್ಲಿ ಕೂಡಿಹಾಕಿದ್ದ ...ಸುದ್ದಿ ಕೇಳಿ ನೇರವಾಗಿ ಅಲ್ಲಿಗೆ ಬಂದ ನ್ಯಾ. ದಿನಕರನ್‌ರನ್ನು ...ಲಾಯಿತು. ಆಗ "You can kill me, but ...t my colleagues" ಎಂದು ಹೇಳಿ ಅವರಿಬ್ಬರನ್ನು ...ಸಿ ಕರೆದೊಯ್ದಿದ್ದಾರೆ.

ಈ ರಾದ್ಧಾಂತಗಳೆಲ್ಲಾ ನಡೆಯುತ್ತಿದ್ದಾಗ ಅಲ್ಲಿ ನೂರಾರು ... ಇದ್ದಿದ್ದು ನಿಜ. ಆದರೆ ನೇರ ನಿಂತು ದೊಂಬಿ ...ಸುತ್ತಿದ್ದವರು ಕೇವಲ ಹತ್ತು ಹದಿನೈದು ಮಂದಿ ...ತ್ರ. ಕೇಸರಿ ಪಡೆಯ ಲಾಯರ್‌ಗಳಾದ ಲಲಿತಾಂಬ, ...ಮಣ್ಣ ಜೋಯಿಸ್, ಅಸೋಸಿಯೇಷನ್ನಿನ ಕೆಲಮಂದಿ ... ಮುದ್ದು ಕಾಣಿಸಿಕೊಂಡಿದ್ದಾರೆ. ಪುಟ್ಟೇಗೌಡ, ರಾಜಣ್ಣ ...ಸಿ. ರವಿ, ರೆಡ್ಡಿ ಶ್ರೀನಿವಾಸ ಮುಂತಾದವರೇನೂ ...ಗ್ರರಾಗಿ ಉಳಿದಿರಲಿಲ್ಲ.

ಈ ಅಸಹ್ಯಕರ ದೊಂಬಿಯೆಲ್ಲಾ ಮುಗಿದ ನಂತರ ...ವಾದ, ಅಧ್ಯಕ್ಷ ಪುಟ್ಟೇಗೌಡ "ಗಲಾಟೆ ಮಾಡಿದ್ದು ...ರೋ ಹೊರಗಿನವರು, ನಾವಲ್ಲ" ಎಂದು ...ಮಾಯಕನಾಗಿ ಮಾತಾಡುತ್ತಿದ್ದಾರೆ.

...ಉತ್ತರ ಪೌರುಷ ಅಂದರೆ ಇದೇ ಅಲ್ವಾ?

● ಪಾರ್ವತೀಶ್

ಚಂದ್ರಚೂಡನ ಆತ್ಮಹತ್ಯೆ ಗಿಮ್ಮಿಕ್! ಬ್ಲಾಕ್‌ಮೇಲ್ ಸುಳಿಯಲ್ಲಿ ಶ್ರುತಿ



ಚಂದ್ರಚೂಡ್




ಶ್ರುತಿ

ಅವನನ್ನ ನಾನ್ಯಾಕೆ ಮನೆ ಬಿಟ್ಟು ಓಡಿಸಲಿ? ಅವನ್ಯಾವತ್ತೂ ನನ್ನ ಮನೇಲಿ ಇರಲೇ ಇಲ್ಲ ಎಂದ ಮೇಲೆ ಓಡಿಸೋದಾಗಲಿ, ಹೊರಗೆ ಹಾಕೋದಾಗಲಿ ಎಲ್ಲಿಂದ ಬಂತು? ನನ್ನ ಒಡವೇನ್ನ ಬೇರೆ ಯಾರೋ ಬಂದು ಮಾರಿಕೊಳ್ಳಲು ಹೇಗೆ ಸಾಧ್ಯ ನೀವೇ ಹೇಳಿ? ನಾನೇನು ಚಿಕ್ಕ ಮಗೂನಾ? ನನ್ನ ಸಿನಿಮಾ ವ್ಯವಹಾರಗಳಿಗೆಲ್ಲ ಇನ್ನಾರೋ ಕಲ್ಲು ಹಾಕುತ್ತಾರೆ, ನಾನು ಎಂಥಾ ಪಾತ್ರಗಳಲ್ಲಿ ನಟಿಸಬೇಕು, ಯಾರ ಚಿತ್ರಗಳಲ್ಲಿ ಅಭಿನಯಿಸಬೇಕು ಅನ್ನೋದನ್ನ ಬೇರೆ ಯಾರೋ ನಿರ್ಧರಿಸ್ತಾರೆ ಅನ್ನೋಕೆ ನಾನೇನು ಅನಕ್ಷರಸ್ಥೇನಾ ಅಥವಾ ಜೈಲು ಖೈದೀನಾ?

ನಿನ್ನೆ ಮೊನ್ನೆಯ ತನಕ ತನ್ನ ಪ್ರಿಯಕರ ಚಂದ್ರಚೂಡನ ವಿರುದ್ಧ ಕಂಡಕಂಡ ಆಪ್ತೇಷ್ಟರ ಬಳಿ ಸಿಡಿಸಿಡಿ ಕಿಡಿಕಾರುತ್ತಿದ್ದ ನಟಿ ಶ್ರುತಿ ಏಕಾಏಕಿ ಇಂಥದೊಂದು ರಾಗವೆಳೆದರೆ ಹೇಗನಿಸಬೇಡ?

ಹೌದು ಶ್ರುತಿ ತನ್ನ ರಾಗ ಬದಲಾಯಿಸಿದ್ದಾಳೆ. ಈ ವರದಿಗಾರ ಶ್ರುತಿಗೆ ಫೋನ್ ಮಾಡಿ ಕುಶಲೋಪರಿ ವಿಚಾರಿಸುವುದಕ್ಕೂ ಎರಡು ದಿನಗಳ ಹಿಂದಷ್ಟೇ ಆಕೆ ಚಂದ್ರಚೂಡನ ವಿರುದ್ಧ ಸ್ಪಷ್ಟ ಮಾತುಗಳಲ್ಲಿ ಕಿಡಿಕಾರಿದ್ದಳು. 'ಏನೋ ದೊಡ್ಡ ಮನುಷ್ಯ ಅಂತ ನಂಬಬಿಟ್ಟೆ. ಆತ ತನ್ನ ಮೊದಲ ಪತ್ನಿಯ ಸಂಬಂಧದಿಂದ ಹೊರಬರಲೇ ಇಲ್ಲ. ತನ್ನ ಮಗಳಿಗೆ ಬ್ರೈನ್ ಟ್ಯೂಮರ್ ಆಗಿದೆ ಎಂದು ನನ್ನ ಬಳಿಯೇ ಕಾಸು ಕೀಳ್ತಿದ್ದ, ನಾನಾದರೂ ಎಷ್ಟೂ ಅಂತ ದುಡ್ಡು ಕೊಡಲಿ? ನನಗೂ ಸಾಕಾಗಿ ಹೋಗಿದೆ-

ಹಾಗಂತ ತನ್ನ ಪರಮಾಪ್ತರ ಬಳಿ ದುಮ್ಮಾನ ತೋಡಿಕೊಂಡಿದ್ದ ಶ್ರುತಿ ಇಲ್ಲಿಗೆ ತಿಂಗಳ ಹಿಂದಷ್ಟೇ ಚಂದ್ರಚೂಡನನ್ನು ತನ್ನ ಮನೆಯಿಂದ ಹೊರಹಾಕಿದ ಸುದ್ದಿ ಹೊರಬಿದ್ದಿದ್ದು ಮೊನ್ನೆ. ಪತಿ ಮಹೇಂದರ್‌ಗೆ ಸೋಡ ಚೀಟಿ ಕೊಟ್ಟು ಸೋಕಾಲ್ಡ್ ಫಿಲ್ಮ್ ಡೈರೆಕ್ಟರ್ ಚಕ್ರವರ್ತಿ ಅಲಿಯಾಸ್ ಚಂದ್ರಚೂಡ್ ಉರ್ಫ್ ಚಂದ್ರಚಾರಿ ಯಾನೇ ಚಂದ್ರಶೇಖರ್‌ನನ್ನೇ ಮದುವೆಯಾಗ್ತೀನಿ ಅಂದಿದ್ದ ಶ್ರುತಿ ಆವತ್ತು ಈಟೀವಿಯಲ್ಲಿ ಡೈಲಾಗ್ ಹೊಡೆದದ್ದೇ ಹೊಡೆದದ್ದು.



ಮಹೇಂದರ್

ಚೂಡ ಓರ್ವ ಜನಪರ ಹೋರಾಟಗಾರನೆಂದೂ, ಹಾಸನದಲ್ಲಿ ಸಿಕ್ಕಾಪಟ್ಟೆ ಕೆರೆ ಕಟ್ಟಿಸಿದ್ದಾನೆಂದೂ, ಹತ್ತಾರು ಪುಸ್ತಕ ಬರೆದ ಮೇಧಾವಿಯೆಂದೂ ಸಾಕ್ಷಾತ್ ಪುಟ್ಟಣ್ಣ ಕಣಗಾಲರೇ ಜನ್ಮ ತಳೆದು ಬಂದಂತೆ ಮುಂದೊಮ್ಮೆ ಪ್ರತಿಭಾವಂತ ಚಿತ್ರ ನಿರ್ದೇಶಕನಾಗುತ್ತೇನೆಂದೂ ಹೊಗಳುತ್ತಿದ್ದ ಶ್ರುತಿ ಈಗ ಏಕಾಏಕಿ ತನ್ನ ಪ್ರಿಯಕರನನ್ನು ಹೊರಗಟ್ಟಿ ತಂದೆತಾಯಿಯರ ಜೊತೆ ವಾಸಿಸುತ್ತಿದ್ದಾಳೆಂದರೆ ಅಲ್ಲಿಗೆ ಚಂದ್ರಚೂಡನ ಬಣ್ಣ ಬಯಲಾಯಿತೆಂದೇ ಅರ್ಥ ತಾನೆ? ಹಾಗಿದ್ದೂ ಈಗ ಶ್ರುತಿ ಅಂಥಾದ್ದೇನೂ ನಡೆದೇ ಇಲ್ಲ, ಆತ ನನ್ನ ಮನೇಲಿ ಇರಲೇ ಇಲ್ಲ, ಇನ್ನು ಓಡಿಸೋದು ಎಲ್ಲಿಂದ ಬಂತು? ಎಂದು ಮರುಪ್ರಶ್ನೆ ಹಾಕುತ್ತಾಳೆಂದರೆ ಅದಕ್ಕೊಂದು ಕಾರಣ ಇರಲೇಬೇಕಲ್ಲ-ಏನದು?

ಚಂದ್ರಚೂಡ್ ಇಲ್ಲಿಗೆ ತಿಂಗಳ ಹಿಂದಿನ ತನಕ ಬಸವೇಶ್ವರನಗರದ ಶ್ರುತಿ ಬಂಗಲೆಯಾದ 'ಮಡಿಲು'ನಲ್ಲೇ ಠಿಕಾಣಿ ಹೂಡಿದ್ದನ್ನು ಕಂಡವರಿದ್ದಾರೆ. ಆತನೇ ನಿಂತು ಪತ್ರಕರ್ತರಿಗೆಲ್ಲ ಫೋನ್ ಮಾಡಿ ಶ್ರುತಿಯವರ ಹೆಸರನ್ನು 'ಶ್ರುತಿ ಚಕ್ರವರ್ತಿ' ಎಂದು ತಿದ್ದಿತಿದ್ದಿ ಹೇಳುತ್ತಿದ್ದದ್ದನ್ನೂ ಕೇಳಿಸಿಕೊಂಡವರಿದ್ದಾರೆ. ಶ್ರುತಿಯ ಜನ್ಮದಿನದಂದೇ ತನ್ನ ಹೊಸ ಚಿತ್ರ 'ಪರಮಾತ್ಮ' ಸೆಟ್ಟೇರುತ್ತದೆಯೆಂದು ಪತ್ರಿಕಾ ಜಾಹೀರಾತನ್ನು ಕೊಟ್ಟಿದ್ದ, ಅದಕ್ಕೆ ತನ್ನ ತಮ್ಮನನ್ನೇ ಹೀರೋ ಮಾಡುತ್ತೇನೆಂದೂ ಹೇಳಿಕೊಂಡಿದ್ದ. ಆದರೆ ಇದೆಲ್ಲ ನೆರವೇರುವ ಮೊದಲೇ ಚಂದ್ರಚೂಡ್ ಶ್ರುತಿ ಮನೆಯಿಂದ ಹೊರಬಿದ್ದ.

ಅಲ್ಲಿಗೆ ಚೂಡನ ಅಸಲೀ ಬುದ್ಧಿ ಶ್ರುತಿಗೆ ಗೊತ್ತಾಗಿ ಹೋಗಿತ್ತು. ಯಾವತ್ತು ಇದು ಪತ್ರಿಕೆಗಳಲ್ಲಿ ಸುದ್ದಿಯಾಗಿ ಚೂಡನನ್ನು ಶ್ರುತಿ ತನ್ನ ಮನೆಯಿಂದ ಹೊರ ಹಾಕಿದ್ದಾಳೆ ಎಂಬರ್ಥದ ವರದಿಗಳು ಅಚ್ಚಾಗತೊಡಗಿದವೋ ಚಂದ್ರಚೂಡ್ ಕಂಗಾಲಾಗಿದ್ದಾನೆ. ಈ ಹೊತ್ತಿಗಾಗಲೇ ತನ್ನ ಮೊದಲ ಪತ್ನಿ ಮಂಜುಳಾಗೂ ಮುಖ ತೋರಿಸಲಾಗದೇ ಸುಂಕದಕಟ್ಟೆಯ ತನ್ನ ಸಂಬಂಧಿಕರೊಬ್ಬರ ಮನೆ ಸೇರಿಕೊಂಡು ಅಜ್ಞಾತವಾಸಕ್ಕಿಳಿದಿದ್ದ ಚೂಡ ಎಂಥಾ ತಲೆ ಓಡಿಸಿದ್ದಾನೆಂದರೆ; ತಾನು ಆತ್ಮಹತ್ಯೆ ಮಾಡಿಕೊಳ್ತೀನಿ ಎಂದು ಶ್ರುತಿಯನ್ನು ಎಮೋಷನಲಿ ಬ್ಲಾಕ್‌ಮೇಲ್ ಮಾಡುವುದು?

ಶ್ರುತಿ ಬಾಯಿಯಿಂದ ತನ್ನ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳಾದರೂ ಬಂದರೆ ಕನಿಷ್ಠ ಮುಖ ಎತ್ತಿಕೊಂಡಾದರೂ ತಿರುಗಬಹುದಲ್ಲ ಎಂಬುದು ಆತನ ಲೆಕ್ಕಾಚಾರ. ಆ ನಿಟ್ಟಿನಲ್ಲಿ ಆತ ವಿಚಿತ್ರ ಎಸ್ಸೆಮ್ಮೆಸ್‌ಗಳನ್ನು ತನಗೆ ಪರಿಚಿತರಿದ್ದ ಪತ್ರಕರ್ತರು ಮತ್ತು ಶ್ರುತಿಗೆ ಆಪ್ತರಾಗಿದ್ದ ಸಿನಿಮಾಜೀವಿಗಳಿಗೆ ರವಾನಿಸಿದ್ದಾನೆ. ಅದೂ ಎಂಥಾ ಅಸಂಬದ್ಧ ಮತ್ತು ಬಾಲಿಶ ಎಸ್ಸೆಮ್ಮೆಸ್ ಎಂದರೆ; ನಾನು ಪ್ರೀತಿಸಿದವರು ಬದುಕಿಗೆ ಶರಣಾಗಿದ್ದಾರೆ. ಅವರಿಗೆ ಆಲ್ ದಿ ಬೆಸ್ಟ್. ನಾನು ಸಾವಿಗೆ ಶರಣಾಗುತ್ತಿದ್ದೇನೆ. ನನಗೆ ಕಂಗ್ರಾಟ್ಸ್. ಥ್ಯಾಂಕ್ಸ್ ಅಣ್ಣಾ ಹೋಗಿ ಬರ್ತೀನಿ....!



ಚರಣ್

ಇಂಥ ಅವಿವೇಕಿ ಎಸ್ಸೆಮ್ಮೆಸ್‌ಗಳನ್ನು ಶ್ರುತಿಯ ಆಪ್ತ ಬಳಗಕ್ಕೆ ಕಳಿಸಲಾರಂಭಿಸಿದ ಚಂದ್ರಚೂಡನ ಐಡಿಯಾ ಫಲಿಸಿದ್ದು ಮೊನ್ನೆ ಅಂದರೆ ನವೆಂಬರ್ ಹನ್ನೊಂದರಂದು. ಬಹುಶಃ ಶ್ರುತಿಯೇ ಫೋನ್ ಮಾಡಿ ಇಂಥಾ ಹುಚ್ಚಾಟಕ್ಕೆ ಕೈಹಾಕಿ ನನಗೆ ಇನ್ನಷ್ಟು ಕಳಂಕ ತರಬೇಡ ಎಂದಿರಬೇಕು. ಚೂಡನನ್ನು ಮನೆಗೇ ಕರೆಸಿಕೊಂಡು ಶ್ರುತಿ ಬುದ್ಧಿ ಹೇಳಿದ್ದಾಳೆ. ಅದಕ್ಕೆ ಚಂದ್ರಚೂಡ ಕೂಡ ತನ್ನದೇ ಷರತ್ತುಗಳನ್ನು ಹಾಕಿದ್ದಾನೆ. ಏಕಾಏಕಿ ನನ್ನನ್ನು ಮನೆಯಿಂದ ಹೊರಹಾಕಿದ್ದೇನೆಂದು ನೀನು ಎಲ್ಲೆಂದರಲ್ಲಿ ಹೇಳಿಕೊಂಡರೆ ನಾನು ತಲೆ ಎತ್ತಿ ತಿರುಗೋದಾದ್ರೂ ಹೇಗೆ? ನನ್ನ ವಿರುದ್ಧ ಈಗಾಗಲೇ ದಿನಪತ್ರಿಕೆಗಳಲ್ಲಿ ವರದಿಯಾಗಿದ್ದು ನಿಜವಲ್ಲ ಅಂತ ನೀನೇ ಹೇಳಿಕೆ ಕೊಡೋದಾದ್ರೆ ನಾನು ಸೂಸೈಡ್ ಮಾಡ್ಕಳಲ್ಲ; ಎಂದಿದ್ದಾನೆ ಚಂದ್ರಚೂಡ.

ಮರುದಿನದಿಂದಲೇ ಶ್ರುತಿಯ ವರಸೆಯೂ ಬದಲಾಗಿದೆ. ಯಾವತ್ತೂ ತನ್ನ ಮನೆ ಫೋನನ್ನು ಕೆಲಸದಾಳಿನಿಂದ ಎತ್ತಿಸುತ್ತಿದ್ದ ಶ್ರುತಿ ಈಗ ನೇರವಾಗಿ ತಾನೇ ಹಲೋ ಎನ್ನುತ್ತಿದ್ದಾಳೆ. ಯಾರೇ ಚಂದ್ರಚೂಡನ ಬಗ್ಗೆ ಪ್ರಶ್ನೆ ಕೇಳಿದರೂ ಆಕೆಯ ಬಾಯಿಂದ ಬರುವುದು ಅದೇ ಧಾಟಿಯ ಪದಪುಂಜ.

ಆತ ನನ್ನ ಮನೇಲಿ ಇರಲೇ ಇಲ್ಲ ಎಂದಮೇಲೆ ಹೊರಗೆ ಹಾಕೋದು ಎಲ್ಲಿಂದ ಬಂತು? ಆವತ್ತು ನಾನು ಚಕ್ರವರ್ತಿ ಅವರನ್ನು ಮದುವೆಯಾಗಬೇಕು ಅಂತ ನಿರ್ಧಾರ ಮಾಡಿದ್ದು ನಿಜ. ಆದರೆ ಇವತ್ತು ನನಗೆ ಅಂತ ಯೋಚನೆ ಇಲ್ಲ, ಈಗೇನಿದ್ದರೂ ನಾನು ನನ್ನ ಮಗಳ ಭವಿಷ್ಯದ ಬಗ್ಗೆ ಯೋಚಿಸುತ್ತಿದ್ದೇನೆ. ಮೊದಲಿಗೆ ನಾನೊಬ್ಬಳು ಜವಾಬ್ದಾರಿಯುತ ತಾಯಿ ಅನ್ನಿಸಿಕೊಳ್ಳಬೇಕು. ನನ್ನ ಸ್ವಾರ್ಥಕ್ಕಾಗಿ ನಾನು ಮಗಳ ಭವಿಷ್ಯವನ್ನು ಬಲಿಕೊಡಲಾ? ಅಂಥ ಕೆಲಸವನ್ನು ನಾನು ಯಾವತ್ತಿಗೂ ಮಾಡೋಳಲ್ಲ-

ಚಕ್ರವರ್ತಿಯವರನ್ನು ಮದುವೆ ಆಗ್ತೀನಿ ಅಂತ ನಾನು ಆವತ್ತು ನಿರ್ಧರಿಸಿದ್ದು ನಿಜ. ಅದು ಆ ಸನ್ನಿವೇಶದ ಅಗತ್ಯವಾಗಿತ್ತು. ಮಹೇಂದರ್ ಜೊತೆಗಿನ ನನ್ನ ಡೈವೋರ್ಸ್ ಕೇಸಿನ್ನೂ ಇತ್ಯರ್ಥವಾಗೇ ಇಲ್ಲ. ಅದು ಇತ್ಯರ್ಥವಾದ ಮೇಲೆ ತಾನೇ ಮುಂದಿನ ಮಾತು? ಆ ಸಂದರ್ಭ ಬಂದಾಗ ತಾನೇ ನಾನು ಚಕ್ರವರ್ತಿಯವರನ್ನ ಮದುವೆ ಆಗೋ ಮಾತು....

ಬಹುಶಃ ನಾನು ಕೂಡ ಬೇರೆಯವರ ಥರ ಕದ್ದೂ ಮುಚ್ಚಿ ಮಾಡಿದ್ದರೆ ಚೆನ್ನಾಗೇ ಇರ್ತಿದ್ದೇನೋ. ಯಾವುದನ್ನೂ ಮುಚ್ಚಿಡದೇ ಟ್ರಾನ್ಸ್‌ಪರೆಂಟ್ ಆಗಿ ಇರಬೇಕು ಅಂತ ನಾನು ಪ್ರಯತ್ನಿಸಿದ್ದೇ ತಪ್ಪಾಗಿ ಹೋಯ್ತು, ಅನ್ಯಾಯವಾಗಿ ಅಧಿಕಾರ ಕಳಕೊಂಡೆ. ಯಾರೂ ಮಾಡದ ತಪ್ಪನ್ನು ಮಾಡಿದವಳಂತೆ ಯಾರ್‍ಯಾರಿಂದಲೋ ನಿಂದಿಸಿಕೊಂಡೆ. ನನ್ನ ಬದುಕನ್ನ ಆಯ್ಕೆ ಮಾಡಿಕೊಳ್ಳೋ ಹಕ್ಕು ನನಗಿಲ್ಲವೇನು?

ಬಹುಶಃ ಪತ್ರಕರ್ತರು ಕೂಡ ನನ್ನ ಮೇಲಿನ ಕಾಳಜಿಯಿಂದಲೇ ನನ್ನನ್ನು ಎಚ್ಚರಿಸಿದ್ದರು ಅಂತ ಭಾವಿಸಿದ್ದೇನೆ. ಸದ್ಯಕ್ಕೆ ನನಗೆ ಇನ್ನೊಂದು ಮದುವೆಯಾಗೋ ಯಾವುದೇ ಯೋಚನೆಯಿಲ್ಲ, ಅದೇನಿದ್ದರೂ ಡೈವೋರ್ಸ್ ಸಿಕ್ಕ ಮೇಲಿನ ಮಾತು. ಈಗ ನಾನು ಮೊದಲು ಆಘಾತದಿಂದ ಹೊರಬರಬೇಕು. ಕನ್ನಡದಲ್ಲಿ ಮೂರು ಸಿನಿಮಾಕ್ಕೆ ಅವಕಾಶ ಬಂದಿದೆ. ತಮಿಳಿನಲ್ಲಿ ಒಂದು ಟೀವಿ ಧಾರಾವಾಹಿಗೂ ಆಫರ್ ಇದೆ. ಪತ್ರಿಕೆಗಳಲ್ಲಿ ಯಾರ್‍ಯಾರದೋ ಜೊತೆ ನನ್ನ ಸಂಬಂಧ ಕಲ್ಪಿಸಿ ಬರೆದರು. ಹಾಗಿದ್ದರೆ ನಾನ್ಯಾಕೆ ಬಹಿರಂಗವಾಗಿ ಚಕ್ರವರ್ತಿಯವರನ್ನು ಮದುವೆಯಾಗ್ತೀನಿ ಅಂತ ಹೇಳ್ಕೋತಿದ್ದೆ. ಆಗಿದ್ದೆಲ್ಲಾ ಕೆಟ್ಟ ಕನಸು ಅಂತ ಮರೆತು ಬಿಡ್ತೀನಿ. ಮೊದಲು ನಾನೊಬ್ಬಳು ಕಲಾವಿದೆ ಮತ್ತು ತಾಯಿ. ಈಗಿನ ಕಳಂಕದಿಂದ ಮೊದಲು ಹೊರಬರ್ತೀನಿ. ಹಿಂದಿನಂತೆ ಮತ್ತೆ ಎದ್ದು ನಿಲ್ತೀನಿ. ಮದುವೆಗಿದುವೆ ಎಲ್ಲಾ ಆಮೇಲೆ...

ಒಂದಂತೂ ಸತ್ಯ ಚಕ್ರವರ್ತಿನ್ನ ನಾನು ಮನೆಯಿಂದ ಹೊರಹಾಕೋದಾಗಲಿ, ಆತ ಬಂದು ನನ್ನ ಮನೇಲಿದ್ದ ಎಂಬುದಾಗಲಿ ನಡೆದೇ ಇಲ್ಲ. ನನ್ನ ಒಡವೆಗಳನ್ನು ಹೇಗೆ ತಾನೇ ಆತ ಮಾರಿಕೊಳ್ಳಲು ಸಾಧ್ಯ? ಇದೆಲ್ಲ ನನ್ನ ವಿರುದ್ಧ ನಡೀತಾ ಇರೋ ಅಪಪ್ರಚಾರವಲ್ಲದೇ ಮತ್ತೇನಲ್ಲ.

ಇದು ಶ್ರುತಿ ಬಾಯಿಂದ ಹೊರಬಿದ್ದ ಪದಪಂಕ್ತಿ. ಹಾಗೊಮ್ಮೆ ಚಂದ್ರಚೂಡನ ಎಮೋಷನಲ್ ಬ್ಲಾಕ್ ಮೇಲ್‌ಗೆ ಶ್ರುತಿ ಮಣಿದಿಲ್ಲ ಎಂದೇ ಇಟ್ಟುಕೊಂಡರೂ ಅಲ್ಲಿಗೆ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ.

ಸದ್ಯದ ಕಳಂಕದಿಂದ ಪಾರಾಗಲು ಇಬ್ಬರೂ ಸೇರಿ ಹೊಸ ನಾಟಕವೊಂದನ್ನು ಆಡುತ್ತಿದ್ದಾರಾ?

ನಿನ್ನೆಮೊನ್ನೆಯ ತನಕ ನೆಲಮಂಗಲದ ತೋಟ ಸೇರಿಕೊಂಡಿದ್ದ ಶ್ರುತಿಯ ತಂದೆತಾಯಿಗಳು ಈಗೇಕೆ ಬಸವೇಶ್ವರನಗರದ ಶ್ರುತಿ ಮನೆಗೆ ಬಂದು ಸೇರಿಕೊಂಡಿದ್ದಾರೆ? ಚಂದ್ರಚೂಡನಿಂದ ಆಕೆಯನ್ನು ಬಿಡಿಸಿ ಮತ್ತೆ ಬೆಳ್ಳಿತೆರೆಗೆ ತರುವುದು ಅವರ ಉದ್ದೇಶವೇ? ಈ ನಿಟ್ಟಿನಲ್ಲಿ ಅಣ್ಣ ಶರಣ್‌ನ ಪ್ರಯತ್ನ ಫಲಿಸಿದೆಯೇ?

ಇದೆಲ್ಲ ಏನೇ ಇರಲಿ, ಶ್ರುತಿಯಂಥ ಮುಗ್ಧ ನಗೆಯ ನಟಿಯೊಬ್ಬಳು ಕನ್ನಡಿಗರ ಪಾಲಿಗೆ ಶಾಶ್ವತವಾಗಿರಲಿ. ●

ಅನಂತ್, ಸುಷ್ಮಾ: ಸ್ವಾರ್ಥಿ ಸೂತ್ರಧಾರರು

ಕರ್ನಾಟಕ ಬಿಜೆಪಿಯಲ್ಲಿನ ಬಹಿರಂಗ ಜಂಗೀಕುಸ್ತಿಯ ಮೊದಲ ಅಧ್ಯಾಯ ಈಗ ಮುಗಿದಿದೆ. ಹಾಗಂತ ಬಿಜೆಪಿ ನಾಯಕರ ನಡುವಿನ ಭಿನ್ನಾಭಿಪ್ರಾಯವೆಲ್ಲ ಶಮನವಾಗಿದೆ ಎಂದು ಯಾರೂ ಅರ್ಥಮಾಡಿಕೊಳ್ಳಬೇಕಿಲ್ಲ. ಸದ್ಯದಲ್ಲೇ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನವನ್ನು ಖಾಲಿ ಮಾಡಲಿರುವ ಸದಾನಂದ ಗೌಡರ ಕುರ್ಚಿಗೆ ನಡೆಯಲಿರುವ ಚುನಾವಣೆ ಸಂದರ್ಭದಲ್ಲಿ ಚಡ್ಡಿಗಳ ಜಂಗೀಕುಸ್ತಿ ಮೊನ್ನೆಗಿಂತಲೂ ಹೆಚ್ಚು ರಂಗು ಪಡೆಯಲಿರುವುದು ಖಚಿತ.


ಯಾಕೆಂದರೆ ಈಗ ಹೈಕಮಾಂಡ್ ಸೂಚಿಸಿರುವ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ರಾಜ್ಯ ಬಿಜೆಪಿಯ ಅಧ್ಯಕ್ಷನೇ ಇರಬೇಕು ಎಂದು ತೀರ್ಮಾನಿಸಲಾಗಿದೆ. ಅಂದರೆ, ಯಾರು ಈ ಸಮನ್ವಯ ಸಮಿತಿಯ ಅಧ್ಯಕ್ಷರಾಗುತ್ತಾರೋ, ಅವರೇ ಮುಖ್ಯಮಂತ್ರಿ ಯಡಿಯೂರಪ್ಪನಿಗೆ ಪರ್ಯಾಯ ಅಧಿಕಾರ ಕೇಂದ್ರವಾಗಲಿದ್ದಾರೆ. ಹೀಗಾಗಿ ಆ ಹುದ್ದೆಯಲ್ಲಿ ತನ್ನ ಬೆಂಬಲಿಗರನ್ನು ಕೂರಿಸಲು ಯಡ್ಡಿ, ತಮ್ಮ ಹಿಂಬಾಲಕರನ್ನು ಕೂರಿಸಲು ಬಳ್ಳಾರಿ ರೆಡ್ಡಿ ಗ್ಯಾಂಗ್ ಈಗಾಗಲೇ ತಂತ್ರಗಾರಿಕೆಯನ್ನು ಹೆಣೆಯಲಾರಂಭಿಸಿದ್ದಾರೆ. ಈ ಮಧ್ಯೆ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿರುವ ಅನಂತಕುಮಾರ್ ರಾಜ್ಯ ರಾಜಕೀಯಕ್ಕೆ ಮರಳುವ ಇಂಗಿತವನ್ನು ವ್ಯಕ್ತಪಡಿಸಿ ಅಧ್ಯಕ್ಷ ಗದ್ದುಗೆಯನ್ನೇರಲು ಸಂಚು ರೂಪಿಸುತ್ತಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ಅನಂತಕುಮಾರ್ ಅಧ್ಯಕ್ಷರಾಗುವುದನ್ನು ತಾನು ಒಪ್ಪುವುದಿಲ್ಲ ಎಂದು ಯಡ್ಡಿ ಈಗಾಗಲೇ ದೆಹಲಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಬಿಜೆಪಿಯ ಮುಂದಿನ ಅಧ್ಯಕ್ಷ ಯಾರಾಗಲಿದ್ದಾರೆ ಎಂಬುದರ ಮೇಲೆ ಜಂಗೀ ಕುಸ್ತಿಯ ಎರಡನೇ ಮಜಲು ತೆರೆದುಕೊಳ್ಳುತ್ತದೆ.

ಮೇಲ್ನೋಟಕ್ಕೆ ಮೊನ್ನೆಯ ಬೀದಿ ಜಗಳ ಯಡ್ಡಿ ಮತ್ತು ಬಳ್ಳಾರಿ ರೆಡ್ಡಿಗಳ ನಡುವಿನ ಕದನವೆಂದು ಕಾಣಿಸಿಕೊಂಡರೂ ಅದಕ್ಕೆ ಮೂರನೆಯ ಆಯಾಮವೂ ಇತ್ತೆಂದು ಸ್ವತಃ ಬಿಜೆಪಿಯ ಅದೆಷ್ಟೋ ಶಾಸಕರಿಗೇ ಗೊತ್ತಿರಲಿಲ್ಲ. ಈ ಬೀದಿ ಜಗಳಕ್ಕೆ ಮೂರನೇ ಸ್ವರೂಪದ ಟಚ್ ನೀಡಿದವರು ಬೇರಾರೂ ಅಲ್ಲ, ದೆಹಲಿಯಲ್ಲಿರುವ ಅನಂತಕುಮಾರ್.

ಬರುವ ಮೂರು ವರ್ಷಗಳ ಕಾಲ ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿಗೆ ಭವಿಷ್ಯವಿಲ್ಲ ಎಂಬ ಅಪ್ರಿಯ ಸತ್ಯ ಮನವರಿಕೆಯಾಗುತ್ತಿದ್ದಂತೇ ಅನಂತ್‌ಕುಮಾರ್ ಕಣ್ಣು ದೆಹಲಿಯಿಂದ ಬೆಂಗಳೂರು ಕಡೆಗೆ ಹೊರಳಿತು. ಒಂದೆಡೆ ಮಾಜಿ ಪ್ರಧಾನಿ ವಾಜಪೇಯಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾರೆ, ಇನ್ನೊಂದೆಡೆ ಭಾವಿ ಪ್ರಧಾನಿ ಎಂದು ಬಿಂಬಿತವಾಗಿದ್ದ ಅಧ್ವಾನಿಯೇ ಸದ್ಯದಲ್ಲೇ ಆರೆಸ್ಸೆಸ್ ಆದೇಶದಂತೆ ತಮ್ಮ ವಿರೋಧ ಪಕ್ಷದ ನಾಯಕನ ಸ್ಥಾನದಿಂದ ಇಳಿಯಲಿದ್ದಾರೆ. ದೆಹಲಿಯ ರಾಜಕೀಯದಲ್ಲಿ ತನ್ನ ಗಾಡ್‌ಫಾದರ್‌ಗಳಾಗಿದ್ದ ಇವರಿಬ್ಬರೂ ಲೆಕ್ಕಕ್ಕಿಲ್ಲದಿರುವಾಗ, ಬಿಜೆಪಿ ಮರಣಶಯ್ಯೆಯಲ್ಲಿ ಮಲಗುವ ಮೊದಲೇ ತಾನು ಹೇಗಾದರೂ ಮಾಡಿ ರಾಜ್ಯ ರಾಜಕೀಯದ ಅಖಾಡಕ್ಕೆ ಧುಮುಕಬೇಕು ಎಂಬ ಅನಂತ್‌ಕುಮಾರ್ ಆಸೆಯೇ ಮೊನ್ನಿನ ಕರ್ನಾಟಕದ ನಾಯಕರ ಗುದ್ದಾಟಕ್ಕೆ ಮುಖ್ಯ ಕಾರಣ.

ಆದರೆ ತನ್ನ ಬಹುಕಾಲದ ವೈರಿಯಾದ ಅನಂತಕುಮಾರ್ ಮರ್ಮವನ್ನು ಅರಿತ ಯಡಿಯೂರಪ್ಪ ತನ್ನ ರಾಜಕೀಯ ಚಾಕಚಕ್ಯತೆಯನ್ನು ಬಳಸಿ ಅನಂತಕುಮಾರ್ ತಂತ್ರವನ್ನೆಲ್ಲಾ ಮಣ್ಣುಪಾಲು ಮಾಡಲು ಸಜ್ಜಾಗಿದ್ದಾರೆ. ಒಂದೆಡೆ ತನ್ನ ಹತ್ತಿರದವರನ್ನೆಲ್ಲ ಬಲಿಕೊಟ್ಟರೂ ತನ್ನ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡದಿದ್ದದ್ದು, ಇನ್ನೊಂದೆಡೆ ತನ್ನ ಸ್ಥಾನದಲ್ಲಿ ಮತ್ತೊಬ್ಬ ಲಿಂಗಾಯತ ಜಗದೀಶ್ ಶೆಟ್ಟರ್ ಅನ್ನು ಕೂರಿಸುವ ಅನಂತಕುಮಾರನ ಕುಂತಂತ್ರದಾಟವೂ ಸಫಲವಾಗದಂತೆ ನೋಡಿಕೊಂಡಿದ್ದು, ಮತ್ತೊಂದೆಡೆ "ನಾನೇ ಸಮನ್ವಯ ಸಮಿತಿಯ ಅಧ್ಯಕ್ಷನಾಗುತ್ತೇನೆ'' ಎಂದು ದೆಹಲಿ ದೊರೆಗಳ ಬಳಿ ಅನಂತಕುಮಾರ್ ತಮ್ಮ ಮನದಾಳದ ಬಯಕೆಯನ್ನು ವ್ಯಕ್ತಪಡಿಸಿದಾಗ ಅದನ್ನು ತೀವ್ರವಾಗಿ ವಿರೋಧಿಸಿದ್ದಲ್ಲವೂ, ಸದ್ಯ ಸಾರ್ವಜನಿಕವಾಗಿ ಮುಖಭಂಗ ಅನುಭವಿಸಿರುವ ಯಡಿಯೂರಪ್ಪನಿಗೆ ತೆರೆಮರೆಯಲ್ಲಿ ದಕ್ಕಿರುವ ಸಿಕ್ಕಪುಟ್ಟ ಜಯ.

ಆದೇನೇ ಆದರೂ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ರಾಜ್ಯ ಬಿಜೆಪಿಯ ರಾಜ್ಯಾಧ್ಯಕ್ಷರೇ ಇರಬೇಕೆಂಬ ನಿಲುವಿಗೆ ಯಡ್ಡಿ ಗಟ್ಟಿಯಾಗಿ ಅಂಟಿಕೊಂಡಿದ್ದರಿಂದ ಪರ್ಯಾಯ ಶಕ್ತಿ ಕೇಂದ್ರವಾಗಿ ಬೆಳೆಯುವ ಅನಂತಕುಮಾರ್ ಪ್ಲಾನ್ ಕಮರಿಹೋಗಿದೆ.



ಕರ್ನಾಟಕದ ಮೂರನೇ ಬ್ರಾಹ್ಮಣ ಮುಖ್ಯಮಂತ್ರಿಯಾಗಿ ತಾನು ಕಾರ್ಯನಿರ್ವಹಿಸಬೇಕೆಂಬ ಅನಂತಕುಮಾರ್ ಅವರ ಅಧಿಕಾರ ದಾಹವೇ ಮೊನ್ನೆಯ ಗಲಾಟೆಗೆಲ್ಲ ಮೂಲ ಕಾರಣ. ಹೀಗಾಗಿ ಮೌನವಾಗಿ ಮಲಗಿದ್ದ ಮಗುವನ್ನು ತಾನೆ ಚಿವುಟದರೂ ತಾನೆ ತೊಟ್ಟಿಲು ತೂಗುವಂತೆ ಅನಂತಕುಮಾರ್ ರಾಜ್ಯ ಬಿಜೆಪಿಯ ಭಿನ್ನಮತಕ್ಕೆ ತೆರೆಮರೆಯಲ್ಲಿ ಬೆಂಬಲ ನೀಡುತ್ತಿದ್ದರು. ಎರಡು ವಾರಗಳ ಕಾಲ ನಡೆದ ಜಂಗೀ ಕುಸ್ತಿ ದಿನದಿಂದ ದಿನಕ್ಕೆ ರಂಗೇರುತ್ತಿದ್ದಾಗ ಸರಿಯಾದ ಪರಿಸ್ಥಿತಿ ನೋಡಿ ಮುಖ್ಯಮಂತ್ರಿ ಸ್ಥಾನಕ್ಕೆ ಲಗ್ಗೆ ಹಾಕುವುದು ಅಥವಾ ತನ್ನ ಹಿಂಬಾಲಕರಾದ ಜಗದೀಶ ಶೆಟ್ಟರ್‌ರನ್ನು ಅಲ್ಲಿ ಕೂರಿಸುವುದು ಅನಂತಕುಮಾರ್ ಅವರ ಗೇಮ್ ಪ್ಲಾನ್ ಆಗಿತ್ತು.

ಆದರೆ ಯಾವಾಗ ಯಡಿಯೂರಪ್ಪನವರು ವಿಧಾನಸಭೆಯನ್ನೇ ವಿಸರ್ಜಿಸುವ ಬಾಂಬನ್ನು ಹಾಕಿದರೋ, ಆಗ ದೆಹಲಿ ದರ್ಬಾರ್‌ನಲ್ಲಿ ಒಂದು ರೀತಿಯ ಕಂಪನ ಉಂಟಾಯಿತು. ದಕ್ಷಿಣ ಭಾರತದಲ್ಲೇ ಮೊದಲ ಬಾರಿಗೆ ಅಧಿಕಾರದ ಗದ್ದುಗೆಯೇರಿದ ಪಕ್ಷ ಒಂದೇ ವರ್ಷದಲ್ಲಿ ಅಧಿಕಾರ ಕಳೆದುಕೊಳ್ಳುವುದು ಯಾರಿಗೂ ಇಷ್ಟವಿರಲಿಲ್ಲ. ಅಷ್ಟೇ ಯಾಕೆ, ಈಗಾಗಲೇ ಈ ರಾಷ್ಟ್ರೀಯ ಪಕ್ಷ ಒಂದು ಪ್ರಾಂತೀಯ ಪಕ್ಷದ ಮಟ್ಟಕ್ಕೆ ಇಳಿದಿರುವುದರಿಂದ ಮತ್ತೊಂದು ರಾಜ್ಯವನ್ನು ಕಳೆದುಕೊಳ್ಳುವುದು ಬೇಡ ಎಂದೇ ಎಲ್ಲ ನಾಯಕರೂ ತೀರ್ಮಾನಿಸಿದರು. ಹೀಗಾಗಿ ಯಡ್ಡಿಯ ಪದಚ್ಯುತಿಯ ಡ್ರಾಮಾ ದಿಢೀರನೆ ಒಂದು ತಿರುವು ಪಡೆದುಕೊಂಡಿತು. ರಾಷ್ಟ್ರ ನಾಯಕರೆಲ್ಲ ಒಟ್ಟಾಗಿ ಸೇರಿ ಯಡ್ಡಿಯನ್ನು ಉಳಿಸೋಣ, ಪಕ್ಷವನ್ನು ಉಳಿಸೋಣ ಎಂಬ ಹೊಸ ಸೂತ್ರವನ್ನು ಮುಂದಿಟ್ಟು ಬಳ್ಳಾರಿ ಗಣಿ ಧಣಿಗಳ ಮನವೊಲಿಸಲು ಆರಂಭಿಸಿದರು.


ಇಡೀ ಜಂಗೀಕುಸ್ತಿಯ ಮುಖ್ಯ ಸೂತ್ರಧಾರಿಗಳು ಅನಂತ್ ಕುಮಾರ್ ಮತ್ತು ಸುಷ್ಮಾ ಸ್ವರಾಜ್ ಆಗಿದ್ದರು.

ರಾಷ್ಟ್ರೀಯ ನಾಯಕರಾದ ಅಧ್ವಾನಿ ಮತ್ತು ಬಿಜೆಪಿ ಅಧ್ಯಕ್ಷ ರಾಜನಾಥ ಸಿಂಗ್ ತರಹದ ನಾಯಕರು ಪರಿಹರಿಸಲಾಗದ ಸಮಸ್ಯೆಯನ್ನು ಅನಂತಕುಮಾರ್ ಮತ್ತು ಸುಷ್ಮಾ ಸ್ವರಾಜ್ ಜೊತೆಗೂಡಿ ಪರಿಹರಿಸಿದ್ದಾರೆ ಎಂಬಂತೆ ಈಗ ಮಾಧ್ಯಮಗಳು ಇವರಿಬ್ಬರನ್ನು ಹೊಗಳುತ್ತಿವೆ. ಆದರೆ, ವಾಸ್ತವವಾಗಿ ಈ ಗಲಾಟೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿದವರೇ ಇವರಿಬ್ಬರು. ಆದರೆ ಯಾವುದೇ ಕಾರಣಕ್ಕೂ ಯಡಿಯೂರಪ್ಪ ಅವರ ಬದಲಾವಣೆ ಸಾಧ್ಯವಿಲ್ಲ, ಇದು ಪಕ್ಷದ ನಿರ್ನಾಮಕ್ಕೆ ದಾರಿಯಾಗುತ್ತದೆ ಎಂದು ಕಡ್ಡಿ ಮುರಿದಂತೆ ಅಧ್ವಾನಿ ಮತ್ತು ರಾಜನಾಥ್ ಸಿಂಗ್ ಹೇಳಿದರೋ ಆಗ ಎಚ್ಚೆತ್ತ ಇವರಿಬ್ಬರು ತೇಪೆ ಹಾಕುವ ಕೆಲಸ ಮಾಡಿದರು.

ಹೀಗೆ ಅನಂತಕುಮಾರ್ ಅವರ ತಂತ್ರವನ್ನು ವಿಫಲಗೊಳಿಸುವಲ್ಲಿ ಯಡ್ಡಿ ಯಶಸ್ವಿಯಾಗಿದ್ದರೂ ತಮ್ಮ ನಾಯಕ ಸೋತಿಲ್ಲ ಎಂದೇ ಅನಂತು ಅಭಿಮಾನಿಗಳು ವಾದಿಸುತ್ತಿದ್ದಾರೆ. "ಇಂದಲ್ಲಾ ನಾಳೆ ಯಡಿಯೂರಪ್ಪ ನಮ್ಮ ನಾಯಕ ಅನಂತಕುಮಾರ್ ಅವರಿಗೆ ದಾರಿ ಬಿಟ್ಟುಕೊಡಲೇ ಬೇಕಾಗುತ್ತದೆ. ಈ ಜಗಳದ ಸಂದರ್ಭದಲ್ಲಿ ಯಡಿಯೂರಪ್ಪನ ಪರ ಕೇವಲ ಇಪ್ಪತ್ತೆರಡು ಶಾಸಕರಿದ್ದರು. ಆದರೆ ಬಳ್ಳಾರಿ ಧಣಿಗಳ ಪರ ಅರವತ್ತೈದು ಶಾಸಕರಿದ್ದರು'' ಎಂದೇ ವಾದಿಸುವ ಮೂಲಕ ಯಡಿಯೂರಪ್ಪ ಈಗ ಓರ್ವ ನಿಶಕ್ತ ನಾಯಕನಾಗಿರುವುದನ್ನು ಎತ್ತಿ ತೋರಿಸುತ್ತಿದ್ದಾರೆ.

ಒಂದು ಮಾತಂತೂ ನಿಜ. ಈ ಜಂಗೀಕುಸ್ತಿಯಲ್ಲಿ ಯಡಿಯೂರಪ್ಪ ಅಸಹಾಯಕ ಮತ್ತು ದುರ್ಬಲ ಮುಖ್ಯಮಂತ್ರಿಯಾಗಿದ್ದಾರೆ. ಅವರ ಇಮೇಜ್ ಮಾತ್ರವಲ್ಲ ಇಡೀ ಪಕ್ಷದ ವರ್ಚಸ್ಸಿಗೇ ಕಳಂಕ ಅಂಟಿಕೊಂಡಿದೆ. ಅಷ್ಟೇ ಅಲ್ಲ, ಎಲ್ಲಿಯವರೆಗೆ ಕರ್ನಾಟಕದ ಮೂರನೇ ಬ್ರಾಹ್ಮಣ ಮುಖ್ಯಮಂತ್ರಿ ತಾನಾಗಬೇಕು ಎಂಬ ಆಸೆಯನ್ನು ಅನಂತ್ ಬಿಡುವುದಿಲ್ಲವೋ ಅಲ್ಲೀತನಕ ಈ ರಂಪಾಟ, ಜಂಗೀಕುಸ್ತಿ, ಬೀದಿಜಗಳಗಳು ಮುಂದುವರೆಯುತ್ತಲೇ ಇರುತ್ತವೆ.

● ಸದಾಶಿವ ಶೆಣೈ





ಅತ್ತಿದ್ದು ಸಂತ್ರಸ್ತರಿಗಾಗಿ ಅಲ್ಲ!

ಇದೇ ಮೊದಲ ಬಾರಿ ಮೊನ್ನೆ ಮುಖ್ಯಮಂತ್ರಿ ಯಡಿಯೂರಪ್ಪ ಗಳಗಳನೆ ಅತ್ತುಬಿಟ್ಟರು. ಅವರು ಸಾರ್ವಜನಿಕವಾಗಿ ಅತ್ತಿದ್ದೇ ಇಲ್ಲ, ಹಾಗಂತ ಯಾವುದೇ ರಾಜಕಾರಣಿ ಈ ಹಿಂದೆ ಪಬ್ಲಿಕ್ಕಾಗಿ ಅತ್ತೇ ಇಲ್ಲ ಎಂದೇನೂ ಅಲ್ಲ. ಬಹುತೇಕ ತಿಂಗಳಿಗೊಮ್ಮೆ ಅಳುವ ಹವ್ಯಾಸ ಹೊಂದಿರುವ ಮಾಜಿ ಪ್ರಧಾನಿ ದೇವೇಗೌಡರು ಆ ನಿಟ್ಟಿನಲ್ಲಿ ವಿಶ್ವ ದಾಖಲೆಯನ್ನೇ ನಿರ್ಮಿಸಿರಬಹುದು. ಆದರೆ ಅವರು ಪ್ರತೀ ಬಾರಿ ಅತ್ತಾಗಲೂ ಅದರಿಂದ ಅವರಿಗೆ ರಾಜಕೀಯವಾಗಿ ಲಾಭವಾಗುತ್ತಿತ್ತೇ ವಿನಃ ನಷ್ಟವಂತೂ ಆಗುತ್ತಿರಲಿಲ್ಲ.

ಅಪ್ಪನ ಹಾದಿಯನ್ನೇ ಅವರ ಮಗ ಕುಮಾರಸ್ವಾಮಿ ಕೂಡಾ ಕರಗತ ಮಾಡಿಕೊಂಡಿದ್ದಾರೆ. ಇತ್ತೀಚೆಗೆ ರಾಮನಗರ ಅಸೆಂಬ್ಲಿ ಕ್ಷೇತ್ರದ ಉಪ ಚುನಾವಣೆಯ ಕೊನೆಯ ಸುತ್ತಿನ ಪ್ರಚಾರದ ಸಂದರ್ಭದಲ್ಲಿ "ನಮ್ಮ ಅಭ್ಯರ್ಥಿ ರಾಜುವನ್ನು ಸೋಲಿಸುವ ಬದಲು ನನಗೆ ವಿಷ ಕೊಟ್ಟು ಸಾಯಿಸಿ'' ಎಂದು ಕುಮಾರಣ್ಣ ಗಳಗಳನೆ ಸಾರ್ವಜನಿಕವಾಗಿ ಅತ್ತೇಬಿಟ್ಟರು. ಕುಮಾರಣ್ಣನ ಕಣ್ಣೀರನ್ನು ಕಂಡು ಕ್ಷೇತ್ರದ ಜನತೆ ಹೋಲ್‌ಸೇಲ್ ಆಗಿ ಜೆಡಿಎಸ್ ಅಭ್ಯರ್ಥಿ ರಾಜುಗೆ ಮತ ಕೊಟ್ಟು ಭಾರಿ ಅಂತರದಿಂದ ಗೆಲ್ಲಿಸಿಬಿಟ್ಟರು. ಇದು ಕುಮಾರಣ್ಣನ ಕಣ್ಣೀರಿನ ಪವರ್!

ಆದರೆ ಯಡಿಯೂರಪ್ಪ ಮೊನ್ನೆ ಅತ್ತಿದ್ದು ಶೋಭಾ ಕರಂದ್ಲಾಜೆಯನ್ನು ಸಂಪುಟದಿಂದ ಕೈಬಿಟ್ಟ ಸಂದರ್ಭದಲ್ಲಿ, ಖಾಸಗಿ ಚಾನೆಲ್ ಒಂದರ ಕಾರ್ಯಕ್ರಮದಲ್ಲಿ ಈ ಬಗ್ಗೆ ಮಾತನಾಡುತ್ತಾ "ಶೋಭಾ ಕರಂದ್ಲಾಜೆಯನ್ನು ಸಂಪುಟದಿಂದ ಕೈಬಿಟ್ಟು ನಾನು ಕ್ಷಮಿಸಲಾರದ ತಪ್ಪು ಮಾಡಿದೆ. ಈ ವಿಚಾರದಲ್ಲಿ ನನ್ನನ್ನು ಯಾವ ದೇವತೆಯೂ ಕ್ಷಮಿಸುವುದಿಲ್ಲ'' ಎಂದು ಯಡ್ಡಿ ಕಣ್ಣೀರು ಸುರಿಸಿದರು.





ಸಾಧಾರಣವಾಗಿ ರಾಜಕಾರಣಿಗಳು ರಾಜಕೀಯವಾಗಿ ಏನಾದರೂ ಲಾಭವಾಗುವುದಾದರೆ ಮಾತ್ರ ಕಣ್ಣೀರು ಸುರಿಸುವುದು ವಾಡಿಕೆ. ಆದರೆ ಶೋಭ ವಿಷಯಕ್ಕೆ ಯಡ್ಡಿ ಕಣ್ಣೀರು ಸುರಿಸಿದ್ದರಿಂದ ಅವರಿಗೆ ರಾಜಕೀಯವಾಗಿ ಒಂದು ಪೈಸೆ ಲಾಭವೂ ಆಗಲಿಲ್ಲ.

ಹಾಗೆ ನೋಡಿದರೆ, ಕಣ್ಣೀರು ಸುರಿಸಿ ಜನರ ಸಿಂಪಥಿ ಪಡೆಯುವ ಅವಕಾಶವೊಂದು ಯಡ್ಡಿಗೆ ಇತ್ತೀಚೆಗೆ ದೊರಕಿತ್ತು, ಅದು ಉತ್ತರ ಕರ್ನಾಟಕದ ಜನತೆ ಭೀಕರ ಪ್ರವಾಹದಿಂದ ತತ್ತರಿಸಿ ಬೀದಿ ಪಾಲಾಗಿದ್ದ ಸಂದರ್ಭ. ಆ ಸಮಯದಲ್ಲಿ ತನ್ನ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಪಡಿಸಿ ಯಡ್ಡಿ ಉತ್ತರ ಕರ್ನಾಟಕದಲ್ಲಿ ಮೊಕ್ಕಾಂ ಹೂಡಿ ಟಿವಿ ಕ್ಯಾಮೆರಾದ ಎದುರು ಮೊಸಳೆ ಕಣ್ಣೀರು ಸುರಿಸಿದ್ದಿದ್ದರೆ ಆಗ ಜನ ಅಯ್ಯೋ ಪಾಪ ಎನ್ನುತ್ತಿದ್ದರೇನೋ. ಭಿನ್ನಮತೀಯ ಚಟುವಟಿಕೆ ಪರಾಕಾಷ್ಠೆಯನ್ನು ತಲುಪಿದಾಗ ದೆಹಲಿಗೆ ಹೋಗಿ ವಾರಗಟ್ಟಲೆ ನಾಯಕರ ಮನೆ ಬಾಗಿಲು ಕಾಯುವ ಬದಲು "ನಾನು ಉತ್ತರ ಕರ್ನಾಟಕದ ಜನರ ಪುನರ್ವಸತಿಯಲ್ಲಿ ತೊಡಗಿದ್ದೇನೆ. ನೀವು ಏನು ಬೇಕಾದರೂ ನಿರ್ಣಯ ಕೈಗೊಳ್ಳಿ'' ಎಂದು ಹೇಳಿ ನಿರಾಶ್ರಿತರ ಕಣ್ಣೀರು ಒರೆಸುವ ನಾಟಕವಾಡಿದ್ದರೂ ಅದರಿಂದ ಒಂದಿಷ್ಟು ಪಬ್ಲಿಕ್ ಸಿಂಪಥಿ ಗಿಟ್ಟುತ್ತಿತ್ತೇನೋ.

ಈ ಹಿಂದೆ ಯಡ್ಡಿಗೆ ಕುಮಾರಸ್ವಾಮಿ ಕೈಕೊಟ್ಟಾಗ ಅದನ್ನೇ ತನ್ನ ಅಸ್ತ್ರವಾಗಿಸಿಕೊಂಡ ಯಡ್ಡಿ ಜನರ ಸಿಂಪಥಿ ಪಡೆದು ಅಧಿಕಾರದ ಗದ್ದುಗೆಯನ್ನು ಏರಿದರು. ಆದರೀಗ, ಜನ ಕಣ್ಣೀರಿಡುತ್ತಿದ್ದರೂ ಕ್ಯಾರೆ ಅನ್ನದ ಯಡ್ಡಿ ತನ್ನ ಸಂಪುಟದ ಸಹೋದ್ಯೋಗಿಯೊಬ್ಬಳನ್ನು ಕೈಬಿಟ್ಟಿದ್ದಕ್ಕಾಗಿ ಆಕಾಶವೇ ತಲೆ ಮೇಲೆ ಬಿದ್ದವರಂತೆ ಕಣ್ಣೀರು ಸುರಿಸಿದ್ದು ಅವರ ರಾಜಕೀಯ ಅಪಕ್ವತೆಯನ್ನು ತೋರಿಸುತ್ತದೆ.

ರಾಘವೇಶನಿಗೆ ಮಠ ತ್ಯಜಿಸುವುದೊಂದೇ ದಾರಿ

ಇತ್ತ ಮುಖ್ಯಮಂತ್ರಿ ಯಡ್ಡಿ ಭಿನ್ನಮತೀಯರಿಂದಾಗಿ ತನ್ನೆಲ್ಲಾ ಅಧಿಕಾರ ಕಳೆದುಕೊಂಡು ಅಬ್ಬೇಪಾರಿಯಂತಾಗಿರುವ ಸಂದರ್ಭದಲ್ಲಿಯೇ ಅತ್ತ ಯಡ್ಡಿಯ ಪರಮಪೂಜ್ಯ ಗುರು ಶ್ರೀ ರಾಮಚಂದ್ರಾಪುರ ಮಠದ ಶ್ರೀರಾಘವೇಶ್ವರ ಸ್ವಾಮೀಜಿ ಮಠದಲ್ಲಿ ಅಧಿಕಾರ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವ ಸುದ್ದಿ ಬಂದಿದೆ. ರಾಜ್ಯದ ಎಲ್ಲ ಮಾಧ್ಯಮಗಳು 'ಯಡ್ಡಿಯ ಸುದ್ದಿಯನ್ನು ಇಂಚಿಂಚೂ ವರದಿ ಮಾಡುವುದರಲ್ಲೇ ಬ್ಯೂಸಿ ಆಗಿರುವುದರಿಂದ ಪಾಪ ಈ 'ಗೋ'ಸ್ವಾಮಿ ಬಗೆಗಿನ ಸುದ್ದಿಗೆ ಯಾರಲ್ಲೂ ವ್ಯವಧಾನವಿಲ್ಲ, ಆದ್ದರಿಂದ ಆತನ ಮಠದ ಸುತ್ತ ಇರುವ ಮಂದಿಯೇ ಪಾಂಪ್ಲೆಟ್‌ಗಳನ್ನು ಮಾಡಿಸಿ, ಈ ಸುದ್ದಿಯನ್ನು ಹಂಚಿಕೊಳ್ಳುತ್ತಿದ್ದಾರೆ.

ಅಖಿಲ ಭಾರತ ಹವ್ಯಕ ಹಿತರಕ್ಷಣಾ ಸಮಿತಿಯೊಂದು ಹುಟ್ಟಿಕೊಂಡು ಈಗಾಗಲೇ ರಾಘವೇಶ್ವರನ ಅವ್ಯವಹಾರಗಳನ್ನು ಪಟ್ಟಿ ಮಾಡಿ ಮಠದ ಭಕ್ತರಿಗೆ ನೀಡಾಗಿದೆ. ಅದೇ ಹೊತ್ತಿಗೆ ಸದ್ಯದಲ್ಲೇ ಸ್ವಾಮಿ ಮದುವೆಯಾಗಲಿದ್ದಾರೆ ಎಂದೂ, ಅದಕ್ಕಾಗಿ ಅವರು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ ಎಂದೂ ಸುದ್ದಿಗಳು ಹರಡಲಾರಂಭಿಸಿವೆ. ಈ ಹಿಂದೆ ಮಠದ ಆಡಳಿತ ನೋಡಿಕೊಳ್ಳಲು ವಿವಿಧ ಪರಿಷತ್‌ಗಳನ್ನು ರಚಿಸಲಾಗಿತ್ತು, ಆದರೆ ಆ ಪರಿಷತ್ತಿನಲ್ಲಿರುವ ಪ್ರಮುಖರೇ ಸ್ವಾಮೀಜಿಯ ವಿರುದ್ಧ ತಿರುಗಿಬಿದ್ದು, 'ಗೋ... ಗೋ...' ಎಂದು ಇಂಗ್ಲಿಷ್ ಅರ್ಥದಲ್ಲಿ ಕೂಗಹತ್ತಿದರು. ಇವರೆಲ್ಲಿ ಮಠವನ್ನು ತಮ್ಮ ವಶಕ್ಕೆ ತೆಗೆದುಕೊಂಡು, ತನ್ನನ್ನು ಹೊರದಬ್ಬುತ್ತಾರೋ ಎಂದು ಹೆದರಿದ ರಾಘವೇಶ್ವರ, ಈಗ ಆ ಪರಿಷತ್‌ಗಳನ್ನೆಲ್ಲಾ ವಿಸರ್ಜನೆ ಮಾಡಿದ್ದಾನೆ.

ಮಠದಲ್ಲಿದ್ದ ಮಂದಿಯೆಲ್ಲಾ ತನ್ನ ಮತ್ತು ಹೆಣ್ಣು ಪೀಡಕ ಮೈದುನ ಶರ್ಮನ ವಿರುದ್ಧ ತಿರುಗಿಬಿದ್ದುದ್ದರಿಂದ ಅಳಿದುಳಿದ ತನ್ನ ಆಪ್ತರನ್ನು ಕರೆಸಿಕೊಂಡು ಮಠದ ಸುರಕ್ಷಾ ಸಮಿತಿ ಎಂಬ ಸಂಘಟನೆಯೊಂದನ್ನು ಹುಟ್ಟು ಹಾಕಿಕೊಂಡಿದ್ದಾನೆ. ಈ ಸಮಿತಿ ಅಡಿಯಲ್ಲಿ ರಕ್ಷಣೆ ಪಡೆದು ಈಗ ದಿನ ದೂಡುತ್ತಿದ್ದಾನೆ ಗೋ ಸ್ವಾಮೀಜಿ. ಪಾಪ, ಒಂದರ್ಥದಲ್ಲಿ ಯಡ್ಡಿಗಿಂತ ಹೀನಾಯ ಸ್ಥಿತಿ ಯಡ್ಡಿಯ ಈ ಗುರುದ್ದು!

ಶ್ರೀರಾಮಚಂದ್ರಾಪುರ ಮಠದ ರಕ್ಷಣಾ ಸಮಿತಿಯ ಅಧ್ಯಕ್ಷನಾಗಿರುವವನು ಯು.ಎಚ್.ರಾಮಪ್ಪ ಎಂಬ ಸಾಗರದ ಗಿರಾಕಿ. ಬಿಜೆಪಿಗಾಗಿ ದುಡಿದರೂ ಒಂಚೂರು ಮೇಲೆ ಬರಲಾಗದ, ಕಳೆದ ಚುನಾವಣೆಯಲ್ಲಿ ಟಿಕೆಟ್ ಸಿಗದೆ ಬಂಡಾಯ ಅಭ್ಯರ್ಥಿಯಾಗಿ ನಿಂತು ಮಾನ-ಮರ್ಯಾದೆ ಕಳೆದುಕೊಂಡ ಈ ಹವ್ಯಕ ನಾಯಕನ ಸದ್ಯದ ಕೆಲಸವೆಂದರೆ ಗೋಸ್ವಾಮಿಯ ಮೇಲಿನ ಆರೋಪಗಳನ್ನೆಲ್ಲಾ ನಿರಾಕರಿಸುತ್ತಾ ಹೇಳಿಕೆ ನೀಡುವುದು.



ಇತ್ತೀಚೆಗೆ ಶಿವಮೊಗ್ಗದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಈ ಸ್ವಾಮಿಭಕ್ತ 'ಶ್ರೀ ರಾಘವೇಶ್ವರ ಸ್ವಾಮೀಜಿ ಪೀಠತ್ಯಾಗ ಮಾಡಿ ಮದುವೆಯಾಗಲಿದ್ದಾರೆ ಎಂಬ ಸುದ್ದಿ ಸುಳ್ಳು. ಅಂತಹ ಯಾವ ಚಟುವಟಿಕೆಗಳೂ ನಡೆದಿಲ್ಲ' ಎಂದು ಸ್ಪಷ್ಟನೆ ನೀಡಿದ್ದಾನೆ. ಇದರರ್ಥ ಈಗ ನಡೆದಿಲ್ಲ, ಮುಂದೆ ನಡೆಯಲಿದೆ ಎಂದೇ..? ಭಕ್ತರು ಗೊಂದಲದಲ್ಲಿ ಬಿದ್ದು ಪ್ರಶ್ನಿಸುತ್ತಿದ್ದಾರೆ. ಮಠದಲ್ಲಿನ ಪರಿಷತ್ ವಿಸರ್ಜನೆ ಮಾಡಿರುವುದಕ್ಕೆ ಕಾರಣ ಮಠದ ಆಂತರಿಕ ವಿಚಾರ ಹೊರಗಿನವರಿಗೆ ಸಂಬಂಧಿಸಿದ್ದಲ್ಲ ಎಂದು ಈ ರಾಮಪ್ಪ ಸ್ವಾಮೀಜಿ ಪರ ವಕಾಲತ್ತು ಮಾಡುತ್ತಿದ್ದಾನೆ. ಯಡ್ಡಿಯ ಮೂಲಕ ಸರ್ಕಾರದಿಂದ ಕೋಟ ಕೋಟಿ ಹಣ ಪೀಕಿದಾಗ, ಅದು ಸಾರ್ವಜನಿಕರ ಹಣ ಎಂದು ಸ್ವಾಮೀಜಿಯ ಪಟಾಲಂಗೆ ಗೊತ್ತಿರಲಿಲ್ಲವೇ? ಸಾರ್ವಜನಿಕರ ಹಣ ಪಡೆದ ಮಠ ಪಾರದರ್ಶಕವಾಗಿ ವ್ಯವಹರಿಸಬೇಕೆಂಬ ಜ್ಞಾನ, ಅವಕಾಶ ಸಿಕ್ಕಾಗೆಲ್ಲ ಧರ್ಮ, ನ್ಯಾಯ-ನೀತಿ ಬಗ್ಗೆ ಮಾತನಾಡುವ ಸ್ವಾಮೀಜಿಗಿಲ್ಲವೇ? ಎಂದು ಭಕ್ತರು ಪ್ರಶ್ನಿಸುತ್ತಿದ್ದಾರೆ.

ಈ ಎಲ್ಲ ಬೆಳವಣಿಗೆಯಿಂದ ವಿಶ್ವಮಂಗಲ ಗೋಯಾತ್ರೆ ದಿಕ್ಕು ತಪ್ಪಿ ಕುಳಿತಿದೆ. ದೇಶಾದ್ಯಂತ ಇದನ್ನೊಂದು ಸಂಘಪರಿವಾರದ ದೊಡ್ಡ ಜಾತ್ರೆಯಾಗಿಸಲು ಹೊರಟಿದ್ದ ಸ್ವಾಮೀಜಿಗೆ ಬಿಜೆಪಿಯ ಪೋಲು ದೊಡ್ಡ ಹೊಡೆತ ನೀಡಿತ್ತು, ಇತ್ತ ರಾಜ್ಯದಲ್ಲಿಯೂ ಬಿಜೆಪಿ ಮಂದಿ ತಮ್ಮದೇ ಬೀದಿ ಜಗಳದಲ್ಲಿ ತಲ್ಲೀನರಾಗಿ ಈತನ ಬಗ್ಗೆ ಕ್ಯಾರೆ ಎನ್ನುತ್ತಿಲ್ಲ. ಇದೀಗ ಮಠದ ಭಕ್ತರೂ ತಿರುಗಿ ಬಿದ್ದಿದ್ದರಿಂದ ಯಡ್ಡಿಯಂತೆ ಅಸಹಾಯಕನಾಗಿ ಸ್ವಾಮೀಜಿ ರೋದಿಸುತ್ತಿದ್ದಾನೆ.

ಮೊನ್ನೆ ಮಠದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ, ಯಡ್ಡಿಯಂತೆಯೇ 'ನನ್ನದೇನೂ ತಪ್ಪಿಲ್ಲ, ಗುರಿಯ ಬಗ್ಗೆ ನನಗೆ ಸ್ಪಷ್ಟತೆ ಇದೆ. ಅಪಪ್ರಚಾರಕ್ಕೆ ಹೆದರುವುದಿಲ್ಲ, ತಪ್ಪಿತಸ್ಥರನ್ನು ಶ್ರೀರಾಮ ನೋಡಿಕೊಳ್ಳುತ್ತಾನೆ' ಎಂದೆಲ್ಲಾ ಗೋಳಾಡಿಕೊಂಡಿದ್ದಾನೆ.

ಒಟ್ಟಾರೆ, ಗುರು ರಾಘವೇಶ್ವರ -ಶಿಷ್ಯ ಯಡ್ಡಿಯ ಪಾಪದ ಕೊಡ ಒಟ್ಟಿಗೇ ತುಂಬಿ ತುಳುಕುತ್ತಿದೆ.

ತಿರುಗಿಬಿದ್ದ ಸ್ಥಳೀಯರು

ರಾಘವೇಶನ ವಿರುದ್ಧ ಸ್ಥಳೀಯರು ತಿರುಗಿ ಬಿದ್ದು ಬಹಳ ದಿನಗಳಾಗಿವೆ. ಗೋಕರ್ಣದ ಒಡೆತನ ಸಿಕ್ಕುತ್ತಿದ್ದಂತೆಯೇ ಸ್ವಾಮೀಜಿಯ ತಲೆ ತಿರುಗಿತ್ತು, ಅಲ್ಲಿದ್ದ ಸರ್ಕಾರದ ಆಸ್ತಿಯನ್ನೆಲ್ಲಾ ತನ್ನ ಸ್ವಂತ ಹೆಸರಿಗೆ ಮಾಡಿಕೊಂಡ ಸ್ವಾಮಿ, ಅಲ್ಲಿಯ ಆದಾಯದಿಂದ ಮಜಾ ಉಡಾಯಿಸಲು ಪ್ರಾರಂಭಿಸಿದ. ಉತ್ತರ ಭಾರತದ ಶ್ರೀಮಂತರನ್ನು ಕರೆಸಿಕೊಂಡು ಅವರನ್ನು ಬೋಳಿಸಿ ಇನ್ನಷ್ಟು ದುಡ್ಡು ಮಾಡಿಕೊಂಡ. ಮಲ್ಲಿಕಾ ಶೆರಾವತ್ ಎಂಬ ಸೆಕ್ಸ್ ಬಾಂಬ್ ಅನ್ನು ಆಹ್ವಾನಿಸಿ ಗೃಹಸ್ಥರೂ ಹುಬ್ಬೇರಿಸುವಂತೆ ಮಾಡಿದ. ರಾಮಚಂದ್ರಾಪುರ ಮಠವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾರಂಭಿಸಿದ. ಕೊಲ್ಕತ್ತಾದಲ್ಲಿ ಚಾತುರ್ಮಾಸ ಮುಗಿಸಿ ಹಿಂತಿರುಗಿದ ಸ್ವಾಮೀಜಿ ಪುರ ಪ್ರವೇಶ ಮಾಡಿದ್ದು ಅಂದರೆ ನೇರವಾಗಿ ಹಿಂದಿರುಗಿದ್ದು ರಾಮಚಂದ್ರಾಪುರಕ್ಕಲ್ಲ, ಗೋಕರ್ಣಕ್ಕೆ.

ಈ ಎಲ್ಲ ಬೆಳವಣಿಗೆಯಿಂದ ಮಠದವರು, ಸೀಮಾ ಪರಿಷತ್ ಮಂದಿ ಬೆಚ್ಚಿ ಬಿದ್ದರು. ಹೀಗೇ ಬಿಟ್ಟರೆ ರಾಮಚಂದ್ರಾಪುರ ಮಠವನ್ನೇ ಸ್ವಾಮೀಜಿ ಮರೆತು ಬಿಡುತ್ತಾರೆ ಎಂದು ಹೆದರಿ ಸ್ವಾಮೀಜಿ ವಿರುದ್ಧ ತಿರುಗಿ ಬಿದ್ದರು. ತಮ್ಮ ವಿರುದ್ಧ ಮಾತನಾಡಿದವರನ್ನು ಸ್ವಾಮೀಜಿ ಮರಿ ರಾಜಕೀಯ ಪುಢಾರಿಯಂತೆ ಬಗ್ಗುಬಡಿಯಲು ಹೊರಟಾಗ ಮಠದ ಒಂದೊಂದೇ ವಿಷಯ ಹೊರಬೀಳಲಾರಂಭಿಸಿತು.

ಇದೀಗ ಮುಖ್ಯಮಂತ್ರಿ, ಯಡ್ಡಿಯಂತೆ ಎಚ್ಚೆತ್ತ ಸ್ವಾಮಿ ಪರಿಷತ್‌ಗಳನ್ನು ಪುನರ್ ರಚನೆ ಮಾಡಲು ಹೊರಟಿದ್ದಾನೆ. ಸ್ಥಳೀಯರಿಗೆ ಆದ್ಯತೆ ನೀಡಿ, ಅವರನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಆದರೆ ಸ್ವಾಮೀಜಿ ಮೇಲಿನ ಗೌರವ ಕಡಿಮೆಯಾಗಿದೆ. ಭಕ್ತರು ಕೆಂಡಕಾರುತ್ತಿದ್ದಾರೆ. ಪೀಠತ್ಯಾಗ ಮಾಡುವುದೊಂದೇ ಈಗ ಸ್ವಾಮೀಜಿಯ ಮುಂದಿರುವ ದಾರಿ. ಮಠದ ಗೌರವ ಉಳಿಸಲು ಹವ್ಯಕ ಸಮಾಜ ಇದಕ್ಕಾಗಿ ಒತ್ತಾಯಿಸಲಾರಂಭಿಸಿದೆ.

● ನೀರದ ಬೆಂಗಳೂರು

ಹೆಣ್ಣಿಲ್ಲದ ಸಂಪುಟ ಜಡಗೊಂಡ ಆಶ್ರಮದಂತೆ ಮೇಡಂ!

ಬಿಜೆಪಿ ಪಾರ್ಟಿಯ ಅಲ್ಲೋಲಕಲ್ಲೋಲದ ಸಂದರ್ಭದಲ್ಲಿ ಅತ್ತ ಪಿ.ಜಿ.ಆರ್, ಸಿಂಧ್ಯಾ ಎಂಬ ಹಳೆ ಮೋಟಾರು ದೇವೇಗೌಡರ ಗ್ಯಾರೇಜ್ ಸೇರಿದೆಯಂತಲ್ಲಾ, ದೇವೇಗೌಡರನ್ನ ಕಂಡಕೂಡಲೇ ಹಳೇ ಅಪ್ಪನನ್ನು ಕಂಡ ಅಬ್ಬೇಪಾರಿಯಂತಾದ ಸಿಂಧ್ಯಾ, ಅವರ ಸುತ್ತ ತಿರುಗಾಡಿ, ಬಾಲ ಅಲ್ಲಾಡಿಸಿ ಮೈಮುರಿದು ಇನ್ನೆಲ್ಲೂ ಹೋಗಲ್ಲ ಕ್ಷಮಿಸಿ ಎಂಬಂತೆ ನೋಡಿದರಂತಲ್ಲಾ, ದೇವೇಗೌಡರು ಕೂಡ ಸಿಂಧ್ಯನನ್ನು ನೋಡಿ ಹಿರಿಮಗನಿಗಿಂತಲೂ ಹಿರೀಮಗನನ್ನ ನೋಡಿದಂತಾಗಿ "ಕುಮಾರಸ್ವಾಮಿಯ ಜವಾಬ್ದಾರಿ ನಿನಗೆ ವಹಿಸುತ್ತಿದ್ದೇನೆ. ಆತನಿಗಿರಬಹುದಾದ ಶತ್ರುಗಳಿಂದ ಅವನನ್ನು ರಕ್ಷಿಸಬೇಕು" ಎಂದರಂತಲ್ಲಾ, ಕೂಡಲೇ ಕ್ರಿಕೆಟ್ ಪ್ರೇಮಿಯಾದ ಸಿಂಧ್ಯಾ "ನೀವೇನು ಹೆದರಬೇಡಿ ಸಾರ್. ನಾನೀಗಲೇ ಸಚಿನ್ ತೆಂಡೂಲ್ಕರ್ ಆಗುವೆ. ಕುಮಾರಸ್ವಾಮಿಯೇ ಧೋನಿ. ನೀವೇ ರಣಜಿ" ಎಂದುಬಿಟ್ಟರಂತಲ್ಲಾ, ಥೂತ್ತೇರಿ!


*****

ಸಿಂಧ್ಯಾ ಅಂದ ಮಾತನ್ನು ಒಳಕ್ಕಿಳಿಸಿಕೊಂಡ ದೇವೇಗೌಡರು "ರಣಜಿ ಅಂದರೆ ಏನು" ಎಂದು ಗಾಢವಾಗಿ ಯೋಚಿಸುತ್ತಿರಬೇಕಾದರೆ ಇತ್ತ ಕುಮಾರಣ್ಣನ ಅಭಿಮಾನಿಗಳು ತಾವು ಕೆಂಗೇರಿ ಕಡೆಯಲ್ಲಿ 'ಮನೆ ಮನೆಗೂ ಕುಮಾರಣ್ಣ' ಎಂಬ ಕಾರ್ಯಕ್ರಮವನ್ನು ಹಾಕಿಕೊಂಡು ಆ ದಿಸೆಯಲ್ಲಿ ಯಶಸ್ವಿಯಾಗುತ್ತಿರುವುದಾಗಿ ಕೊರೆದವಂತಲ್ಲಾ, ಇದರಿಂದ ಉತ್ತೇಜನಗೊಂಡ ಕುಮಾರಣ್ಣ "ನೀವೆಲ್ಲ ಒಳ್ಳೆ ಕೆಲಸ ಮಾಡ್ತಾಯಿದ್ದೀರಿ ಬ್ರದರ್. ನಮ್ಮ ಪಾರ್ಟಿ ಪವರ್‌ಗೆ ಬಂದ ಮೇಲೆ ನಿಮಗೆಲ್ಲಾ ಒಳ್ಳೆ ಪಾರ್ಟಿ ಕೊಡ್ತಿನಿ. ಬೆಂಗಳೂರಿನ ಯಾವುದೇ ಹೋಟೆಲ್, ರೆಸಾರ್ಟ್‌ನಲ್ಲಿ ತಿಂದು ಆ ಬಿಲ್ಲನ್ನು ನಮ್ಮ ಕುಟುಂಬದ ಬ್ರದರ್ಸ್‌ಗೆ ಕಳಿಸಿದರಾಯ್ತು" ಎಂಬ ಆಶ್ವಾಸನೆ ಕೊಟ್ಟರಂತಲ್ಲಾ, ಇದರಿಂದ ಉತ್ತೇಜನಗೊಂಡ ಕೆಂಗೇರಿ ಬಾರ್ಡರ್ ಬ್ರದರ್ಸ್‌ಗಳು, 'ಮನೆ ಮನೆಗೆ ಕುಮಾರಣ್ಣ'ನ ಜೊತೆಗೆ 'ಗಲ್ಲಿಗಲ್ಲಿಗೆ ರಾಧಿಕಾ, 'ಊರೂರಿಗೆ ದೇವೇಗೌಡ', 'ಕೇರಿ ಕೇರಿಗೆ ಚೆನ್ನಮ್ಮ' ಎಂಬ ಕಾರ್ಯಕ್ರಮವನ್ನು ಇನ್ನು ಹಾಕಿಕೊಂಡಿಲ್ಲವಂತಲ್ಲ, ಥೂತ್ತೇರಿ!

*****

ಸದ್ಯದ ಸಂದರ್ಭದ ಹುತಾತ್ಮಳಂತಿರುವ ಶೋಭಾ ಕರಂದ್ಲಾಜೆಯವರನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಅದಕ್ಕಾಗಿ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

ರಿಂಗ್‌ಟೋನ್: "ಬಿಸಿಲಾದರೇನು ಮಳೆಯಾದರೇನು ಜೊತೆಯಾಗಿ ಎಂದೂ ನೀನಿಲ್ಲವೇನೂ ಬಿಸಿ...."



"ಹಲೋ ಯಾರು?"

"ನಾನು ಮೇಡಂ, ಯಾಹು ಅಂತ ಪತ್ರಕರ್ತ."

"ಕ್ಷಮಿಸಿ ಈಗ ಮಾತನಾಡಲು ಸಮಯವಿಲ್ಲ, ನಂತರ ಫೋನ್ ಮಾಡಿ."

"ಒಂದೇ ನಿಮಿಷ ಮೇಡಂ. ಮಂತ್ರಿಗಿರಿ ಹೋದ್ರು ಇಷ್ಟು ಲವಲವಿಕೆಯಿಂದ ನಗ್ತಿರಲ್ಲ, ಅದರ ಕಾರಣ ಹೇಳಿ ಮೇಡಂ."

"ಅದರ ಕಾರಣ ಸ್ಪಷ್ಟವಾಗಿದೆಯಲ್ಲ, ಮಂತ್ರಿಗಿರಿ ಶಾಶ್ವತ ಎಂದು ಭಾವಿಸಿದವಳಲ್ಲ ನಾನು. ಸಂಘ ಪರಿವಾರಕ್ಕೆ ನಾನು ಸಲ್ಲಿಸಿದ ಸೇವೆಯಿಂದ ಪ್ರಾಪ್ತವಾಗಿದ್ದ ಸ್ಥಾನ. ಅದಾಗಿ ಹೋಯ್ತು. ಮುಂದೆ ಮಂತ್ರಿಗಿರಿಗಿಂತ ಉನ್ನತವಾದ ಸ್ಥಾನ ಸಿಗುವ ಭರವಸೆಯಿಂದ ಖುಷಿಯಾಗಿದ್ದೇನೆ."

"ಏನೇ ಆಗ್ಲಿ, ನೀವಿಲ್ಲದ ಎಡೂರಪ್ಪನ ಸಂಪುಟ ಸಪ್ಪೆ ಮೇಡಂ. ಹೆಣ್ಣಿಲ್ಲದ ಮನೆ ಹೇಗೆ ಜಡಗೊಂಡ ಆಶ್ರಮದಂಗೆ ಬಿಕೋ ಅಂತದೊ ಅದೇ ರೀತಿ ನೀವಿಲ್ಲದ ಎಡೂರಪ್ಪನ ಸಂಪುಟ ಬಿಕೋ ಅಂತದೆ."

"ಅದರ ಬಗ್ಗೆ ನಾನೇನು ಹೇಳುವುದಿಲ್ಲ."

"ಮುಂದೆ ಏನು ಮಾಡಬೇಕು ಅಂತ ಇದ್ದಿರಿ ಮೇಡಂ?"

"ನಾನು ಸಂಘದ ಹಿನ್ನೆಲೆಯಿಂದ ಬಂದವಳು. ಸಂಘವು ಸದಾ ಏನಾದರೊಂದು ಕಾರ್ಯಕ್ರಮ ಹಾಕಿಕೊಳ್ಳುವ ಪರಿಪಾಠವುಂಟು. ಹಾಗಾಗಿ ಅದರ ಕಾರ್ಯಕ್ರಮಕ್ಕಾಗಿ ಕಾಯುತ್ತೇನೆ."

"ಸಂಘದ ಕಾರ್ಯಕ್ರಮ ಮುಗದಂಗೆ ಕಾಣ್ತಾವಲ್ಲಾ ಮೇಡಂ."

"ಭಾರತ ದೇಶ ಇರುವವರೆಗೆ ಸಂಘದ ಕಾರ್ಯಗಳು ಮುಗಿಯುವುದಿಲ್ಲ, ಅದರ ಕಾರ್ಯ ನಿರಂತರ."

"ಹಾಗಾದ್ರೆ ನಮ್ಮ ನಾಡಿಗೆ ಕೆಟ್ಟಕಾಲ ಇನ್ನೂ ಇದೆ ಅಂದಂಗಾಯ್ತಲ್ಲ ಮೇಡಂ."

"ಹಾಗೆ ಹೇಳುವುದು ಬೇಡ. ನಾನು ಎಂತಹ ಸ್ಥಿತಿಯಲ್ಲಿದ್ದವಳು. ಹೀಗೆಲ್ಲಾ ಆಗ್ತೇನೆ ಅಂತ ಕನಸು ಕಂಡವಳಲ್ಲ, ನನ್ನ ಬದುಕಿನಲ್ಲಿ ಒಳ್ಳೆ ಕಾಲ ಬಂದಂತೆ, ನಮ್ಮ ನಾಡಿಗೂ ಒಳ್ಳೆ ಕಾಲ ಬರುವುದುಂಟು."

"ಎಡೂರಪ್ಪನವರ ಬಗ್ಗೆ ಏನೇಳ್ತೀರಿ?"

"ಅವರು ತುಂಬ ಒಳ್ಳೆಯವರು. ನಮ್ಮಂಥವರನ್ನು ಕಂಡರೆ ತುಂಬ ಇಷ್ಟ."

"ನಿಜ ಮೇಡಂ. ನಿಮ್ಮನ್ನು ಸಂಪುಟದಿಂದ ಕೈಬಿಟ್ಟಮೇಲೆ ಅವರ ಮುಖ ನೋಡಕ್ಕಾಗ್ತಯಿಲ್ಲ, ಅವರ ಧರ್ಮಪತ್ನಿ ಈಜಾಡೋದಿಕ್ಕೆ ಹೋಗಿ ಮಡಿದಾಗ್ಲು ಇಷ್ಟು ದುಃಖ ಪಟ್ಟಿದ್ದನ್ನು ನಾನು ನೋಡಲಿಲ್ಲ ಮೇಡಂ."

"ಅವರಿಗೆ ಯಾಕಷ್ಟು ದುಃಖ ಆಗಿದೆ ಅಂದರೆ ನಮ್ಮ ಸಮಾಜದಲ್ಲಿ ತ್ಯಾಗ ನಿಷ್ಠೆಗೆ ಬೆಲೆಯಿಲ್ಲ ಅಂತ ಹೇಳಿ ಅವರಿಗೆ ಬೇಸರವಾಗಿದೆ."

"ನಿಜ ಮೇಡಂ. ಅವರ ವಿಷಯದಲ್ಲಿ ನಿಮ್ಮ ನಿಷ್ಠೆ ಅಚಲವಾಗಿತ್ತು, ತ್ಯಾಗವೂ ಕೂಡ ಸಂಪೂರ್ಣ ತ್ಯಾಗದಿಂದ ಕೂಡಿತ್ತು. ಒಂದು ಸಮಸ್ಯೆ ಮೇಡಂ, ನಿಮಗೆ ಒಳ್ಳೆಯವರಾಗಿ ಕಾಣೊ ಎಡೂರಪ್ಪ ನಮಗೆ ಈ ಕ್ಷಣಕ್ಕೂ ಒಳ್ಳೆಯವರಾಗಿ ಕಂಡಿಲ್ಲವಲ್ಲಾ."



"ಅದು ನಾವು ನೋಡುವ ದೃಷ್ಟಿಕೋನದ ಮೇಲೆ ಹೋಗುವುದುಂಟು."

"ಅಂದ್ರೆ ನಮ್ಮ ದೃಷ್ಟಿಕೋನ ಸರಿಯಿಲ್ಲವೆ?"

"ಸರಿಯಿಲ್ಲ ಅಂತ ಹೇಳಿ ನನಗೀಗಾಗಲೇ ಗೊತ್ತಾಗಿದ್ದುಂಟು. ನಾನು ಒಬ್ಬ ಗ್ರಾಮೀಣಾಭಿವೃದ್ಧಿ ಸಚಿವೆ, ಎಡೂರಪ್ಪ ಮುಖ್ಯಮಂತ್ರಿ, ನಾವು ಜೊತೆಯಾಗಿ ಒಂದು ಕಾರ್ಯಕ್ರಮದಲ್ಲಿ ಭಾಗಿಯಾದರೆ ಅದನ್ನು ಹೇಯವಾಗಿ ಮಾತನಾಡಿಕೊಳ್ಳುವ ನಿಮ್ಮಂತವರ ದೃಷ್ಟಿಕೋನ ಸರಿಯಿದೆ ಅಂತ ಹೇಳಿ ಹೇಗೆ ತಿಳಿಯುವುದು."

"ಅದೂ ಏನಂದ್ರೆ ಮೇಡಂ, ಎಡೂರಪ್ಪಾಗೆ ಹೆಂಡತಿ ತೀರಿಕೊಂಡವ್ರುರೆ, ನಿಮಗೆ ಮದುವೆಯಾಗಿಲ್ಲ ಅಂತ ಕೇಳಿದ್ವಿನಿ. ಹೀಗಿರುವಾಗ ಬಿಜೆಪಿ ಕಾರ್ಯಕರ್ತರ ಬಿಡುವಿನ ಸಮಯ, ಯಾವ ವಿಷಯದಿಂದ ಪೂರ್ಣಗೊಳ್ಳ ಬೇಕು ಹೇಳಿ, ಅಂಥವರನ್ನ ನೋಡಿ ನಕ್ಕು ಕ್ಷಮಿಸಿದಿರಲ್ಲ, ನೀವು ರಿಯಲಿ ಗ್ರೇಟ್ ಮೇಡಂ."

"ಥೂತ್ತೇರಿ!!!" ●



ಸೂಪರ್‌ಸಿಎಂ ಯಾರಿವನು ಸಂತೋಷ್?

ಸುಮಾರು ನಲವತ್ತು ವರ್ಷದ ಸಂತೋಷ್ ಆರೆಸೆಸ್ಸಿನ ನಿಷ್ಠಾವಂತ ಕಾರ್ಯಕರ್ತನಾದರೂ ಬಹಳ ಮಹತ್ವಾಕಾಂಕ್ಷಿ ರಾಜಕಾರಣಿ 'ನೋಡ್ತಾ ಇರಿ, ಮುಂದೆ ಒಂದಲ್ಲಾ ಒಂದು ದಿನ ನಾನು ಕರ್ನಾಟಕದ ಮುಖ್ಯಮಂತ್ರಿ ಆಗ್ತೀನಿ' ಅನ್ನುವುದು ಇವನ ಚಾಳಿ. ಈಗ ರಚಿಸಲಾಗುತ್ತಿರುವ ಸಮನ್ವಯ ಸಮಿತಿಯಲ್ಲೂ ಈ ಮಹಾಶಯನಿದ್ದಾನೆ

● ಪಾರ್ವತೀಶ್

ಒಂದು ಆಶ್ಚರ್ಯದ ಸಂಗತಿ ಏನು ಗೊತ್ತೆ? ಕರ್ನಾಟಕದ ಹಾಲಿ ಬಿಜೆಪಿ ಸರ್ಕಾರದ ಅತ್ಯಂತ ಪವರ್‌ಫುಲ್ ಮನುಷ್ಯ ಈ ಸಂತೋಷ್!

ಆದರೆ ಈತನ ಮುಖವನ್ನು ಜನ ನೋಡಿಲ್ಲ, ಯಾವ ಪತ್ರಿಕೆ-ಟಿವಿಗಳಲ್ಲೂ ಸಂತೋಷ್ ಫೋಟೋ ಕಾಣಿಸುವುದಿಲ್ಲ, ಆದರೇನು ಸರ್ಕಾರ ಏನೇ ಬಿಕ್ಕಟ್ಟಿಗೆ ಸಿಲುಕಿದಾಗಲೂ ಮುಖ್ಯಮಂತ್ರಿ ಯಡಿಯೂರಪ್ಪ ಮೊದಲು ಓಡಿಹೋಗುವುದು ಇಬ್ಬರ ಹತ್ತಿರ.

ಅವರಲ್ಲಿ ಒಬ್ಬಾತ ಮೈ.ಚ. ಜಯದೇವ. ಈತ ರಾಜ್ಯ ಆರ್‌ಎಸ್‌ಎಸ್‌ನ ಮುಖ್ಯಸ್ಥ. ಇನ್ನೊಬ್ಬಾತನೇ ಈ ಸಂತೋಷ್. ಈತನ ಕೂಡ ಆರ್‌ಎಸ್‌ಎಸ್ ಎಲಿಮೆಂಟ್. ಜೊತೆಗೆ ಈಗಿನ ರಾಜ್ಯ ಬಿಜೆಪಿಯ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿದ್ದಾನೆ ಸಂತೋಷ್. ಅದು ಭಿನ್ನಮತೀಯರ ಕಾಟವಿರಲಿ, ಮಂತ್ರಿಮಂಡಲ ವಿಸ್ತರಣೆಯಾಗಲಿ, ಬಿಜೆಪಿ ಪದಾಧಿಕಾರಿಗಳ ನೇಮಕಾತಿ, ನಿಗಮ ಮಂಡಳಿ ನೇಮಕಾತಿಯಾಗಲಿ ಅವೆಲ್ಲಾ ಸಂತೋಷ ಒಪ್ಪಿಗೆ ನೀಡಿದ ನಂತರವೆ ಜಾರಿಗೆ ಬರುತ್ತಿವೆ. ಅಷ್ಟೇ ಅಲ್ಲ ಸಂಸತ್ತು, ಅಸೆಂಬ್ಲಿ ಚುನಾವಣಾ ಟಿಕೆಟ್ ಹಂಚಿಕೆಯಿಂದ ಹಿಡಿದು ನಗರಪಾಲಿಕೆ-ಗ್ರಾಮ ಪಂಚಾಯತಿವರೆಗಿನ ಅಭ್ಯರ್ಥಿಗಳ ಆಯ್ಕೆಗಳಲ್ಲಿ, ಈ ಸಂತೋಷ ಎಂಬಾತ ತಲೆ ಹಾಕೇ ಹಾಕುತ್ತಾನೆ.

ಒಂದು ರಾಜ್ಯದ ಆಡಳಿತವನ್ನು ಹಾಗೂ ಆಡಳಿತಾರೂಢ ಪಕ್ಷವನ್ನೇ ಹೀಗೆ ಕಂಟ್ರೋಲ್ ಮಾಡುತ್ತಿರುವ ಈ ಸಂತೋಷ್ ಮಹಾಶಯರೇ ಮೊನ್ನಿನ ಬಿಜೆಪಿ ಬಿಕ್ಕಟ್ಟಿಗೆ ಪ್ರಚೋದನೆ ನೀಡಿದ್ದ ಸಂಗತಿ ಈ ಬೆಳಕಿಗೆ ಬರುತ್ತಿದೆ. ಯಾವ ಯಡ್ಡಿ ತನಗೆ ಕಷ್ಟ ಬಂದಾಗೆಲ್ಲಾ ಪರಿಹಾರ ಹುಡುಕಿ ಸಂತೋಷ್ ಬಳಿ ಧಾವಿಸುತ್ತಿದ್ದರೋ ಅದೇ ಸಂತೋಷ್ ಯಡ್ಡಿ ತಲೆ ಹಾರಿಸಲು ರೆಡ್ಡಿ ಜೊತೆ ಕೈ ಜೋಡಿಸಿದ ಬಗ್ಗೆ ಈಗ ಸಂಘ ಪರಿವಾರಿಗಳೇ ಮಾತಾಡುತ್ತಿದ್ದಾರೆ.

ಸಂಘ ನಿಮ್ಮ ಜೊತೆಗಿದೆ ಅಂದಿದ್ದ

ಸುಮಾರು ನಲವತ್ತು ವರ್ಷದ ಸಂತೋಷ್ ಆರೆಸೆಸ್ಸಿನ ನಿಷ್ಠಾವಂತ ಕಾರ್ಯಕರ್ತನಾದರೂ ಬಹಳ ಮಹತ್ವಾಕಾಂಕ್ಷಿ ರಾಜಕಾರಣಿ 'ನೋಡ್ತಾ ಇರಿ, ಮುಂದೆ ಒಂದಲ್ಲಾ ಒಂದು ದಿನ ನಾನು ಕರ್ನಾಟಕದ ಮುಖ್ಯಮಂತ್ರಿ ಆಗ್ತೀನಿ' ಅನ್ನುವುದು ಇವನ ಚಾಳಿ. ಏನಾಯಿತೆಂದರೆ, ಕಳೆದ ತಿಂಗಳು ಅಂದರೆ ಭಿನ್ನಮತ ಸ್ಫೋಟಗೊಳ್ಳುವ ಮೊದಲು ಗದಗ, ಬಳ್ಳಾರಿಯ ಹಿರಿಯ ಅಧಿಕಾರಿಗಳ ವರ್ಗಾ

ಕರ್ನಾಟಕದಲ್ಲಿ ಯಡ್ಡಿ-ರೆಡ್ಡಿ ಬಿಕ್ಕಟ್ಟು ಬಗೆಹರಿದದ್ದು ಯಾರಿಗೆ ಎಷ್ಟು ಲಾಭ, ಯಾರಿಗೆ ಎಷ್ಟು ನಷ್ಟವನ್ನು ಉಂಟುಮಾಡಿದೆ ಎಂಬುದು ಗೊತ್ತಿಲ್ಲ, ಆದರೆ ಭಾರತದ ಸಂವಿಧಾನಕ್ಕಂತೂ ಅದು ದೊಡ್ಡ ಹೊಡೆತವನ್ನೇ ಕೊಟ್ಟಿದೆ. ಆ ಮೂಲಕ ಬಿಜೆಪಿಗಳು ಈ ದೇಶದ ಸಂವಿಧಾನಕ್ಕೆ, ಪ್ರಜಾತಂತ್ರಕ್ಕೆ ಎಷ್ಟರಮಟ್ಟಿಗೆ ಬದ್ಧರಾಗಿದ್ದಾರೆಂಬುದನ್ನು ದೇಶದ ಜನರೆದುರು ಮತ್ತೊಮ್ಮೆ ಬಿಚ್ಚಿಟ್ಟಿದೆ.

ಯಡ್ಡಿ-ರೆಡ್ಡಿ ಬೀದಿನಾಯಿ ಜಗಳವನ್ನು ಬಗೆಹರಿಸುವುದಕ್ಕಾಗಿ ಎಲ್.ಕೆ.ಅಧ್ವಾಣಿ, ರಾಜನಾಥ್ ಸಿಂಗ್, ಅರುಣ್ ಜೇಟ್ಲಿಯಂಥ ರಾಷ್ಟ್ರೀಯ ಘಟನಾನುಘಟಿ ನಾಯಕರೆಲ್ಲಾ ಹಗಲು ರಾತ್ರಿ ತಿಣುಕಾಡಿದರೂ ಸಮಸ್ಯೆ ಮಾತ್ರ ಮತ್ತಷ್ಟು ಜಟಿಲಗೊಳ್ಳುತ್ತಾ ಹೋಗಿದ್ದು, ಕೊನೆಗೆ ರೆಡ್ಡಿಗಳಿಗೆ ತೀರಾ ಆಪ್ತರಾಗಿರುವ ಸುಷ್ಮಾ ಸ್ವರಾಜ್ ಅಂಗಳದಲ್ಲಿ ಯಡ್ಡಿಯ ಕೈಕಾಲು, ಬಾಲ ಕತ್ತರಿಸುವಂಥ ಹಾಗೂ ರೆಡ್ಡಿಗಳಿಗೆ ರೆಕ್ಕೆಪುಕ್ಕ ಕೊಡುವಂಥ ತೀರ್ಮಾನಗಳನ್ನು ಮಾಡಿ ರಾಜಿ ಸಂಧಾನ ಮಾಡಿದ್ದು ನಮಗೆಲ್ಲಾ ಗೊತ್ತೇ ಇದೆ. ಈ ಸಂಧಾನಸೂತ್ರಗಳಲ್ಲಿ ಅತ್ಯಂತ ಪ್ರಮುಖವಾದದ್ದು ಹಾಗೂ ಪ್ರಜಾತಂತ್ರಕ್ಕೆ ಅಪಾಯಕಾರಿಯಾಗಿದ್ದು ಎಂದರೆ ಸರ್ಕಾರದ ಆಡಳಿತವನ್ನು ನಿಯಂತ್ರಿಸುವುದಕ್ಕಾಗಿ 'ಸಮನ್ವಯ ಸಮಿತಿ' ರಚಿಸಬೇಕೆಂಬ ತೀರ್ಮಾನ ಕೈಗೊಂಡದ್ದು. ಯಾವುದೇ ಪಕ್ಷ ಸಂಘಟನೆ ತನ್ನ ನೀತಿ- ನಿಯಮಗಳನ್ನು ರೂಪಿಸುವುದಕ್ಕಾಗಿ ತನ್ನದೇ ಆದ ಒಂದು ನಾಯಕತ್ವ ಸಮಿತಿಯನ್ನು ರಚಿಸಿಕೊಳ್ಳುತ್ತದೆ ಎನ್ನುವುದಕ್ಕೆ ಯಾರ ತಕರಾರೂ ಇರುವುದಿಲ್ಲ. ಆದರೆ, ಈ ಸಮಿತಿಯು ರಚನೆಯಾಗುತ್ತಿರುವುದು ಬಿಜೆಪಿ ಪಕ್ಷದ ನೀತಿ-ನಿಯಮಗಳನ್ನು ರೂಪಿಸುವುದಕ್ಕಾಗಿ ಅಲ್ಲ, ಬದಲಿಗೆ ಸರ್ಕಾರದ ನೀತಿ ನಿಯಮಗಳನ್ನು ರೂಪಿಸುವುದಕ್ಕಾಗಿ. ಸರ್ಕಾರದ ಆಡಳಿತವನ್ನು ನಿಯಂತ್ರಿಸುವುದಕ್ಕಾಗಿ. ಯಾವ್ಯಾವ ಅಧಿಕಾರಿಗಳನ್ನು ಎಲ್ಲೆಲ್ಲಿಗೆ ವರ್ಗಾವಣೆ ಮಾಡಬೇಕೆಂಬ ಪುಟ್ಟ ವಿಚಾರದಿಂದ ಹಿಡಿದು ಸರ್ಕಾರದ ಬಹುಮುಖ್ಯ ನೀತಿನಿಯಮಗಳನ್ನು ರೂಪಿಸುವ ತನಕ ಎಲ್ಲಾ ವಿಚಾರಗಳನ್ನೂ ಈ ಸಮಿತಿಯೇ ನಿರ್ಧರಿಸಲಿದೆ. ಕ್ಯಾಬಿನೆಟ್‌ನಲ್ಲಿ ಏನೇ ತೀರ್ಮಾನ ತೆಗೆದುಕೊಳ್ಳುವುದಾದರೂ ಅವುಗಳು ಮೊದಲು ಈ ಸಮನ್ವಯ ಸಮಿತಿಯಲ್ಲಿ ಚರ್ಚೆಯಾಗಿ, ಸಮಿತಿಯ ಸದಸ್ಯರೆಲ್ಲರೂ ಒಪ್ಪಿಕೊಂಡ ತೀರ್ಮಾನಗಳನ್ನು ಮಾತ್ರವೇ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಮಂಡಿಸಬೇಕೆಂಬ ನಿರ್ಧಾರವನ್ನೂ ಮಾಡಲಾಗಿದೆ.

ಚುನಾವಣೆಯ ಮೂಲಕ ಜನರಿಂದಲೇ ಆಯ್ಕೆಯಾದ ಪ್ರತಿನಿಧಿಗಳೇ ಜನರನ್ನು ಆಳಬೇಕೆಂಬುದು ಪ್ರಜಾತಂತ್ರ ವ್ಯವಸ್ಥೆಯ ಮೂಲ ತಿರುಳು. ಜನರಿಂದ ಆಯ್ಕೆಯಾದ ಶಾಸಕಾಂಗವೇ ಕಾರ್ಯಾಂಗವನ್ನು ನಿಯಂತ್ರಿಸಬೇಕೆಂಬುದು ಅದರ ಸಾರ. ರಾಜ್ಯದಲ್ಲೂ ಆಡಳಿತ ನಡೆಸುವುದಕ್ಕಾಗಿಯೇ ಕರ್ನಾಟಕದ ಜನ ಚುನಾವಣೆಯಲ್ಲಿ ಎಮ್ಮೆಲ್ಲೆಗಳನ್ನು ಆರಿಸಿ ಕಳಿಸಿದ್ದಾರೆ. ಜನರಿಂದಲೇ ಆಯ್ಕೆಯಾದ ಪಕ್ಷ ಸಂವಿಧಾನಬದ್ಧವಾಗಿ ಸರ್ಕಾರ, ಕ್ಯಾಬಿನೆಟ್‌ಗಳನ್ನು ರಚಿಸಿದೆ. ಅದೇ ನೀತಿನಿಯಮಗಳನ್ನು ರೂಪಿಸಿ ಆಡಳಿತ ನಡೆಸಬೇಕು. ಅಂತಹದ್ದರಲ್ಲಿ ಪ್ರತ್ಯೇಕ ಸಮನ್ವಯ ಸಮಿತಿ ರಚಿಸುವ ಅವಶ್ಯಕತೆಯಾದರೂ ಏನಿದೆ? ಸಮನ್ವಯ ಸಮಿತಿಯೇ ಆಡಳಿತ ನಿರ್ವಹಣೆ ಮಾಡುತ್ತದೆ ಎನ್ನುವುದಾದರೆ ಸರ್ಕಾರ, ಕ್ಯಾಬಿನೆಟ್‌ಗಳು ಏನು ಕತ್ತೆ ಕಾಯುವ ಕೆಲಸ ಮಾಡುತ್ತವೆಯೆ? ಎಂಬ ಪ್ರಶ್ನೆಗಳು ಸಹಜವಾಗಿ ಏಳುತ್ತವೆ.

ಹೋಗಲಿ ಈ ಸಮಿತಿಯಲ್ಲಿರುವ ವ್ಯಕ್ತಿಗಳಾದರೂ ಯಾರು? ಬಿಜೆಪಿಯ ರಾಷ್ಟ್ರೀಯ ನಾಯಕಿ ಸುಷ್ಮಾ ಸ್ವರಾಜ್, ಮೊನ್ನೆಯ ತನಕ ಯಡ್ಡಿಯ ಚಿಡ್ಡಿ ಹರಿಯುವಂತೆ ಬಿಕ್ಕಟ್ಟು ಸೃಷ್ಟಿಸಿದ್ದ ಬಂಡಾಯ ನಾಯಕ ಕರುಣಾಕರ ರೆಡ್ಡಿ, ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ಸಂಸದರಾದ ಅನಂತಕುಮಾರ್ ಮತ್ತು ಸದಾನಂದ ಗೌಡ ಹಾಗೂ ಆರೆಸ್ಸೆಸ್ ನಾಯಕರಾದ ಸಂತೋಷ್ ಮತ್ತು ಸತೀಶ್ ಸಮಿತಿಯಲ್ಲಿರುತ್ತಾರೆಂದು ಈಗಾಗಲೇ ಘೋಷಣೆ ಮಾಡಲಾಗಿದೆ. ಇವರಲ್ಲಿ ಯಡಿಯೂರಪ್ಪ ಮತ್ತು ಕರುಣಾಕರ ರೆಡ್ಡಿಯನ್ನು ಹೊರತುಪಡಿಸಿದರೆ ಉಳಿದವರ್ಯಾರನ್ನೂ ರಾಜ್ಯದ ಜನ ಕರ್ನಾಟಕದ ಆಡಳಿತ ನಡೆಸುವುದಕ್ಕೆ ಆಯ್ಕೆ ಮಾಡಿ ಕಳಿಸಿಲ್ಲ. ಇದು ಜನರಿಂದಲೇ ಆಯ್ಕೆಯಾದ ಪ್ರತಿನಿಧಿಗಳೇ ಆಳ್ವಿಕೆ ನಡೆಸಬೇಕೆಂಬ ನಮ್ಮ ಸಂವಿಧಾನದ ಮೂಲ ಪ್ರಜಾತಾಂತ್ರಿಕ ಆಶಯಕ್ಕೆ ಕೊಡಲಿ ಪೆಟ್ಟು ನೀಡುತ್ತದೆ. ಹಾಗಾಗಿ ಅದು ಸಂವಿಧಾನ ವಿರೋಧಿಯಾಗಿದೆ.


ರೆಡ್ಡಿಗಳಂತೂ ಸಮನ್ವಯ ಸಮಿತಿಯ ನೇತೃತ್ವವನ್ನು ಸುಷ್ಮಾ ಸ್ವರಾಜ್ ಅವರೇ ವಹಿಸಿಕೊಳ್ಳಬೇಕೆಂದು ಪಟ್ಟು ಹಿಡಿದಿದ್ದಾರೆ. ಸುಷ್ಮಾ ಸ್ವರಾಜ್ ರೆಡ್ಡಿಗಳ ಹಿತಾಸಕ್ತಿಗಳನ್ನು ಕಟಿಬದ್ಧವಾಗಿ ಕಾಯುತ್ತಾರಾದ್ದರಿಂದ ಯಡ್ಡಿಗೆ ಮೂಗುದಾಣ ಹಾಕಿ ತಮ್ಮ ಅಧಿಕಾರ ನಡೆಯುವಂತೆ ನೋಡಿಕೊಳ್ಳುತ್ತಾರೆಂಬುದು ರೆಡ್ಡಿಗಳ ಲೆಕ್ಕಾಚಾರ. ಅದು ನಿಜವೂ ಹೌದು.

ಆದರೆ, ಸುಷ್ಮಾ ಸ್ವರಾಜ್‌ಗೂ ಹಾಗೂ ಕರ್ನಾಟಕದ ಆಡಳಿತಕ್ಕೂ ಏನು ಸಂಬಂಧ? ರಾಜ್ಯದ ಜನ ಆಕೆಯನ್ನು ತಮ್ಮ ನಾಯಕಿ ಎಂದು ಎಲ್ಲಿ ಒಪ್ಪಿಕೊಂಡಿದ್ದಾರೆ? ಆಕೆಯೇ ನಮ್ಮ ಆಡಳಿತದ ಸೂತ್ರ ಹಿಡಿಯಬೇಕೆಂದು ಯಾವಾಗ ಆರಿಸಿ ಕಳಿಸಿದ್ದಾರೆ? ಆಕೆ ಬಿಜೆಪಿಗೆ ನಾಯಕಿಯೇ ಆಗಿರಬಹುದು. ಆದರೆ ಕರ್ನಾಟಕದ ಜನತೆಗಲ್ಲ. ಬಿಜೆಪಿ ಎಮ್ಮೆಲ್ಲೆಗಳು, ಮಂತ್ರಿಗಳು ಬೇಕಾದರೆ ಖಾಸಗಿಯಾಗಿ ಆಕೆಯ ಮಾರ್ಗದರ್ಶನ ಪಡೆದುಕೊಳ್ಳಲಿ. ಅದನ್ನು ಬಿಟ್ಟು ನೇರವಾಗಿ ಆಡಳಿತದ ಚುಕ್ಕಾಣಿಯನ್ನೇ ಆಕೆಯ ಕೈಗೆ ಕೊಡುತ್ತಾರೆಂದರೆ ಅದು ತಮ್ಮನ್ನು ಗೆಲ್ಲಿಸಿ ಕಳಿಸಿದ ರಾಜ್ಯದ ಜನತೆಗೆ ಮಾಡುವ ದ್ರೋಹವಲ್ಲದೇ ಮತ್ತೇನು?

ಎಲ್ಲಕ್ಕಿಂತ ಅಪಾಯಕಾರಿ ಎಂದರೆ ಜನ ಆಯ್ಕೆ ಮಾಡದಿರುವ ಆರೆಸ್ಸೆಸ್‌ನ ನಾಯಕರಾದ ಸಂತೋಷ್ ಮತ್ತು ಸತೀಶ್ ಕೂಡ ಸಮಿತಿಯಲ್ಲಿರುವುದು. ಅವರನ್ನು ಸಮನ್ವಯ ಸಮಿತಿಯೊಳಗೆ ತೂರಿಸುವುದಕ್ಕೆ ಆರೆಸ್ಸೆಸ್‌ಗೆ ತನ್ನದೇ ಆದ ಲೆಕ್ಕಾಚಾರಗಳಿವೆ. ದೇಶಭಕ್ತಿ, ದೇಶಪ್ರೇಮ, ಭಾರತೀಯ ಸಂಸ್ಕೃತಿಗಳ ಹೆಸರಿನಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಕೋಮುದ್ವೇಷವನ್ನು ಬಿತ್ತುವುದು, ಕೋಮುಗಲಭೆಗಳನ್ನು ಸೃಷ್ಟಿಸಿ ರಕ್ತಪಾತ ಮಾಡುವುದು,








'ಸಮನ್ವಯ ಸಮಿತಿ' ಜನದ್ರೋಹಿ ಹಾಗೂ ಸಂವಿಧಾನ ವಿರೋಧಿ!

ಹೀಗೆ ಅಲ್ಪಸಂಖ್ಯಾತರ ಸಮಾಧಿಯ ಮೇಲೆ ಹಿಂದೂ ದೇಶವನ್ನು ಸೃಷ್ಟಿಸುವುದು ಅದರ ಅಜೆಂಡಾ. ಮಾತ್ರವಲ್ಲ, ಭಾರತೀಯ ಸಂಸ್ಕೃತಿ ಭವ್ಯ ದಿವ್ಯ ಎನ್ನುತ್ತಲೇ ಕೆಳ ಜಾತಿಗಳ ಮೇಲೆ ಬ್ರಾಹ್ಮಣಶಾಹಿಯ ಆಧಿಪತ್ಯವನ್ನೂ ಹಾಗೂ ಮಹಿಳೆಯರ ಮೇಲೆ ಪುರುಷಾಧಿಪತ್ಯವನ್ನು ಹೇರಿ ಪ್ರತಿಗಾಮಿ ಸನಾತನ ವೈದಿಕ ಸಂಸ್ಕೃತಿಯನ್ನು ಹೇರುವುದು ಅದರ ಧ್ಯೇಯ. ಈ ಕಾರ್ಯಸಾಧನೆಗಾಗಿ ಅದು ಅನುಸರಿಸುತ್ತಿರುವ ಹಲವು ತಂತ್ರಗಳಲ್ಲಿ ಅಸ್ತಿತ್ವದಲ್ಲಿರುವ ಆಡಳಿತ ಯಂತ್ರಾಂಗವನ್ನೂ ಬಳಸಿಕೊಳ್ಳುತ್ತದೆ. ಅದಕ್ಕಾಗಿ ತನ್ನ ಸಿದ್ಧಾಂತ ಮತ್ತು ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಆರೆಸ್ಸೆಸ್‌ನಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತಿರುವ ನಾಯಕರನ್ನು ಬಿಜೆಪಿಯಂಥ ಪಕ್ಷದೊಳಗೆ ಅಧಿಕೃತವಾಗಿ ಸೇರಿಸಿ ಅವರಿಗೆ ನಾಯಕತ್ವ ಸ್ಥಾನ ಸಿಗುವಂತೆ ನೋಡಿಕೊಳ್ಳುತ್ತದೆ. ಈಗ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ದಶಕಗಳಿಂದ ಆರೆಸ್ಸೆಸ್‌ನಲ್ಲಿ ಪಳಗಿ ಅದರ ನಂಜುಕಾರಕ ಸಿದ್ಧಾಂತವನ್ನು ಮೈಗೂಡಿಸಿಕೊಂಡಿರುವ ಸಂತೋಷ್ ಮತ್ತು ಸತೀಶ್‌ರನ್ನು ಸಮನ್ವಯ ಸಮಿತಿಯಲ್ಲಿ ಸೇರಿಸುವ ಮೂಲಕ ನೇರವಾಗಿ ಸರ್ಕಾರದ ಆಡಳಿತವನ್ನೇ ನಿಯಂತ್ರಿಸುವುದಕ್ಕೆ ಹೊರಟಿದೆ. ಇವರನ್ನೂ ಕರ್ನಾಟಕದ ಜನರೇನು 'ನಮ್ಮನ್ನು ಆಳಿ' ಎಂದು ಆಯ್ಕೆ ಮಾಡಿ ಕಳಿಸಿಲ್ಲ, ಆದರೂ ಜನರ ಮೇಲೆ ಅವರ ಆಡಳಿತವನ್ನು ಬಲವಂತವಾಗಿ ಹೇರಲು ಹೊರಟಿದೆ ಬಿಜೆಪಿ. ಇದು ತಮ್ಮನ್ನು ಆರಿಸಿ ಕಳಿಸುರುವ ಜನರಿಗೆ ಹಾಗೂ ಜಾತ್ಯತೀತತೆ, ಧರ್ಮನಿರಪೇಕ್ಷತೆ ಮತ್ತು ಪ್ರಜಾತಂತ್ರಗಳ ಬುನಾದಿಯ ಮೇಲೆ ನಿರ್ಮಾಣಗೊಂಡ ಭಾರತದ ಸಂವಿಧಾನಕ್ಕೆ, ಬಿಜೆಪಿ ಮಾಡುತ್ತಿರುವ ದ್ರೋಹವಲ್ಲದೇ ಮತ್ತೇನಲ್ಲ.

ಇನ್ನು ಅನಂತಕುಮಾರ್ ಮತ್ತು ಸದಾನಂದ ಗೌಡರನ್ನು ರಾಜ್ಯದ ಎರಡು ಸಂಸದೀಯ ಕ್ಷೇತ್ರದ ಮತದಾರರೇ ಆಯ್ಕೆ ಮಾಡಿರುವುದು ನಿಜವಾದರೂ ಅವರನ್ನು ಆರಿಸಿ ಕಳಿಸಿರುವುದು ಲೋಕಸಭೆಗೆ ಹೊರತು ರಾಜ್ಯದ ಆಡಳಿತ ನಡೆಸುವುದಕ್ಕಲ್ಲ. ಅವರು ವಿಧಾನಸಭೆಗೆ ಬಂದರೆ ಸಾಮಾನ್ಯ ಜನರಂತೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತುಕೊಳ್ಳಬೇಕೇ ಹೊರತು ತಾವು ಎಂಪಿಗಳೆಂದು ಎಮ್ಮೆಲ್ಲೆಗಳ ಜಾಗದಲ್ಲಿ ಹೋಗಿ ಕುಳಿತುಕೊಳ್ಳುವಂತಿಲ್ಲ. ಈಗ ಅವರೂ ಸಮನ್ವಯ ಸಮಿತಿಯಲ್ಲಿ ನುಸುಳುವುದರೊಂದಿಗೆ ರಾಜ್ಯದ ಜನತೆಯ ಮೇಲೆ ಬಲವಂತವಾಗಿ ಆಡಳಿತ ನಡೆಸಲು ಹೊರಟಿದ್ದಾರೆ.

ಕೇಂದ್ರ ಸರ್ಕಾರದ ಪ್ರಮುಖ ನೀತಿ-ನಿಯಮಗಳನ್ನು ನಿರ್ದೇಶಿಸುವುದಕ್ಕೆ ಯುಪಿಎ ಮೈತ್ರಿಕೂಟದ ಸಮಿತಿಯಿದೆಯಲ್ಲ ಎಂದು ಯಾರಾದರೂ ಪ್ರಶ್ನಿಸಬಹುದು. ಆದರೆ ಯುಪಿಎ ಸಮಿತಿಗೂ, ಕರ್ನಾಟಕದಲ್ಲಿ ರಚಿಸಲು ಹೊರಟಿರುವ ಸಮನ್ವಯ ಸಮಿತಿಗೂ ಆಶಯ ಮತ್ತು ಸ್ವರೂಪಗಳೆರಡರಲ್ಲೂ ಮೂಲಭೂತವಾಗಿಯೇ ಅಗಾಧ ವ್ಯತ್ಯಾಸಗಳಿವೆ. ಮೊದಲನೆಯದಾಗಿ ಯುಪಿಎ ಎಂಬುದು ಹಲವು ಪಕ್ಷಗಳ ಒಂದು ಮೈತ್ರಿಕೂಟವೇ ಹೊರತು ಅದೊಂದು ಪಕ್ಷವಲ್ಲ. ಹಲವು ಪಕ್ಷಗಳು ಸೇರಿ ಮೈತ್ರಿಕೂಟ ರಚಿಸಿಕೊಂಡಾಗ ಭಿನ್ನಾಭಿಪ್ರಾಯಗಳು ಏಳುವುದು ಸಹಜ. ಅವುಗಳನ್ನು ಮೈತ್ರಿಕೂಟದ ಸಮಿತಿಯಲ್ಲೇ ಬಗೆಹರಿಸಿಕೊಂಡರೆ ಸರ್ಕಾರವೂ ಸುಗಮವಾಗಿ ಸಾಗುತ್ತದೆ. ಆದರೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಆಡಳಿತ ನಡೆಸುತ್ತಿದೆಯೇ ಹೊರತು ಹಲವು ಪಕ್ಷಗಳನ್ನೊಳಗೊಂಡ ಮೈತ್ರಿಕೂಟ ಸರ್ಕಾರವಲ್ಲ. ಬಿಜೆಪಿಯೊಳಗೇ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಪಕ್ಷದ ಸಮಿತಿಗಳಲ್ಲಿ ಚರ್ಚಿಸಿ ಬಗೆಹರಿಸಿಕೊಳ್ಳಬಹುದು. ಎರಡನೆಯದಾಗಿ, ಯುಪಿಎ ಸಮಿತಿಯಲ್ಲಿರುವವರೆಲ್ಲರೂ ನೇರವಾಗಿ ಜನರಿಂದಲೇ ಆಯ್ಕೆಯಾಗಿರುವ ಜನಪ್ರತಿನಿಧಿಗಳಾಗಿದ್ದಾರೆ. ಅವರು ಯಾವುದೇ ತೀರ್ಮಾನ ತೆಗೆದುಕೊಳ್ಳುವಾಗಲೂ ತಮ್ಮನ್ನು ಆರಿಸಿ ಕಳಿಸಿರುವ ಜನರಿಗೆ ಬದ್ಧವಾಗಿರಬೇಕೆಂಬ ಕನಿಷ್ಠ ಎಚ್ಚರಿಕೆಯಾದರೂ ಇರುತ್ತದೆ. ಜೊತೆಗೆ, ತಾವೇ ಆರಿಸಿ ಕಳಿಸಿರುವ ಜನಪ್ರತಿನಿಧಿಗಳೇ ತಮ್ಮ ಭವಿಷ್ಯವನ್ನು ನಿರ್ಧರಿಸುತ್ತಿದ್ದಾರೆ ಎಂಬ ಕನಿಷ್ಠ ಸಮಾಧಾನವಾದರೂ ಜನರಿಗೆ ಇರುತ್ತದೆ. ಆದರೆ, ಕರ್ನಾಟಕದ ಸಮನ್ವಯ ಸಮಿತಿಯಲ್ಲಿ ಇಬ್ಬರನ್ನು ಹೊರತುಪಡಿಸಿದರೆ ಉಳಿದವರ್ಯಾರನ್ನೂ ರಾಜ್ಯದ ಆಡಳಿತ ನಡೆಸುವುದಕ್ಕಾಗಿ ಜನ ಆಯ್ಕೆ ಮಾಡಿ ಕಳಿಸಿಲ್ಲ.

ಹೀಗಾಗಿ, ರಾಜ್ಯದ ಆಡಳಿತ ನಿರ್ವಹಣೆ ಮಾಡುವುದಕ್ಕೆ ಬಿಜೆಪಿ ರಚಿಸುತ್ತಿರುವ ಸಮನ್ವಯ ಸಮಿತಿ ಜನದ್ರೋಹಿಯೂ ಹಾಗೂ ಸಂವಿಧಾನ ವಿರೋಧಿಯೂ ಆಗಿದ್ದು ಅದು ಬಿಜೆಪಿಗೆ ಪ್ರಜಾತಂತ್ರದ ಬಗ್ಗೆ, ಈ ದೇಶದ ಸಂವಿಧಾನದ ಬಗ್ಗೆ ಹಾಗೂ ತಮ್ಮನ್ನು ಆಯ್ಕೆ ಮಾಡಿರುವ ಜನತೆಯ ಬಗ್ಗೆ ಎಷ್ಟರಮಟ್ಟಿಗೆ ಗೌರವವಿದೆ ಎಂಬುದನ್ನು ತೋರಿಸಿಕೊಡುತ್ತದೆ. ಹಾಗಾಗಿ, ನಾಡಿನ ಜನ ಅದರ ವಿರುದ್ಧ ದನಿಯೆತ್ತಬೇಕಾಗಿದೆ.

● ಕುಮಾರ್ ಬುರಡಿಕಟ್ಟಿ

ನಡೆಯುತ್ತಲ್ಲ. ಅದು ಯಡ್ಡಿ-ರೆಡ್ಡಿಗಳ
ಮುಸುಕಿನ ಗುದ್ದಾಟ ಮಾತ್ರವಾಗಿತ್ತು,
ಗಿ ತೇಲಬೇಕೆಂದರೆ ಸರ್ಕಾರವನ್ನೇ
ಂಥ ದೊಡ್ಡ ಸಂಗತಿ ಆದಾಗಿರಲಿಲ್ಲ. ಆದರೆ
ಗ ಸಂತೋಷ್ ಜಗಳದ ಮಧ್ಯೆ ಎಂಟ್ರಿ
ನೋ ಭಿನ್ನಮತ ಬಗಡಾಯಿಸಿಬಿಟ್ಟಿತು. ಏರೀ
ದ್ದು ಎಣಿಸುತ್ತಾ, ಶಾಸಕರು ತಲೆ
ವಂತೆ ನೋಡಿಕೊಂಡಿದ್ದ ರೆಡ್ಡಿಗಳಿಗೆ RSS
, ದೂರು ಕೊಂಡೊಯ್ಯುವಂತೆ ಮಾಡಿದ್ದೇ
ತೋಷ್. ಆದರಂತೆ ಮೈ.ಚ. ಜಯದೇವ್,
ಬಳಿಗೆ ಹೋದ ರೆಡ್ಡಿಗಳಿಗೆ ಬಿಜೆಪಿಯ
ಯಡ್ಡಿಯ ಪ್ರಾಣಪಕ್ಷಿ ಎಲ್ಲಿದೆ ಎಂದು
ಗಿ ಅರ್ಥವಾಗಿ ಬಿಟ್ಟಿತು. ಅದುವರೆಗೂ
ರೆಡ್ಡಿಗಳಿಗೆ ಸಂಘ ಅಂದರೇನು, RSS
ನ ಕಂಟ್ರೋಲ್ ಎಷ್ಟಿರುತ್ತದೆ ಎಂಬುದರ
ಗೊತ್ತಿರಲಿಲ್ಲ. ಹೀಗೆ ಸಂಘದವರ ಹತ್ತಿರ
ವಿರುದ್ಧ ರೆಡ್ಡಿಗಳ ದೂರು ತಲುಪುವಂತೆ
ಕೊಂಡ ಸಂತೋಷ್ ಬಂಡಾಯ
ದ್ದಾಗ ತಾನೇ ಫೈರ್ ಬ್ರಿಗೇಡ್ ರೀತಿ
ಬಿಟ್ಟ. ಅಂದರೆ ಯಡ್ಡಿಯಾಗಲಿ,
ಾಗಲಿ ತನ್ನ ಕಂಟ್ರೋಲಿನಲ್ಲೇ ಇರಬೇಕೆಂಬ

ಮಹಾಕೆ ಆತನದ್ದು. ಸಂತೋಷನ ಈ ಪಿತೂರಿಯ ಹಿಂದೆ ಜಾತಿಯ ವಾಸನೆಯೂ ಇದೆ. ರಾಜ್ಯ RSS ಲೀಡರ್ ಜಯದೇವ್ ಹಾಗೂ ಯಡ್ಡಿ ಇಬ್ಬರೂ ಲಿಂಗಾಯತರು ಹಾಗೂ ಪರಸ್ಪರ ವಿಶ್ವಾಸದಿಂದಿದ್ದಾರೆ. ಹಾಗೆ ನೋಡಿದರೆ ಯಡ್ಡಿ ಸಿಎಂ ಆದ ಮೇಲೆ ಜಯದೇವ್‌ರಿಗೆ ಕೊಟ್ಟಷ್ಟು ಆದ್ಯತೆಯನ್ನು ಸಂತೋಷ್‌ಗೆ ಕೊಡುತ್ತಿರಲಿಲ್ಲ.



ನೆಪಮಾತ್ರಕ್ಕೆ ಅಭಿಪ್ರಾಯ ಕೇಳಿದಂತೆ ಮಾಡಿ ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದರು. ಯಡ್ಡಿಯ ಈ ಉದ್ಧಟತನಕ್ಕೆ ಲಗಾಮು ಹಾಕಲು ಸರಿಯಾದ ಅವಕಾಶಕ್ಕಾಗಿ ಕಾದಿದ್ದ ಸಂತೋಷ್‌ಗೆ ರೆಡ್ಡಿಗಳ ಮುನಿಸು ವರದಾನದಂತೆ ಒದಗಿ ಬಂತು. ಈತ ರೆಡ್ಡಿ ಕ್ಯಾಂಪಿಗೆ ಒಂದು ಮೆಸೇಜು ಕಳಿಸಿ "ಮುಂದುವರೆಯಿರಿ, ಸಂಘ ನಿಮ್ಮೊಂದಿಗಿದೆ. ಶೆಟ್ಟರ್ ಸಿಎಂ ಆಗಲಿ, ಶೋಭಾ ರಾಜೀನಾಮೆ ಕೊಡಲೇ ಬೇಕು. ಹಾಗೆ ಮಾಡಿ" ಎಂದು ಫಿಟ್ಟಿಂಗ್ ಇಟ್ಟ. ಈ ಜಗಳದ ನಡುವೆ ಶೆಟ್ಟರ್ ಮನೆಗೂ ಅನೇಕ ಸಾರಿ ಹೋಗಿ ಬಂದ. ರೆಡ್ಡಿಗಳೊಂದಿಗೆ ರಹಸ್ಯ ಸಮಾಲೋಚನೆ ನಡೆಸಿದ. ಆದರೆ ಒಂದೇ ಒಂದು ಸಾರಿಯೂ ಭಿನ್ನಮತೀಯರಿಗೆ ವಾರ್ನಿಂಗ್ ಕೊಡಲಿಲ್ಲ. ಯಡ್ಡಿ ಪರವಾದ ಹೇಳಿಕೆಗಳನ್ನು ಕೊಡಲಿಲ್ಲ, ಅದರ ಬದಲಾಗಿ "ಶೆಟ್ಟರ್‌ಗೆ ಸಂಘ (RSS) ಗ್ರೀನ್ ಸಿಗ್ನಲ್ ಕೊಟ್ಟಿದೆ, ಕರುಣಾಕರ ರೆಡ್ಡಿ ಜೊತೆ ಸಂಘ ಮಾತಾಡಿದೆ" ಎಂದೆಲ್ಲಾ ಹೇಳಬೇಕಾದವರಿಗೆ ಹೇಳುತ್ತಾ ಬಂದ. ಬಿಜೆಪಿ ಬಂಡುಕೋರರಿಗೆ ಹಾಗೂ ಯಡ್ಡಿ ವಿರೋಧಿಗಳಿಗೆ ಸಂತೋಷ್ ನೀಡುತ್ತಿದ್ದ ಪ್ರಚೋದನೆ ಟಾನಿಕ್‌ನಂತೆ ಕೆಲಸ ಮಾಡಿಬಿಟ್ಟಿತು, ಆದರೆ ಪರಿಸ್ಥಿತಿ ಬದಲಾದದ್ದೇ ಯಡ್ಡಿಯ ಲಿಂಗಾಯತ ದೋಸ್ತ್ ಜಯದೇವ್ ಎಂಟ್ರಿಯಾದ ಮೇಲೆ. ಈ ಜಯದೇವ್ ಸಂತೋಷನನ್ನು ಬೆಂಗಳೂರಲ್ಲೇ ಬಿಟ್ಟು ಹಾಗೇ ನೇರವಾಗಿ RSS ನ ರಾಷ್ಟ್ರನಾಯಕ ಮೋಹನ್ ಭಾಗವತನ ಹತ್ತಿರ ಹೋಗಿ ಯಡ್ಡಿ ಪರ ಗಟ್ಟಿಯಾಗಿ ಮಾತಾಡಿಬಂದರು.

ಯಡ್ಡಿ ತಲೆ ಉರುಳುವುದು ತಪ್ಪಿ ಹೋಯಿತು.

ಈ ಮಧ್ಯೆ ಇನ್ನೊಂದು ಮಜಾ ಸಂಗತಿ ಏನೆಂದರೆ ಅನಂತ್‌ಕುಮಾರೇ ಈ ಬಿಕ್ಕಟ್ಟಿಗೆ ಕಾರಣ ಎನ್ನುವ ಪ್ರಚಾರವೂ ಹುಟ್ಟಿಕೊಂಡಿತ್ತಲ್ಲ. ಅದರಲ್ಲೂ ಸಂತೋಷ್ ಕೈವಾಡವಿದ್ದ ಬಗ್ಗೆ ಬಿಜೆಪಿಗಳೇ ಅನುಮಾನ ಪಡುತ್ತಿದ್ದಾರೆ. ಅನಂತುಗೂ ಈ ಸಂತೋಷ್‌ಗೂ ಹಾವು-ಮುಂಗುಸಿ ಸಂಬಂಧ.

ಯಡ್ಡಿಯನ್ನು ಕೆಡವಲು ರೆಡ್ಡಿಗಳ ಜೊತೆ ಸಂತೋಷ್ ಇದ್ದ ಎಂಬ ವಿಚಾರ ಗೊತ್ತಾದ ಮೇಲೆ ಲಿಂಗಾಯತ RSS ಲೀಡರ್ ಮೈ.ಚ. ಜಯದೇವ್ ವಿಪರೀತ ನೊಂದಿದ್ದಾರಂತೆ.



...ಕರ್ ಸ್ಥಾನಕ್ಕೆ ಮಸಿ ಬಳಿದ ಶೆಟ್ಟರ್

ಮುಖ್ಯಮಂತ್ರಿಯಾಗಲು ಮೂರನೇ ದರ್ಜೆಯ
ದಣಿಯಂತೆ ವರ್ತಿಸಿದ ಜಗದೀಶ್ ಶೆಟ್ಟರ್ ಸ್ಪೀಕರ್
ತಾವೆಷ್ಟು ನಾಲಾಯಕ್ ಎಂಬುದನ್ನು ಸಾಬೀತುಪಡಿಸಿ

ಕರ್ ಸ್ಥಾನಕ್ಕೆ ಅದರದೇ ಆದ ಘನತೆಯಿದೆ, ಗಾಂಭೀರ್ಯ
ಕರ್ ಆದವರು ಪಕ್ಷಾತೀತರಾಗಿ ವರ್ತಿಸುತ್ತಾ, ಶಾಸಕರ
ಾವಳಿಗಳನ್ನು ತಿದ್ದುತ್ತಾ ಒಟ್ಟು ಸದನವನ್ನು ಸರಿಯಾದ
ಲ್ಲಿ ನಿರ್ದೇಶಿಸುತ್ತ ಜನರಲ್ಲಿ ಸದನದ ಬಗ್ಗೆ ವಿಶ್ವಾಸ
ವಂತೆ ಮಾಡಬೇಕು. ಈ ನಿಟ್ಟಿನಲ್ಲಿ ನೋಡುವುದಾದರೆ
ಂಕಟಪ್ಪ, ಎಸ್.ಆರ್.ಕಂಠಿ, ಕೆ.ಎಸ್. ನಾಗರತ್ನಮ್ಮ,
ರಂಗನಾಥ್, ಬಿ.ಜಿ.ಬಣಕಾರ, ರಮೇಶ್‌ಕುಮಾರ್,
ಗೌಡರಂತಹವರು ಸ್ಪೀಕರ್ ಸ್ಥಾನಕ್ಕೆ ಗಾಂಭೀರ್ಯತೆ
ಟ್ಟರು.

ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ಸ್ಪೀಕರ್ ಆಗಿದ್ದ
ಕೃಷ್ಣ ಚಿಲ್ಲರೆ ರಾಜಕಾರಣ ಮಾಡುತ್ತ ಭಿನ್ನಮತ ನಡೆಸುತ್ತ
ಸ್ತಿ ವೃದ್ಧಿ ಮಾಡಿಕೊಳ್ಳುತ್ತ ಸ್ಪೀಕರ್ ಸ್ಥಾನದ ಗೌರವವನ್ನು
ಲು ಮಾಡಿದ್ದರು. ಈಗ ಕೃಷ್ಣರಿಗಿಂತ ಒಂದು ಹೆಜ್ಜೆ
ಹೋಗಿರುವ ಶೆಟ್ಟರ್ ಬಹಿರಂಗವಾಗಿ ಕ್ಷುಲ್ಲಕ
ಮಾಡುತ್ತ ತಮ್ಮ ಅಯೋಗ್ಯತೆಯನ್ನು ಜಾಹೀರು
ಂಡಿದ್ದಾರೆ.

ದಲ್ಲಿ ನೆರೆ ಸಂತ್ರಸ್ತರು ಬದುಕು ಕಟ್ಟಿಕೊಳ್ಳಲು
ುತ್ತಿರುವಾಗ ರೆಸಾರ್ಟ್‌ಗಳ ಪಾಲಾಗಿದ್ದ ಶಾಸಕರನ್ನು
ದು ಬುದ್ಧಿ ಹೇಳಿ ನೆರೆ ಪರಿಹಾರಕ್ಕೆ ತೊಡಗಿಸಬೇಕಾಗಿದ್ದ
ತಾವೇ ಅವಕಾಶವಾದಿಯ ತರಹ ವರ್ತಿಸಿಬಿಟ್ಟರು.

ಬುದ್ಧಿ ತೋರಿಸಿ ಸ್ಪೀಕರ್ ಸ್ಥಾನಕ್ಕೆ ಮಸಿ ಬಳಿದುಬಿಟ್ಟರು.

ತನ್ನ ಪರ ನಿಂತ ಶಾಸಕರಾದ ಹುಬ್ಬಳ್ಳಿಯ ವೀರಭದ್ರಪ್ಪ ಹಾಲಹರವಿ, ಧಾರವಾಡದ ಸೀಮಾ ಮಸೂತಿ, ಕುಂದಗೋಳದ ಚಿಕ್ಕನಗೌಡ್ರ, ನವಲಗುಂದದ ಶಂಕರ್ ಪಾಟೀಲ್ ಮುನೇನಕೊಪ್ಪ, ರೋಣದ ಕಳಕಪ್ಪ ಬಂಡಿಗಳನ್ನು ಒಯ್ದು ರೆಡ್ಡಿಗಳ ಪಾದಕ್ಕೆ ಹಾಕಿದ 'ಶ್ರೇಯಸ್ಸು' ಕೂಡ ಸ್ಪೀಕರ್ ಸಾಹೇಬರಿಗೆ ಸಲ್ಲಬೇಕು. ತನ್ನ ಪರವಿರುವ ಶಾಸಕರನ್ನು ಹೈದರಾಬಾದ್ ರೆಸಾರ್ಟಿಗೆ ಕಳಿಸಿ, 'ಕುದುರೆ ವ್ಯಾಪಾರ'ಕ್ಕೆ ಸ್ಪೀಕರ್ ಒಬ್ಬ ಸಹಕಾರ ನೀಡುವುದಿದೆಯಲ್ಲ, ಅದು ಪ್ರಜಾಸತ್ತೆಗೆ ಬಗೆದ ಮಹಾನ್‌ದ್ರೋಹವೇ.

ಇಲ್ಲಿ ಶೆಟ್ಟರ್‌ಗೆ ಸಿ.ಎಂ. ಆಗುವ ಎಲ್ಲ ಸ್ವಾತಂತ್ರ್ಯವಿದೆ ನಿಜ. ಆದರೆ ಅವರು ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ತಮ್ಮ ಲಾಬಿ ಮಾಡಿದ್ದರೆ ಸ್ಪೀಕರ್ ಸ್ಥಾನದ ಗೌರವ ಉಳಿಯುತ್ತಿತ್ತು, ಅದುಬಿಟ್ಟು ಸ್ಪೀಕರ್ ಆಗಿದ್ದುಕೊಂಡೇ ಗಣಿಗಳ್ಳರ ಜೊತೆ ಗುರುತಿಸಿಕೊಂಡು ಬಹಿರಂಗವಾಗಿಯೇ ತಾನು ಸಿ.ಎಂ. ಆಕಾಂಕ್ಷಿ ಎಂದು ಹೇಳುತ್ತಾ ಸಭಾಪತಿ ಹುದ್ದೆಗೆ ಕಳಂಕ ತಂದ ಶೆಟ್ಟರ್‌ಗೆ ಕೊನೆಗೂ ಸಿ.ಎಂ. ಹುದ್ದೆ ಮರೀಚಿಕೆಯಾಗಿದ್ದು ಒಳ್ಳೆಯದೇ ಆಯಿತು. ಈತ ಸಿ.ಎಂ. ಆಗಿ ಆ ಹುದ್ದೆಯ ಮರ್ಯಾದೆಯನ್ನು ಯಡ್ಡಿ ತರಹವೇ ಮಣ್ಣುಪಾಲು ಮಾಡುತ್ತಿದ್ದರು.

ಈಗ ಈ ಸರ್ಕಾರವನ್ನು ನಿಯಂತ್ರಿಸಲು ಕೋರ್ ಕಮಿಟಿ ರಚಿಸಲಾಗುತ್ತಿದೆ. ಹೀಗೆ ಜನರಿಂದ ಆರಿಸಲ್ಪಟ್ಟ ಸರ್ಕಾರದ ಮೇಲೆ ಬಾಹ್ಯಶಕ್ತಿಗಳು ನಿಯಂತ್ರಣ ಹೇರುವ ಅಸಂವಿಧಾನಿಕ ಕ್ರಮವನ್ನು ತಡೆಯುವುದು ಸ್ಪೀಕರ್ ಕೆಲಸ. ಇಂತಹ ಕೆಲಸವನ್ನು ಶೆಟ್ಟರ್‌ರಿಂದ ನಿರೀಕ್ಷಿಸುವುದೇ ಮೂರ್ಖತನ.

ಅಂದಂತೆ ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಶೆಟ್ಟರ್ ಸಾಧನೆ ಕಳಪೆಯೇ. ಆಡಳಿತ ಪಕ್ಷದ ಲೋಪದೋಷಗಳನ್ನು ಎತ್ತಿ ತೋರಿಸಬೇಕಿದ್ದ ಅವರು, ಅದರ ಬದಲಿಗೆ ಆಡಳಿತ ಪಕ್ಷದೊಂದಿಗೆ ಅಂಡರ್‌ಸ್ಟ್ಯಾಂಡ್ ಮಾಡಿಕೊಂಡು ಲೂಟಿಯಲ್ಲಿ ತಾವೂ ಪಾಲುದಾರರಾಗಿದ್ದರು. ಹೀಗೆ ಎಂದೂ ಸ್ವಂತ ವರ್ಚಸ್ಸು ಬೆಳೆಸಿಕೊಳ್ಳದ ಈ ಸಂಘ ಪರಿವಾರದ ಮರಿ ಶೆಟ್ಟರ್ ಈಗ ಸ್ಪೀಕರ್ ಸ್ಥಾನಕ್ಕೂ ಅವಮಾನ ಮಾಡಿದ್ದಾರೆ.

ರೇಣುಕಾಚಾರ್ಯ ರೆಸಾರ್ಟ್ ಸೇರಿ ಮಂಗಾಟ ಮಾಡಿದ್ದಕ್ಕೂ, ಸ್ಪೀಕರ್ ಸಾಹೇಬರು ಬಹಿರಂಗವಾಗಿ ಗಣಿಗಳ್ಳರ ಜೊತೆ ಭಿನ್ನಮತ ನಡೆಸಿದ್ದಕ್ಕೂ, ಏನಾದರೂ ವ್ಯತ್ಯಾಸವುಂಟೆ?

● ಮಲ್ಲನಗೌಡರ್

ವಿಘ್ನ ಸಂತೋಷ್!

ಬಿಜೆಪಿಯ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿರುವ ಸಂತೋಷ ಕರಾವಳಿ ಮೂಲದ ಬ್ರಾಹ್ಮಣ. ಸದ್ಯಕ್ಕೆ ಬೆಂಗಳೂರಿನ ಕೆ.ಆರ್.ಪುರಂನಲ್ಲಿ ವಾಸವಿದ್ದಾನೆ. ಬಿಜೆಪಿ ಆಫೀಸ್ ಪೂರಾ ಇವನ ಕಂಟ್ರೋಲಿನಲ್ಲೇ ಇದೆ.

ಈ ಸಂಘಟನಾ ಕಾರ್ಯದರ್ಶಿ ಹುದ್ದೆಗೆ RSS ಎಲಿಮೆಂಟ್‌ಗಳೇ ನೇಮಕಗೊಳ್ಳಬೇಕೆಂಬ ನಿಯಮವಿದೆ. ಅದರಂತೆ ಬಹಳ ಹಿಂದೆ ಅನಂತಕುಮಾರ್, ಆನಂತರ ಅರವಿಂದ ಲಿಂಬಾವಳಿ 20 ವರ್ಷ ಕಾಲ ಈ ಹುದ್ದೆಯಲ್ಲಿದ್ದರು. ಟ್ರಾಜಡಿ ಏನೆಂದರೆ ಇವರಿಬ್ಬರೂ ಪಕ್ಷಕ್ಕಾಗಿ ಗಾಣದೆತ್ತಿನಂತೆ ದುಡಿದಾಗ ಬಿಜೆಪಿಗೆ ಅಧಿಕಾರ ಸಿಕ್ಕಿರಲಿಲ್ಲ. 2006 ರಲ್ಲಿ ಸಂತೋಷ್ ಈ ಹುದ್ದೆಗೆ ಬಂದಾಗ ಬಿಜೆಪಿ ಅಧಿಕಾರದ ಹೊಸ್ತಿಲಲ್ಲಿತ್ತು. ಸಂತೋಷ್ ಕಳೆದ 3 ವರ್ಷಗಳಿಂದ ತನ್ನ ಹುದ್ದೆಯ ಪ್ರಭಾವವನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾನೆ. ಜೊತೆಗೆ ಅನಂತಕುಮಾರ್, ಲಿಂಬಾವಳಿಯನ್ನು ತುಳಿಯುವ ಕೆಲಸ ಮಾಡುತ್ತಿದ್ದಾನೆ. ಯಾರನ್ನು ಬೇಕಾದರೂ ಉಪಯೋಗಿಸಿಕೊಂಡು ಎಸೆಯುವ ಸಂತೋಷ್‌ನಿಂದಾಗಿಯೇ ಪ್ರಮೋದ್ ಮುತಾಲಿಕ್ ಇವತ್ತು ಮೂಲೆಗುಂಪಾಗಿರುವುದು. ಭಜರಂಗದಳದಲ್ಲಿ ಅಂಡಲೆದುಕೊಂಡಿದ್ದ ಮುತಾಲಿಕನನ್ನು ಕರೆದು 18 ಲಕ್ಷ ಕೈಗಿಟ್ಟು ಶ್ರೀರಾಮ ಸೇನೆ ಕಟ್ಟು ಎಂದು ಕಳಿಸಿದ್ದೇ ಸಂತೋಷ್. ಆದರೆ ಮುತಾಲಿಕನ ಈ ಕಪಿಸೇನೆಯ ಹಾವಳಿ ಮಿತಿಮೀರಿ ರಾಷ್ಟ್ರಮಟ್ಟದಲ್ಲೂ ಬಿಜೆಪಿಗೆ ಕೆಟ್ಟ ಹೆಸರು ಬಂದಾಗ ಇದೇ ಸಂತೋಷ್ ಮುತಾಲಿಕನನ್ನು ನಡುನೀರಿನಲ್ಲಿ ಕೈಬಿಟ್ಟ. ಮುತಾಲಿಕನ ಮೇಲೆ ಡಜನ್‌ಗಟ್ಟಲೇ ಕೇಸುಗಳಾದಾಗ ಕೈಗೆ ಸಿಗದೆ ತಪ್ಪಿಸಿಕೊಂಡಿದ್ದ.



ಒಂದು ಕಾಲದಲ್ಲಿ ಬೆಂಗಳೂರು ಮಹಾನಗರ RSS ಸಹ ವಿಭಾಗ ಪ್ರಚಾರಕ ಆಗಿದ್ದ ಸಂತೋಷ್ ಪಂಡಿತ ದೀನ ದಯಾಳ್ ಉಪಾಧ್ಯಾಯ ವೇದಿಕೆ ಹುಟ್ಟುಹಾಕಿ ಬಿಜೆಪಿಗಳಿಗೇ ಕಿರುಕುಳ ನೀಡುತ್ತಿದ್ದ. ಆಗ ಇವನಿಗೆ RSSನವರು ಪನಿಷ್‌ಮೆಂಟ್ ಟ್ರಾನ್ಸ್‌ಫರ್ ಮಾಡಿ ಶಿವಮೊಗ್ಗಾಗೆ ಎತ್ತಿ ಹಾಕಿದ್ದರು. ಅಲ್ಲಿಂದ ಕೊನೆಗೆ ನೇರ ಬಿಜೆಪಿ ಸಂಘಟನಾ ಕಾರ್ಯದರ್ಶಿಯಾಗಿ ಬೆಂಗಳೂರಿಗೆ ಕಾಲಿಟ್ಟ ಸಂತೋಷ್‌ಗೆ ರಾಜಕೀಯದ ರುಚಿ ಹತ್ತಿತ್ತು ಜೊತೆಗೆ ಬಿಜೆಪಿಯ ಮಹಿಳಾ ಕಾರ್ಯಕರ್ತೆಯರ ಬಗ್ಗೆಯೂ ವಿಶೇಷ ಮಮತೆ ಬೆಳೆಸಿಕೊಳ್ಳತೊಡಗಿದ. ಜೋಗುಪಾಳ್ಯದ ಮಹಿಳೆಯೊಬ್ಬರ ಜೊತೆ ಪಾರ್ಟಿ ಆಫೀಸಿನೊಳಗೆ ಸಂತೋಷ್ ಗಂಟೆಗಟ್ಟಲೆ ರಹಸ್ಯ ಸಮಾಲೋಚನೆ ನಡೆಸುತ್ತಿರುತ್ತಾನೆ. ಈ ಬಗ್ಗೆ ಪಾರ್ಟಿ ವರ್ಕರ್‌ಗಳು "ಅದೇನಪ್ಪಾ ಅಂತ ರಾಜಕಾರಣ ಇವರದ್ದು" ಎಂದು ಆಶ್ಚರ್ಯ ಪಡುತ್ತಿರುತ್ತಾರೆ. ಬಿಜೆಪಿಯೊಳಗೆ ತನ್ನದೇ ಗುಂಪು ಕಟ್ಟಿಕೊಂಡಿರುವ ಸಂತೋಷ್ ಪಾರ್ಟಿ ಆಫೀಸಿನಲ್ಲೂ ಪ್ರಮುಖ ಸ್ಥಾನಗಳಿಗೆ ತನ್ನ ಚೇಲಾಗಳನ್ನೇ ತಂದು ಕೂರಿಸಿದ್ದಾನೆ. ಚಿಕ್ಕಪೇಟೆಯ ಶಿವು ಮೀಡಿಯಾ ಇನ್‌ಚಾರ್ಜ್ ಆಗಿದ್ದರೆ ಕದಿರೇನಹಳ್ಳಿಯ ಪೂರ್ಣಿಮ ಪ್ರಕಾಶ್ ಕೂಡ ಪ್ರಮುಖ ಹುದ್ದೆ ಗಿಟ್ಟಿಸಿದ್ದಾರೆ. ಮಜಾ ವಿಚಾರ ಏನೆಂದರೆ ಅನಂತಕುಮಾರ್ ತಲೆ ಕಂಡರಾಗದ ಸಂತೋಷ್ ಕಳೆದ ಸಂಸತ್ ಚುನಾವಣೆಯಲ್ಲಿ ಅನಂತು ವಿರುದ್ಧ ಸ್ಪರ್ಧಿಯಂತೆ ಏರ್ ಡೆಕನ್‌ನ ಕ್ಯಾಪ್ಟನ್ ಗೋಪಿನಾಥ್‌ಗೆ ಚಿತಾವಣಿ ನೀಡಿದ್ದ ಇದು ಅನಂತ್‌ಕುಮಾರ್‌ಗೂ ಗೊತ್ತಿದೆ.

ಈ ಸಂತೋಷ್ ಒಂಥರಾ ವಿಘ್ನ ಸಂತೋಷ್.

ರಾಜ್ಯ ಬಿಜೆಪಿಯಲ್ಲಿ ಸಹಮತವಿರಲಿ ಇಲ್ಲ ಭಿನ್ನಮತವಿರಲಿ ಅಲ್ಲಿ ಸಂತೋಷನ ನೆರಳಿದ್ದೇ ಇರುತ್ತದೆ. ಯಾರಾದರೂ ಬಿಜೆಪಿಗಳು ಸರ್ಕಾರದ ಎಡವಟ್ಟುಗಳ ಬಗ್ಗೆ ಪ್ರಶ್ನಿಸಿದರೆ ಯಡ್ಡಿಯನ್ನು ತೋರಿಸುತ್ತಾನೆ.

ಪಕ್ಷದ ಬಗ್ಗೆ ಕೇಳಿದರೆ ಸದಾನಂದ ಗೌಡರತ್ತ ಕೈ ತೋರುತ್ತಾನೆ. RSS ಸಂಘಟನೆ ಬಗ್ಗೆ ಚೇರಿಕೊಂಡರೆ ಸಂಘಾನ ಕೇಳಿ ಅನ್ನುತ್ತಿರುತ್ತಾನೆ.


ಆದರೆ ಎಲ್ಲಾ ಯಡವಟ್ಟುಗಳಿಗೂ, ಅವನತಿ, ಅಪಘಾತಗಳಿಗೂ ಫೌಂಡೇಷನ್ ಹಾಕುವುದೇ ಈ ಸಂತೋಷ್ ಅಥವಾ ವಿಘ್ನ ಸಂತೋಷ್!


ಉದಾಸಿ

ಹಾವೇರಿ: ಪರಿಹಾರದ ಹಣ ತಿಂದ ಉದಾಸಿ ಪಿಂಡಗಳು

ನೆರೆ ಬಂದಿದ್ದೇ ರಣಹಸಿವಿನ ಚೆಡ್ಡಿಗಳ ದಾಹವನ್ನು ಇಂಗಿಸಲು ಎನ್ನುವಂತಾಗಿದೆ. ಕೋಟಿ ಕೋಟಿ ಪರಿಹಾರದ ಹಣವು ಸುಳ್ಳು ದಾಖಲೆಗಳ ಮೂಲಕ ಚೆಡ್ಡಿ ಪುಢಾರಿಗಳ ಜೇಬಿಗಿಳಿಯುತ್ತಲಿದೆ. ಹಾವೇರಿ ಜಿಲ್ಲೆಯಲ್ಲಿ ಒಂದೇ ವಾರದಲ್ಲಿ ನಾಲ್ಕೂವರೆ ಕೋಟಿ ಹಣವನ್ನು ಬ್ಲೀಚಿಂಗ್, ಫಿನಾಯಿಲ್ ಹೆಸರಲ್ಲಿ ತಿಂದಿದ್ದಾರೆ ಮಂತ್ರಿ ಉದಾಸಿಯ ಪುಟಗೋಸಿ ಪಿಂಡಗಳು. ಆಕಾಲಿಕ ಮಳೆಯಿಂದ ಮನೆಮಠ ಕಳೆದುಕೊಂಡು ಬೀದಿಗೆ ಬಿದ್ದಿರುವ ಬಡವರ ಕೈ ಸೇರಬೇಕಾದ ಪರಿಹಾರದ ಹಣ; ಕೊಚ್ಚಿಹೋದ ಕಾಲುವೆ, ರಸ್ತೆ ಕುಡಿಯುವ ನೀರಿನಂತಹ ಮೂಲಭೂತ ಸೌಕರ್ಯಗಳಿಗೆ ವಿನಿಯೋಗವಾಗಬೇಕಾದ ಹಣ ಬಿಜೆಪಿಯ ಹಗಲುದರೋಡೆಕೋರರ ಪಾಲಾಗಿರುವುದು ನಿಜಕ್ಕೂ ಅಸಹ್ಯವೇ ಸರಿ.


ಭಾರೀ ಮಳೆಯಿಂದ ಸೃಷ್ಟಿಯಾದ ಕೊಳಚೆಯಿಂದಾಗಿ ಗ್ರಾಮಗಳಲ್ಲಿ ರೋಗ ಹರಡುವ ಮುನ್ಸೂಚನೆ ಸಿಕ್ಕಿದ್ದರಿಂದ ಗ್ರಾಮಗಳನ್ನು ನೈರ್ಮಲ್ಯೀಕರಣಗೊಳಿಸಲು ಜಿಲ್ಲೆಯ 208 ಗ್ರಾಮಗಳಿಗೆ ತಲಾ ಎರಡು ಲಕ್ಷ ಹಣವನ್ನು ಜಿಲ್ಲಾ ಪಂಚಾಯತ್ ಬಿಡುಗಡೆಗೊಳಿಸಿತು. ಅಷ್ಟೇ ಅಲ್ಲ, "ಐದು ದಿನಗಳಲ್ಲಿ ಕಾಮಗಾರಿ ಕೈಗೊಳ್ಳಬೇಕು, ಚರಂಡಿ ತಿಪ್ಪೆಗಳನ್ನೆಲ್ಲ ತೆರವು ಮಾಡಬೇಕು, ರಸ್ತೆ ದುರಸ್ತಿ ಸೇರಿದಂತೆ ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸಿಕೊಳ್ಳಬೇಕು; ಒಂದು ವೇಳೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿದ್ದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು" ಎಂದು ಸಿಇಓ ಆದೇಶ ಹೊರಡಿಸಿದ್ದರು. ಆದರೆ ಹಸಿದು ಕುಳಿತಿದ್ದ ಚೆಡ್ಡಿ ಪುಢಾರಿಗಳಿಗೆ ಈ ಆದೇಶ ಹೇಳಿಮಾಡಿಸಿದಂತಾಯಿತು.



ಸರ್ಕಾರಿ ಆದೇಶಕ್ಕೆ ತಕ್ಕಂತೆ ಐದು ದಿನಗಳಲ್ಲಿ ಸೃಷ್ಟಿಯಾದ ಖೊಟ್ಟಿ ಬಿಲ್ಲು ಖರೀದಿಸಿದ ಕಳಪೆ ಸಾಮಗ್ರಿ ಜೊತೆಗೂಡಿ ಎರಡು ಲಕ್ಷ ಹಣವನ್ನು ಸರಿದೂಗಿಸಿಯೇ ಬಿಟ್ಟಿತ್ತು. ನಕಲಿ ಡಿಡಿಟಿ, ಬ್ಲೀಚಿಂಗ್ ಪೌಡರ್, ದುಬಾರಿ ಬೆಲೆಗೆ ಫಿನಾಯಿಲ್ ಖರೀದಿಸಿದ ಕಳ್ಳರು ಈಗ ನೆರೆ ಪರಿಸ್ಥಿತಿಯನ್ನು ನಿಭಾಯಿಸಲು ಇನ್ನೂ ಹೆಚ್ಚು ಹಣ ಬೇಕು ಎಂದು ಇಂಡೆಂಟ್ ಹಾಕಿಕೊಂಡು ಕುಳಿತಿದ್ದಾರೆ. ಸಾಮಗ್ರಿ ಖರೀದಿಗೆ ರಾಣೆಬೆನ್ನೂರಿನ ಚೆಡ್ಡಿ ತುಳಜಪ್ಪ ಮೇಹರವಾಡೆಗೆ ಟೆಂಡರ್ ಕೊಟ್ಟು ನೇರವಾಗಿ ಪರಿಹಾರದ ಹಣಕ್ಕೆ ಕತ್ತರಿ ಹಾಕಿದ್ದಾರೆ ಉದಾಸಿಯ ಪಿಂಡಗಳು. ಕಳಪೆ ಸಾಮಗ್ರಿ, ಖೊಟ್ಟಿ ಬಿಲ್‌ಗಾಗಿಯೇ ಹುಟ್ಟಿರುವಂತಿರುವ ಮೇಹರವಾಡೆ ಜಿಲ್ಲೆಯ 208 ಗ್ರಾಮಪಂಚಾಯತಿಗೆ ಎಲ್ಲಾ ಸಾಮಾನು ತಲುಪಿದೆ ಎಂದು ಷರಾ ಬರೆದು ಬರೋಬ್ಬರಿ ನಾಲ್ಕು ಕೋಟಿಗೆ ನಾಮ ಎಳೆದಿದ್ದಾನೆ. ಬಡವರ ಹಣ ಬೇವರ್ಸಿಗಳ ಪಾಲಾದಂತಾಗಿದೆ.


ನಿಂತಲ್ಲೇ ಸ್ಕೆಚ್ಚು ಕೂತಲ್ಲೇ ಹಣ

ಬಿದ್ದ ಭಾರಿ ಮಳೆಗೆ ತತ್ತರಿಸಿದ್ದ ಜನತೆ ಯಥಾಸ್ಥಿತಿಗೆ ಬರಲು ತವಕಿಸುತ್ತಿರುವಾಗ "ನಾವು ಮಾಡಿದ್ದೇ ಸರಿ. ಈಗ ಏನು ಮಾಡಿದರೂ ನಮ್ಮನ್ನು ಕೇಳುವವರೇ ಇಲ್ಲ" ಎಂದು ಪರಿಹಾರದ ಹಣವನ್ನು ಮನಬಂದಂತೆ ಜೇಬಿಗೆ ಇಳಿಸಿರುವ ಜಿಲ್ಲಾ ಮಂತ್ರಿ ಉದಾಸಿಯ ಪಟಾಲಂ ನಿಂತಲ್ಲೇ ಸ್ಕೆಚ್ಚು ಹಾಕುತ್ತಾ ತನಗೆ ಬೇಕಾದವರಿಗೆ ಕಾಂಟ್ರ್ಯಾಕ್ಟ್ ಕೊಡುತ್ತಾ ಸಾಗಿದೆ. ಬಿಜೆಪಿಯ ಆಪರೇಷನ್ ಕಮಲಕ್ಕೆ ಬಲಿಯಾದ ಜಿ.ಪಂ. ಸದಸ್ಯ ಮಾಜಿ ಅಧ್ಯಕ್ಷ ಪರಮೇಶಪ್ಪ ಮೇಗಳಮನಿ ಎಂಬ




ಎಂಜಲು ಗಿರಾಕಿಗೆ ಬೇಕಾದವನಾಗಿದ್ದಾನೆ ಟೆಂಡರ್ ಪಡೆದ ತುಳಜಪ್ಪ ಮೇಹರವಾಡೆ.

ಪ್ರತಿ ಗ್ರಾಮಪಂಚಾಯತಿಗೆ ನೀಡಿದ್ದ ಎರಡು ಲಕ್ಷದಲ್ಲಿ 70 ಸಾವಿರ ರೂ. ಮೇಹರವಾಡೆಯ ಪಾಲಾಗಿದೆ. ಪರಿಹಾರದ ಹಣದಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 30 ರೂ.ಗೆ ಕೆ.ಜಿ.ಯಂತೆ ನೂರು ಕೆ.ಜಿ. ಬ್ಲೀಚಿಂಗ್ ಪೌಡರ್, 40 ರೂ.ಗೆ ಕೆ.ಜಿ.ಯಂತೆ 800 ಕೆ.ಜಿ. ಲಿಡಾಲ್ ಪುಡಿ, 40 ರೂ. ದರದಲ್ಲಿ 400 ಲೀಟರ್ ಫಿನಾಯಿಲ್‌ಗಳನ್ನು ಎಲ್ಲಾ 208 ಗ್ರಾ.ಪಂ.ಗಳಿಗೆ ಸಪ್ಲೈ ಮಾಡಲು ಟೆಂಡರ್ ಪತ್ರದಲ್ಲಿ ಸೂಚಿಸಲಾಗಿತ್ತು.


ಜಿಲ್ಲಾಧಿಕಾರಿ ಶ್ರೀವರ

ಆದರೆ 10-20 ಗ್ರಾಮ ಪಂಚಾಯ್ತಿಗಳಿಗೆ ಮಾತ್ರ ಅವನ್ನೆಲ್ಲ ಸಪ್ಲೈ ಮಾಡಿ ಉಳಿದಿದ್ದನ್ನು ಗ್ರಾಮಪಂಚಾಯತಿ ಕಾರ್ಯದರ್ಶಿ ಹಾಗೂ ಸದಸ್ಯರು ಹೊಂದಾಣಿಕೆ ಮಾಡಿಕೊಂಡು ಸ್ವಾಹಾ ಮಾಡಿದ್ದಾರೆ. ಕನಿಷ್ಠವೆಂದರೂ 14,56,00 ರೂಪಾಯಿಗಳು ತುಳಜಪ್ಪ ಮೇಹರವಾಡೆ ಮೂಲಕ ಲೂಟಿಯಾಗಿದೆ. ವಿಶೇಷ ಅನುದಾನವೆಂದು ಪ್ರತಿ ಗ್ರಾಮ ಪಂಚಾಯಿತಿಗೆ ನಿಗದಿ ಮಾಡಿದ್ದ 2 ಲಕ್ಷ ರೂ.ನಲ್ಲಿ 70 ಸಾವಿರ ರೂಪಾಯಿಗಳನ್ನು ಜಿಲ್ಲಾ ಪಂಚಾಯತಿಯಲ್ಲಿಯೇ ಕಡಿತಗೊಳಿಸಿ ಉಳಿದ ಹಣವನ್ನು ಮಾತ್ರ ಪಂಚಾಯತಿಗಳಿಗೆ ತಲುಪಿಸಲಾಗಿದೆ. ಜಿ.ಪಂ. ಸಿಇಓ ಚನ್ನಪ್ಪಗೌಡರ ರಾಣೆಬೆನ್ನೂರಿನ ನಕಲಿ ಕಂಪೆನಿ ಮಾಲೀಕ ಮೆಹರವಾಡೆಯೊಂದಿಗೆ ಡೀಲ್ ಕುದುರಿಸಿಕೊಂಡು ಒಂದೂವರೆ ಕೋಟಿಗೆ ಸ್ಕೆಚ್ ಹಾಕಿದ್ದಾರೆ ಎನ್ನುವುದೀಗ ಬಯಲಾಗಿದೆ. ಜಿಲ್ಲಾಧಿಕಾರಿ ಶ್ರೀವರ ಇದನ್ನೇಕೆ ಗಮನಿಸುತ್ತಿಲ್ಲ?



TULAJAPPA MEHARWADE
DYES & CHEMICALS
RANEBENNUR-581 115
Secretary
G.P. Kabbur
Date 12/10/09

Description	Qty	Rate Rs.	Per	Amount Rs.
Bleaching Powder	1000 Kg	30	Kg	30,000
Phenyl	400 Ltr.	40	Ltr.	16,000
Lindal Dust	800 Kg	30	Kg	24,000
Include 4% Vat				

Total 70,000/-

For Tulajappa Meharwade

ಮೇಹರವಾಡೆಯ ಅಪರಾಧಪರಾ...


ಚನ್ನಪ್ಪಗೌಡರ ಆದೇಶ....

ಇದೇ ಹೊತ್ತಿಗೆ ಬೆಳೆಹಾನಿ ಪರಿಹಾರದಲ್ಲಿ ತಾರತಮ್ಯ ಮಾಡಿ ರೈತರ ಆಕ್ರೋಶಕ್ಕೆ ಗುರಿಯಾಗಿರುವ ಜಿಲ್ಲಾ ಮಂತ್ರಿ ಉದಾಸಿಗೆ ಕಂಡಕಂಡ ಗ್ರಾಮಗಳಲ್ಲಿ ಜನರು ದಿಗ್ಬಂಧನ ಹಾಕುತ್ತಿದ್ದಾರೆ. ರೆಡ್ಡಿಗಳ ಪರತ್ತಿನ ಪ್ರಕಾರ, ಇವನ ಮಂತ್ರಿ ಪದವಿಯ ಕುರ್ಚಿ ಅಲುಗಾಡುತ್ತಿದೆ. ಆ ಭೀತಿಯಿಂದ ಹೊರಬಂದು, ತನ್ನ ಬಾಲಬಡುಕ ಪುಢಾರಿ ಪಿಂಡಗಳಿಗೆ ಬುದ್ಧಿ ಹೇಳಿ ಲದ್ದಿ ತಿನ್ನುವುದನ್ನು ನಿಲ್ಲಿಸಿದರೆ ಸೂರು ಕಳೆದುಕೊಂಡು ಸಾವಿಗೆ ಶರಣಾಗುತ್ತಿರುವ ಬಡಜನತೆಯ ಕಷ್ಟ ಕೊಂಚವಾದರೂ ಕಳೆದೀತು.


● ವಿನಯ್ ಹುರುಳಿಕುಪ್ಪಿ



ಕಾಡಾನೆ ತಡೆಗೆ ಮೂರ್ಖರ ಮೊಳೆ

ಇದೊಂದು ಮೂರ್ಖ ಯೋಜನೆ. ಕಾಡಾನೆಗಳು ನಾಡಿಗೆ ನುಗ್ಗುವುದ[illegible] ತಡೆಯಲು 'ಮೊಳೆಗಳ ಹಾಸಿಗೆ' ತಯಾರಿಸಿ ಕೊಡುವುದಾಗಿ 'ಅವಿ[illegible] ಎಂಟರ್‌ಪ್ರೈಸಸ್' ಎಂಬ ಕಂಪನಿ ಪ್ರಸ್ತಾವನೆ ಸಲ್ಲಿಸಿದೆ, ಅದನ್ನ ಜಾರಿಗೆ ತರ[illegible] ಅರಣ್ಯ ಇಲಾಖೆ ತುದಿಗಾಲ ಮೇಲೆ ನಿಂತಂತಿದೆ.

ಅರಣ್ಯದ ಸುತ್ತಮುತ್ತ ಹಲವಾರು ಚದರ ಕಿ.ಮೀ.ಗಳವರೆಗೆ ಈ 'ಮೊ[illegible] ಹಾಸಿಗೆ' ಹರಡಿದರೆ, ಕಾಡಾನೆಗಳು ನಾಡಿಗೆ ನುಗ್ಗಲು ಆಗುವುದೇ ಇಲ್ಲವ[illegible] ಅಂದಹಾಗೆ ಈ ಮೊಳೆಹಾಸಿಗೆ ಹೇಗಿರುತ್ತೆ ಅಂತಾ ಕುತೂಹಲವೇ? ಕಬ್ಬಿಣ[illegible] ರಾಡ್‌ಗಳನ್ನು ವಿವಿಧ ಎತ್ತರದಲ್ಲಿ ನೆಲದಲ್ಲಿ ಹೊಡೆಯುವುದು! ಒಂದಲ್ಲ, ಎರಡು[illegible] ಒಂದು ಚದರ ಮೀಟರ್ ಕ್ಷೇತ್ರದಲ್ಲಿ 50 ರಿಂದ 70 ರಾಡುಗಳು! ಹಿ[illegible] ಹತ್ತಾರು ಚದರ ಕಿ.ಮೀ. ಪ್ರದೇಶದಲ್ಲಿ ಇಂತಹ ಸಾವಿರಾರು ರಾಡುಗಳ ಗುಚ್ಛ[illegible] ಮೂಲಕ ಮೊಳೆಹಾಸಿಗೆ ನಿರ್ಮಿಸುವುದಂತೆ! ಈ ಹಾಸಿಗೆಯನ್ನು ದಾಟಿ ಆನೆಗಳು ಬರಲಾರವು ಎಂಬುದು ಈ ಹಾಸಿಗೆಯ 'ಸಂಶೋಧಕ' ಅವಿನ್ ಎಂಟರ್‌ಪ್ರೈಸಸ್‌ನ ಎಂ.ಕೆ. ಮುಕುಂದರ ಕಲ್ಪನೆ!



ಇದು ಕಲ್ಪನೆ ಏಕೆಂದ[illegible] ಮುಕುಂದ ಸಾಹೇಬರಿನ್ನೂ ಟ್ರಯಲ್ ಹಂತದಲ್ಲಿದ್ದಾರ[illegible] ಈಗಾಗಲೇ ಅವರ ಮೊದಲ ಟ್ರಯಲ್ ಗೋತಾ ಹೊಡೆದಿದೆ. ಬನ್ನೇರುಘಟ್ಟದ ಬಳಿ ಈ ಮಹಾಶಯರು ಹಾಸಿದ ಮೊಳೆಹಾಸಿಗೆಯನ್ನು ಕಾಡಾನೆಯಲ್ಲ, ಸಾಕು ಆ[illegible] 'ಗಾಯತ್ರಿ'ಯೇ ದಾಟಿ ಬಂದಿದ್ದಾಳೆ. ಒಂದಿಷ್ಟು ತರಚಿದ ಗಾಯಗಳಾಗಿವೆ ಆ[illegible] ಆನೆಗಳು ಹೇಗೆ ಪಾದ ಊರುತ್ತವೆ, ಅವುಗಳ ಪಾದಗಳ ಗಾತ್ರ ಇತ್ಯಾ[illegible] ವಿಷಯಗಳನ್ನಿಟ್ಟುಕೊಂಡು 'ಸಂಶೋಧಕ' ಮುಕುಂದರು ಸ್ಟಡಿ ಮಾಡುತ್ತಿದ[illegible] ಈ ಸ್ಟಡಿಯನ್ನು steady ಆಗಿ ಅರಣ್ಯಾಧಿಕಾರಿಗಳು ಅಬ್ಸರ್ವ್ ಮಾಡುತ್ತಿದ[illegible]


ಈಗಾಗಲೇ ಸೋಲಾರ್ ತಡೆಬೇಲಿ, ಫುಡ್ ಡೈನಮೆಟ್, ಗನ್‌ಶಾ[illegible] ಇತ್ಯಾದಿ ಪ್ರಯೋಗಗಳೆಲ್ಲ ಫೇಲ್ ಆಗಿರುವಾಗ ಈ ಮೊಳೆಹಾಸಿಗೆಯ ಅ[illegible] ಪ್ರಯೋಗ ಅರಣ್ಯ ಇಲಾಖೆಗೆ ಅಗತ್ಯವಿದೆಯೆ? ಅಷ್ಟಕ್ಕೂ ಈ ಯೋ[illegible] ಜಾರಿಗೊಳಿಸಿದರೆ ಕಾಡಾನೆಗಳ ಹಾವಳಿ ನಿಲ್ಲಿಸುವದು ಅಸಾಧ್ಯ, ಜೊತೆಗೆ ಕಾಡಾನ[illegible] ಪಾದ, ಸೊಂಡಿಲುಗಳಿಗೆ ಗಾಯಗಳಾಗಿ ಅವುಗಳ ಪ್ರಾಣಕ್ಕೂ ಎರವಾಗಬಹುದಲ್ಲ[illegible]

ಒಂದು ಅಂದಾಜಿನ ಪ್ರಕಾರ ಒಂದು ಚದರ ಅಡಿ ಮೊಳೆ ಹಾಸಿಗೆಗ[illegible] ರಿಂದ 3 ಲಕ್ಷ ಚಾರ್ಜು ಮಾಡುವ ಸಾಧ್ಯತೆ ಇದೆಯಂತೆ. ಅಂದರೆ [illegible] ಕೋಟಿಕೋಟಿ ವ್ಯವಹಾರಗಳ ಅಪ್ರಯೋಜಕ ಪ್ರಾಜೆಕ್ಟ್ ಆಗಲಿದೆ.

ಇಂತಹ ಪ್ರಸ್ತಾವನೆಯನ್ನು ಅರಣ್ಯ ಇಲಾಖೆ ಕೂಡಲೇ ತಿರಸ್ಕರಿಸಬೇ[illegible] ಇಲಾಖೆಯಲ್ಲೇ ಇರುವ ಅರಣ್ಯ ತಜ್ಞರು, ಪ್ರಾಣಿಶಾಸ್ತ್ರಜ್ಞರು ಸೇರಿ ಕಾಡಾನ[illegible] ಹಾವಳಿ ತಡೆಯಲು ಸರಳ ಕ್ರಮಗಳನ್ನು ರೂಪಿಸಬೇಕು. ಸುತ್ತಲಿನ [illegible] ವೈವಿಧ್ಯದೊಡನೆ ಸಂಪರ್ಕ ಇಟ್ಟುಕೊಂಡೇ ರೈತರ ಬೆಳೆ ನಾಶವಾಗದ[illegible] ನೋಡಿಕೊಳ್ಳಬೇಕು.


ಅದು ಬಿಟ್ಟು ಕಾಡಿಗೇ ಗೋಡೆ ಕಟ್ಟುವುದರಿಂದ, ಕಾಡಿನ ಸುತ್ತ ಮೊಳೆಹಾ[illegible] ಹಾಸುವುದರಿಂದ ಕಾಡಾನೆಗಷ್ಟೇ ಅಲ್ಲ ಜನರಿಗೂ ಅದು ಕಷ್ಟಕರವೇ.

ಪೂಜಾರ್ ಎಂಟ್ರಿ ಡ್ಡಿ ಏಟಿಗೆ ಚರಂತಿ ಂಯ್ ಕುಂಯ್



ಗಲಕೋಟೆ ಶಾಸಕ ವೀರಣ್ಣ ಚರಂತಿಮಠನ ಮದಲ್ಲಿ ಇರುವೆ ಹೊಕ್ಕಂತಾಗಿದೆ. ಎಲ್ಲ ಶಾಸಕರು ಬಿಜೆಪಿ ವಿಷಯದಲ್ಲಿ ಬ್ಯೂಸಿ ಆಗಿರುವಾಗ, ಮಠನ ಬುಡ ಮಾತ್ರ ಅಲ್ಲಾಡತೊಡಗಿದೆ. ಸದ್ಯಕ್ಕೆ ಶಾಸಕತ್ವಕ್ಕೆ ರಾಜೀನಾಮೆ ಕಳಿಸುವ ಮೂಲಕ ಮೇಲ್ ಶುರು ಮಾಡಿದ್ದಾನೆ.


ಗಲಕೋಟೆಯಿಂದ ಎರಡು ಬಾರಿ ಶಾಸಕನಾಗಿದ್ದ ವಿವಾರದ ಭಂಟ ಪಿ.ಎಚ್. ಪೂಜಾರ್‌ನನ್ನು ಗೆ ಸೇರಿಸಿಕೊಂಡರೆ, ಶಾಸಕ ಚರಂತಿಮಠನೇಕೆ ಸುಟ್ಟ ಬೆಕ್ಕಿನಂತೆ ಕಿರುಚುತ್ತಿದ್ದಾನೆ? ಎಂಬ ಪ್ರಶ್ನೆ ೊಂಡು ಹೋದರೆ ಚರಂತಿಮಠನ ಗೆ ಉತ್ತರಗಳು ಸಿಗುತ್ತವೆ.



ಎಚ್. ಪೂಜಾರ್ ಪಕ್ಕಾ ಸಂಘ ರದ ಆಸಾಮಿ. ಪ್ರಬಲ ರೆಡ್ಡಿ ತಿಯ ಪೂಜಾರ್‌ಗೆ ಜಿಲ್ಲೆಯಲ್ಲಿ ಕ ವರ್ಚಸ್ಸಿದೆ. ರಾಜಶೇಖರ್ ತರ ಮತ್ತು ಪೂಜಾರ್ ಸಾಕಷ್ಟು ಷ್ಟು ಬಾಗಲಕೋಟೆ ಜಿಲ್ಲೆಯಲ್ಲಿ ಗೆ ಭದ್ರಬುನಾದಿ ಹಾಕಿದ್ದಾರೆ. ಮಠನಂತೆ ಇವರೂ ಕೂಡಾ ಕೋಟೆಯಲ್ಲಿ ಕೋಮು ಸೌಹಾರ್ದ ು ಪ್ರಯತ್ನಿಸಿ ಸಂಘ ಪರಿವಾರದ ಕಣ್ಣಲ್ಲಿ ಗಳಾಗಿದ್ದವರು.

004 ರಲ್ಲಿ ಪೂಜಾರ್ ಬಿಜೆಪಿಯಿಂದ ಗಿದ್ದಾಗಲೇ ಆತನಿಗೆ ಪಕ್ಷದ ನಾಯಕರು ಟಿಕೆಟ್ ಬಿಟ್ಟರು. ಆಗ ಆ ಸ್ಥಾನದಲ್ಲಿ ಬಂದು ಕುಳಿತವನೇ ಮಠ. ಲಿಂಗಾಯತ ಕೋಮಿನ ಜಂಗಮ ಉಪಜಾತಿ, ತ್ಮ್ಯ ನೂರಾರು ಶಿಕ್ಷಣ ಸಂಸ್ಥೆಗಳು ಚರಂತಿಮಠನ ಕಾರಣವಾಗಿದ್ದವು. ಪೇಜಾವರ, ಅನಂತಕುಮಾರ ರ್ವರೀತಿಯಲ್ಲಿ ಸಂತೃಪ್ತಿ ಮಾಡಿ ಟಿಕೆಟ್ ಹೊಡೆದಿದ್ದ ಮಠ ಅಂದಿನಿಂದ ಅನಂತಕುಮಾರ ಬಣದಲ್ಲಿ ಸಿಕೊಂಡು ಶಾಸಕನ ಸ್ಥಾನದಲ್ಲಿ ಭದ್ರವಾಗಿ ನೆಲೆಯೂರಿಬಿಟ್ಟ. ಲಿಂಗಾಯತ ಕಾರ್ಡ್ ಬಳಸುತ್ತಾ, ಸಾಬರ ಮೇಲೆ ದ್ವೇಷ ಸಾಧಿಸುತ್ತ ಅಧಿಕಾರ ಅನುಭವಿಸುತ್ತ ಬಂದ.

ಅನಂತನ ಬಣದಲ್ಲಿದ್ದುದರಿಂದ ಎಷ್ಟೇ ಸೂಟ್‌ಕೇಸ್ ಸಾಗಿಸಿದರೂ ಯಡಿಯೂರಪ್ಪ ಚರಂತಿಮಠನಿಗೆ ಸಚಿವಗಿರಿ ನೀಡಲಿಲ್ಲ, ಬದಲಾಗಿ ಅದೇ ಅನಂತ್ ಬಣದ ಆದರೆ ಚರಂತಿಮಠನ ಪರಮಶತ್ರುವಾದ ಅರವಿಂದ ಲಿಂಬಾವಳಿಗೆ ಸಚಿವಗಿರಿ ನೀಡಿದ ಯಡ್ಡಿ, ಚರಂತಿಮಠನನ್ನು ಸದಾ ದೂರ ಇಡುತ್ತಲೇ ಬಂದ. ಮೊನ್ನೆ ಬಿಕ್ಕಟ್ಟು ತಲೆದೋರಿದಾಗ ಚರಂತಿಮಠ ಶೆಟ್ಟರ್ ಪರ ನಿಂತಾಗ, ಯಡ್ಡಿ ಬಳಗವನ್ನು ಪೂಜಾರ್ ಸಂಪರ್ಕಿಸಿದ್ದಾನೆ. ಆತುರಾತುರವಾಗಿ ಪೂಜಾರ್‌ಗೆ ಬಿಜೆಪಿ ಸದಸ್ಯತ್ವ ನೀಡಲು ಆತ ಸಂಘಪರಿವಾರಿ ಎಂಬುದೂ ಒಂದು ಕಾರಣ. ಮಾಜಿ ಶಾಸಕ ಕಾಂಗ್ರೆಸ್ಸಿನ ಶಿವಾನಂದ ಪಾಟೀಲ್, ಹುನಗುಂದದ ಬಿಜೆಪಿ ಶಾಸಕ ದೊಡ್ಡನಗೌಡನ ವಿರೋಧಿ ಎಂ.ಎಸ್. ಪಾಟೀಲರನ್ನು ಬಿಜೆಪಿಗೆ ತರುವ ಆಶ್ವಾಸನೆಯನ್ನು ಯಡ್ಡಿಗೆ ನೀಡಿರುವ ಪೂಜಾರ್, ಇವತ್ತು ಚರಂತಿಗೆ ಚಳಿಜ್ವರ ಹುಟ್ಟಿಸಿಬಿಟ್ಟಿದ್ದಾನೆ. ಹಾಗೆಯೇ ಬಾದಾಮಿಯ ಬಿಜೆಪಿ ಶಾಸಕ ಪಟ್ಟಣಶೆಟ್ಟಿ ವಿರುದ್ಧ ಅದೇ ಬಿಜೆಪಿಯ ಮಾಜಿ ಶಾಸಕ ರಾಜಶೇಖರ ಶೀಲವಂತನನ್ನು ಎತ್ತಿಕಟ್ಟುವ ಕೆಲಸವನ್ನು ಪೂಜಾರ್‌ಗೆ ವಹಿಸಲಾಗಿದೆ. ಅಂದರೆ ಪೂಜಾರ್‌ನನ್ನು ಬಿಜೆಪಿಗೆ ಸೇರಿಸಿಕೊಂಡಿದ್ದು ಯಡ್ಡಿಯ ಮೊದಲ ಪ್ರಯೋಗವಷ್ಟೇ. ಬರಲಿರುವ ದಿನಗಳಲ್ಲಿ ಮೆರೆಯುತ್ತಿರುವ ಬಾಗಲಕೋಟೆ, ಬಿಜಾಪುರದ ಶಾಸಕರಿಗೆ ಪರ್ಯಾಯ ನಾಯಕರನ್ನು ಎಬ್ಬಿಸುವ ಯೋಚನೆ ಯಡ್ಡಿಯದ್ದಾಗಿದೆ.



ಪೂಜಾರ್‌ಗಿರುವ ಬೆಂಬಲ, ಸಂಘ ಪರಿವಾರದ ಆಶೀರ್ವಾದ ಕಂಡು ತಲೆರೋಸಿ ಹೋಗಿರುವ ಚರಂತಿಮಠ ಸ್ಪೀಕರ್‌ಗೆ ಫ್ಯಾಕ್ಸ್‌ನಲ್ಲಿ ರಾಜೀನಾಮೆ ಕಳಿಸಿ, ದಿನಕ್ಕೊಂದು ಹೇಳಿಕೆ ನೀಡುತ್ತಾ, ಪೂಜಾರಿಯ ಬಿಜೆಪಿ ಎಂಟ್ರಿಗೆ ತಾತ್ಕಾಲಿಕ ತಡೆ ತರಲು ಯತ್ನಿಸಿದ್ದಾನೆ. ಜೊತೆಗೆ ತನ್ನ ಸಂಸ್ಥೆಯ ಜಾಹೀರಾತು ಪಡೆಯುವ ಪತ್ರಿಕೆಗಳ ಮೂಲಕ ಪೂಜಾರ್ ಎಂಟ್ರಿಗೆ ತಡೆ ಎಂಬಂತೆ ಬರೆಸಿಕೊಂಡು ಸಮಾಧಾನಪಡುತ್ತಿದ್ದಾನೆ.

ಈಗ ಜಗದೀಶ್ ಶೆಟ್ಟರ್ ಹಿಂದೆ ಬಿದ್ದಿರುವ ಚರಂತಿ ತನ್ನ ಕುರ್ಚಿ ಭದ್ರತೆಗಾಗಿ ಪೂಜಾರ್‌ನನ್ನು ಬಿಜೆಪಿಯಿಂದ ಹೊರಹಾಕಲು ಪ್ರಯತ್ನಿಸುತ್ತಿದ್ದಾನೆ. ಪೂಜಾರ್ ಬರುವುದರಿಂದ ಬಿಜೆಪಿಗೆ ಲಾಭವಿದೆ, ಆದರೆ ಮುಂದಿನ ಸಲ ಚರಂತಿಗೆ ಟಿಕೆಟ್ ಕಟ್ ಆಗುವುದು ಗ್ಯಾರಂಟಿ. ಹಾಗೆಯೇ ಸದ್ಯ ಬಾಗಲಕೋಟೆ ಪಟ್ಟಣ ಪ್ರಾಧಿಕಾರದ ಅಧ್ಯಕ್ಷನಾಗಿರುವ ಚರಂತಿ ಚೇಲಾ ನಿಂಗಣ್ಣ ವಾಲಿಗೆ ಕೊಕ್ ಕೊಟ್ಟು, ಅಲ್ಲಿಗೆ ಪೂಜಾರ್‌ನನ್ನು ನೇಮಿಸಿಬಿಟ್ಟರೆ, ತನ್ನೆಲ್ಲ ಅವ್ಯವಹಾರಗಳು ಬಯಲಾಗುತ್ತಾವಲ್ಲ ಎಂಬ ಚಿಂತೆ ಚರಂತಿಯನ್ನು ಕಾಡುತ್ತಿದೆ. ಹಾಗೆಯೇ ಕೋಟಿ ಕೋಟಿ ಲೂಟಿಯೂ ಕೈತಪ್ಪಿ ಹೋಗುವುದಲ್ಲ ಎಂಬ ಬ್ಯಾನಿಯೂ ಶುರುವಾಗಿದೆ.

ಇದೇ ವೇಳೆ ಚರಂತಿಯ ಇನ್ನೊಬ್ಬ ಶತ್ರು ಪ್ರಕಾಶ್ ತಪಶೆಟ್ಟಿ ಕೂಡಾ ಚರಂತಿಗೆ ಲಾತಾ ಕೊಡಲು ತಯ್ಯಾರಿ ನಡೆಸಿದ್ದಾನೆ. ಲಿಂಗಾಯತ ಬಣಜಿಗ ಗುಂಪಿಗೆ ಸೇರಿರುವ ತಪಶೆಟ್ಟಿ ಕೂಡಾ ಬಿಜೆಪಿ ಸೇರುವ ಸನ್ನಾಹದಲ್ಲಿದ್ದಾನೆ. ಹೀಗೆ ಪೂಜಾರ್-ತಪಶೆಟ್ಟಿ ಸೇರಿಬಿಟ್ಟರೆ ಚರಂತಿ ಚರಂಡಿ ಪಾಲಾಗುವುದು ಹಂಡ್ರೆಡ್ ಪರ್ಸೆಂಟ್ ಗ್ಯಾರಂಟಿ.

ಈ ಹಿಂದೆ ಪ್ರಭಾಕರ್ ಕೋರೆಯ ನೆರವಿನಿಂದ ತಪಶೆಟ್ಟಿ ಎಂಎಲ್‌ಸಿ ಆಗಲು ಹೊರಟಾಗ, ತಪಶೆಟ್ಟಿ ವಿರುದ್ಧ ಅಪಪ್ರಚಾರ ನಡೆಸಿ ಎಂಎಲ್‌ಸಿಗಿರಿ ತಪ್ಪಿಸಿದ್ದು ಇದೇ ಚಲ್ರಿ ಚರಂತಿ.

ಜಿಲ್ಲೆಯಲ್ಲಿ ತನ್ನ ಎದುರು ಯಾವ ಪರ್ಯಾಯ ನಾಯಕರೂ ಬೆಳೆಯದಂತೆ ಕಂತ್ರಿ ಕೆಲಸ ಮಾಡುವ ಚರಂತಿಮಠ, ಬಸವೇಶ್ವರ ವಿದ್ಯಾವರ್ಧಕ ಸಂಘದಲ್ಲೂ ಹಾಗೇ ಮಾಡಿ 20 ವರ್ಷದಿಂದ ಅಧ್ಯಕ್ಷ ಸ್ಥಾನದಲ್ಲಿ ಝೇಂಡಾ ಹಾಕಿದ್ದಾನೆ.

ಆದರೆ ಈಗ ಯಡ್ಡಿ ಕೊಟ್ಟ ಏಟಿಗೆ ನಲುಗಿಹೋಗಿರುವ ಚರಂತಿಮಠ ವಿಲಿವಿಲಿ ಒದ್ದಾಡುತ್ತ ಕುಂಯ್ ಕುಂಯ್ ಅನ್ನತೊಡಗಿದ್ದಾನೆ. ಅಂತೂ ಭ್ರಷ್ಟ, ಅಲ್ಪಸಂಖ್ಯಾತ ದ್ವೇಷಿ ಚರಂತಿಮಠನಿಗೆ ಇದು ಕೊನೆಯ ಶಾಸಕಗಿರಿಯಾಗಬಹುದು. ಹಾಗಾಗುವುದು ಬಾಗಲಕೋಟೆಗೆ ಒಳ್ಳೆಯದು ಕೂಡಾ.

●ಮೇಘರಾಜ್

ರೆಡ್ಡಿ ರೊಕ್ಕಕ್ಕಲ್ಲವಂತೆ, ಶೆಟ್ಟರ್ ಸಿ.ಎಂ. ಮಾಡಲಂತೆ!



[illegible]

–ಹುಬ್ಬಳ್ಳಿಯಾಂವ

ಬಳ್ಳಾರಿ ಏರ್‌ಪೋರ್ಟ್ : ಮೇಧಾ ಪಾಟ್ಕರ್ ಕಣಕ್ಕೆ



ಗೂಂಡಾಗಳನ್ನು ಬಳಸಿ, ನಕಲಿ ರೈತರನ್ನು ಸೃಷ್ಟಿಸಿ, ದಾಖಲೆಗಳನ್ನು ಬಳಸಿ ಬಳ್ಳಾರಿ ರೈತರ ಹೋರಾಟ ಬಿಗ್ಗುಬಡಿಯಲು ಹವಣಿಸುತ್ತಿರುವ ಗಣಿರೆಡ್ಡಿ ಂಗೆ ರೈತರು ಹೊಸ ಶಾಕ್ ನೀಡಿದ್ದಾರೆ. ನರ್ಮದಾ ಚೋ ಆಂದೋಲನದ ನಾಯಕಿ, ಸಾಮಾಜಿಕ ರ್ತೆ ಮೇಧಾ ಪಾಟ್ಕರ್ ಅವರನ್ನು ತಮ್ಮ ಗೆ ಕರೆಸುವ ಮೂಲಕ ಹೋರಾಟಕ್ಕೆ ಹೊಸ ಸ್ಸು ತುಂಬಿದ್ದಾರೆ.

ಡ ಮಂಗಳವಾರ ಹತ್ತಿರಂದು ಸಿರಿವಾರ, ರು, ತೆಗ್ಗಿನ ಬೂದಿಹಾಳ ಗ್ರಾಮಗಳಿಗೆ ಭೇಟಿ ಮೇಧಾ ಪಾಟ್ಕರ್ ಅಲ್ಲಿನ ಹಸಿರು ಕಂಡು ರೆ. ಕಬ್ಬು, ಒಂದಷ್ಟು ಬಟ್ಟು, ಜೋಳ, ಭತ್ತ, , ಮೆಣಸಿನಕಾಯಿ, ಹತ್ತಿ, ತರಕಾರಿ–ಹೀಗೆ ಎಲ್ಲ ನ್ನು ಇಲ್ಲಿ ಬೆಳೆಯಲಾಗುತ್ತಿದೆ. ತುಂಗಭದ್ರೆ ಗಳಿಂದ, ಹಗರಿ ನದಿಯಿಂದ ನೀರು ಪಡೆಯುವ ತಮ್ಮ ಫಲವತ್ತಾದ ಹೊಲಗಳಲ್ಲಿ ಕೃಷಿ ಮಾಡುತ್ತಾ ವಂಶದಿಂದ ಇದ್ದಾರೆ. ಇಂತಹ ಜನರ ಬದುಕಿಗೆ ಇರುವ ನೋಡುತ್ತಿರುವ ದುಷ್ಟ ರೆಡ್ಡಿಗಳ ವಿರುದ್ಧ ಮೇಧಾ ಧ್ವನಿ ಎತ್ತಿರುವುದರಿಂದ, ಈ ರೈತ ಟಕ್ಕೆ ರಾಜ್ಯದ, ರಾಷ್ಟ್ರದ ಇತರ ಸಂಘಟನೆಗಳ ಬೆಂಬಲವೂ ಒದಗಿಬರುತ್ತಿದೆ. 'ಗಲ್ಲಿ ಸೇ ದಿಲ್ಲಿ ತಕ್ ಆವಾಜ್ ಉಠಾವೊ' ಎಂದಿರುವ ಮೇಧಾ ಈ ವಿಷಯವನ್ನು ರಾಜ್ಯ ಕೇಂದ್ರ ಸರ್ಕಾರಗಳಿಗೂ ಮುಟ್ಟಿಸುತ್ತಿದ್ದಾರೆ.

ಅಷ್ಟಕ್ಕೂ ಕಳ್ಳ ರೆಡ್ಡಿಗಳು ಇಲ್ಲೇನು ಕೈಗಾರಿಕೆ ನಿರ್ಮಾಣ ಮಾಡುತ್ತಿಲ್ಲ, ಅವರ ಐಷಾರಾಮಿ ತೆವಲಿಗಾಗಿ ಏರ್‌ಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಎರಡು ಏರ್‌ಪೋರ್ಟ್‌ಗಳು ಕಾರ್ಯನಿರತವಾಗಿವೆ. ಈಗ ರೆಡ್ಡಿಗಳು ತಮ್ಮ ಸ್ವಂತ ಕೆಲಸಗಳಿಗಾಗಿ ಸರ್ಕಾರಿ ದುಡ್ಡಲ್ಲಿ, ರೈತರ ಫಲವತ್ತಾದ ಭೂಮಿಯಲ್ಲಿ ಏರ್‌ಪೋರ್ಟ್ ಎಬ್ಬಿಸ ಹೊರಟಿರುವುದು ಕಾನೂನು ಬಾಹಿರವಾಗಿದೆ.

ಅಕ್ರಮಗಳ ಸರಮಾಲೆ

ಮೊದಲಿಗೆ ಕೇಂದ್ರ ನಾಗರಿಕ ವಿಮಾನ ಇಲಾಖೆಗೆ ತಪ್ಪು ಮಾಹಿತಿ ನೀಡಲಾಗಿದೆ. ಅತ್ಯಂತ ಅಗತ್ಯ ಎನಿಸಿದ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಅನುಮತಿ ಪಡೆದಿಲ್ಲ, ಗ್ರಾಮಸಭೆಯ ಒಪ್ಪಿಗೆ ಇಲ್ಲದೇ ಭೂಸ್ವಾಧೀನಕ್ಕೆ ಕೈಹಾಕಿರುವುದು ಸಂವಿಧಾನಬಾಹಿರವಾಗಿದೆ. ಅದೆಲ್ಲಕ್ಕಿಂತ ಮುಖ್ಯವಾಗಿ ನೀರಾವರಿ ಪ್ರದೇಶವನ್ನು ಖುಷ್ಕಿ ಎಂದು ನಮೂದಿಸಿ ಗೆಜೆಟ್‌ನಲ್ಲಿ ಸೇರಿಸಿರುವುದಂತೂ ಕ್ರಿಮಿನಲ್ ಅಪರಾಧವೇ ಆಗಿದೆ. ಇದೊಂದು ಕಾರಣಕ್ಕಾಗಿಯೇ ರೆಡ್ಡಿಗಳ ಕುನ್ನಿಯಂತಿರುವ ಜಿಲ್ಲಾಧಿಕಾರಿ ಶಿವಪ್ಪ ಜೈಲಲ್ಲಿ ಇರಬೇಕಾಗುತ್ತದೆ. ಆದರೆ ಇದೀ ಆಡಳಿತ ಯಂತ್ರವನ್ನೇ ತಮ್ಮ ಮನೆಯಾಳಾಗಿ ಮಾಡಿಕೊಂಡಿರುವ ಮೂವರು ರಾಕ್ಷಸ ಮಂತ್ರಿಗಳಿಗೆ ಕಡಿವಾಣವೇ ಇಲ್ಲದಂತಾಗಿದೆ. ರೈತರ ಹೆಸರಲ್ಲಿ ಬಾಚಿ ಬದಿದುಕೊಳ್ಳುವ ಮುಖ್ಯಮಂತ್ರಿಯೀಗ ರೆಡ್ಡಿಗಳ ಗುಲಾಮನಂತಾಗಿರುವುದರಿಂದ ರೈತರು ಹೋರಾಟವನ್ನು ತೀವ್ರಗೊಳಿಸುವುದೊಂದೇ ಮಾರ್ಗವಾಗಿದೆ.

ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಇ[illegible] ಸರ್ವೆ ಮಾಡಿ ಏರ್‌ಪೋರ್ಟ್‌ಗೆ ಕೇವಲ 600 ಎಕರೆ ಭೂಮಿ ಸಾಕು ಎಂದಿದ್ದರೂ ಗೆಜೆಟ್ಟಿನಲ್ಲಿ 1,213 ಎಕರೆ ಭೂಮಿಯನ್ನು ಸ್ವಾಧೀನಮಾಡಿಕೊಳ್ಳುವುದಾಗಿ ಹೇಳಿದ್ದಾರೆ. ಅಂದರೆ ಉಳಿದ 600 ಎಕರೆ ಫಲವತ್ತು ಭೂಮಿಯನ್ನು ರಾಜಕಾರಣಿಗಳು ಮಾರಿಕೊಳ್ಳಲಿದ್ದಾರೆ. ಇದಕ್ಕೆ ಸೂಚನೆ ಎಂಬಂತೆ ಟಾಟಾ ಕಂಪೆನಿಯ ಅಧಿಕಾರಿಗಳ ತಂಡವೊಂದು ಈ ಪ್ರದೇಶಕ್ಕೆ ಭೇಟಿ ನೀಡಿ ಸರ್ವೆ ಮಾಡಿಕೊಂಡು ಹೋಗಿದೆ.



ಇಲ್ಲಿ ಪರಿಸರದ ಸಮಸ್ಯೆಯೂ ಇದೆ. ಏರ್‌ಪೋರ್ಟ್‌ಗಾಗಿ ಹಲವಾರು ಕಾಲುವೆಗಳು ಬಲಿಯಾಗುತ್ತವೆ. ಈ ಭಾಗದ ಜೀವನಾಡಿ ಹಗರಿ ನದಿಯೇ ಬತ್ತಲಿದೆ. ಅಂದರೆ ಚಾಗನೂರು, ಸಿರಿವಾರ ಸುತ್ತಮುತ್ತಲಿನ ಇತರ ಹಳ್ಳಿಗಳ ಕೃಷಿಕರ ಜಮೀನುಗಳಿಗೆ ಹನಿನೀರೂ ಸಿಗುವುದಿಲ್ಲ.

60 ವರ್ಷದ ದಾಖಲೆ

ಈ ಭಾಗದಲ್ಲಿ ತುಂಗಭದ್ರೆ ಹರಿದಿದ್ದೇ 40 ವರ್ಷಗಳ ಹಿಂದೆ. ಈಗಿಲ್ಲಿ ಕಣ್ಣಿಗೆ ಹೊಡೆಯುವಂತೆ ಹಸಿರು ರಾರಾಜಿಸುತ್ತಿದೆ. ಆದರೂ ಜಿಲ್ಲಾಡಳಿತ ಇದನ್ನು ಖುಷ್ಕಿ ಭೂಮಿ ಎಂದಿದೆ! ಈ ರೀತಿ ಸಾಧಿಸಲು ಬಳಸಿರುವುದು 60 ವರ್ಷಗಳ ಹಿಂದಿನ ದಾಖಲೆಯನ್ನು.

ರಾಜ್ಯದ ಬಹುತೇಕ ನೀರಾವರಿ ಪ್ರದೇಶಗಳು ಎಸ್‌ಇಝೆಡ್‌ಗಳಿಗೆ ಬಲಿಯಾಗುತ್ತಿರುವುದಕ್ಕೆ ಒಂದು ಪ್ರಮುಖ ಕಾರಣವಿದೆ. 1967ರಲ್ಲಿ ಕೃಷಿಭೂಮಿ ಸರ್ವೆ ನಡೆದ ಮೇಲೆ ಆ ನಂತರ ನಡೆದೇ ಇಲ್ಲ. 1967ರ ನಂತರ ನೀರಾವರಿಗೊಳಪಟ್ಟ ಪ್ರದೇಶಗಳು ದಾಖಲೆಯಲ್ಲಿ ಇನ್ನೂ ಖುಷ್ಕಿಯೇ. ಈ ಕಾರಣಕ್ಕಾಗಿ ಇದೀ ರಾಜ್ಯದ ಕೃಷಿಭೂಮಿಯನ್ನು ಹೊಸ ಸರ್ವೆಗೆ ಒಳಪಡಿಸುವುದು ಅಗತ್ಯವಾಗಿದೆ.

ಸದ್ಯ ರೈತರು ಕೋರ್ಟಿನಲ್ಲಿ ನ್ಯಾಯ ಕೇಳಿರುವುದರಿಂದ ಜಿಲ್ಲಾಡಳಿತ ಭೂ ಸ್ವಾಧೀನಕ್ಕೆ ಕೈಹಾಕಕೂಡದು. ಆದರೆ ರೆಡ್ಡಿಗಳ ಅಂಧಾದುಂಧಿ ಆಡಳಿತದಲ್ಲಿ ಕಾನೂನಿಗೆಲ್ಲಿ ಬೆಲೆಯಿದೆ?


ಈಗ ಏರ್‌ಪೋರ್ಟ್‌ಗೆ ಆರಿಸಿಕೊಂಡಿರುವ ಜಾಗ ಚಾಗನೂರು, ಸಿರಿವಾರಗಳ ಮಧ್ಯದಲ್ಲಿರುವುದರಿಂದ, ಮೇಲ್ಭಾಗದ ಹೊಲಗಳಿಗೆ, ಕೆಳಭಾಗದ ಹೊಲಗಳಿಗೆ ಸಂಪರ್ಕವೇ ತಪ್ಪಲಿದೆ.

ಸುಮಾರು ಆರು ಸಾವಿರ ಎಕರೆ ನೀರಾವರಿ ಪ್ರದೇಶದ ಮೇಲೆ ದುಷ್ಪರಿಣಾಮ ಬೀರುವ, ಕಷ್ಟಪಟ್ಟು ಹರಿಸಿದ ತುಂಗಭದ್ರೆ, ಕಾಲುವೆಗಳನ್ನು ನುಂಗಿಹಾಕುವ, ಹಗರಿ ನದಿಯನ್ನೇ ಬತ್ತಿಸುವ ಈ ಯೋಜನೆ ಯಾವ ಪುರುಷಾರ್ಥಕ್ಕಾಗಿ? ಕೇವಲ ಜನಾರ್ದನರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲುಗಳ ತೆವಲಿಗಾಗಿ ಇಲ್ಲಿ ಏರ್‌ಪೋರ್ಟ್ ಏಳುತ್ತಿದೆ. ಚಾಗನೂರು, ಸಿರಿವಾರ, ತಗ್ಗಿನ ಬೂದಿಹಾಳಗಳ ರೈತರೊಂದಿಗೆ ರಾಜ್ಯದ ಪ್ರಗತಿಪರ ಸಂಘಟನೆಗಳು ನಿಲಬೇಕಿದೆ. ಈಗ ಮೇಧಾ ಪಾಟ್ಕರ್ ಕಣಕ್ಕಿಳಿ ಈ ಹೋರಾಟಕ್ಕೆ [illegible]

●ಪಿ.ಕೆ.ಮಲ್ಲನಗೌಡರ್

ರಾಜ್ಯದಲ್ಲಿ ಆಪರೇಷನ್ ಗ್ರೀನ್ ಹಂಟ್ ಶುರು.

ದೇಶದ ಛತ್ತೀಸ್‌ಗಢ, ಜಾರ್ಖಂಡ್, ಒರಿಸ್ಸಾ, ಮಹಾರಾಷ್ಟ್ರ ಹಾಗೂ ಇನ್ನಿತರ ರಾಜ್ಯಗಳನ್ನೊಳಗೊಂಡ ಮಧ್ಯ ಭಾರತದ ವಿಸ್ತಾರವಾದ ಭೂ ಪ್ರದೇಶದಲ್ಲಿ ಭದ್ರವಾಗಿ ನೆಲೆಯೂರಿರುವ ಮಾವೋವಾದಿ ನಕ್ಸಲರ ಶಸ್ತ್ರ ಚಳವಳಿಯನ್ನು ಬುಡಸಮೇತ ಕಿತ್ತುಹಾಕುವುದಕ್ಕೆ ಅತ್ತ ಕೇಂದ್ರ ಸರ್ಕಾರ ಆಪರೇಷನ್ ಗ್ರೀನ್ ಹಂಟ್ ಎಂಬ ಭೀಕರ ಸೈನಿಕ ಕಾರ್ಯಾಚರಣೆಯನ್ನು ನಡೆಸುತ್ತಿದ್ದರೆ ಇತ್ತ ಕರ್ನಾಟಕದ ಪೊಲೀಸರು ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳನ್ನೊಳಗೊಂಡ ಮಲೆನಾಡಿನಲ್ಲಿ ಹರಡಿಕೊಂಡಿರುವ ನಕ್ಸಲೀಯರನ್ನು ಸದೆಬಡಿಯುವುದಕ್ಕಾಗಿ ಬೃಹತ್ ಸೈನಿಕ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಅತ್ತ ಕೇಂದ್ರ ಸರ್ಕಾರ ಮಧ್ಯಭಾರತದಲ್ಲಿರುವ ಹದಿನೈದು–ಇಪ್ಪತ್ತು ಸಾವಿರದಷ್ಟು ಶಸ್ತ್ರ ನಕ್ಸಲೀಯರೊಂದಿಗೆ ಕಾದಾಡುವುದಕ್ಕೆ ಸುಮಾರು ಎರಡು ಲಕ್ಷದಷ್ಟು ಸೈನಿಕರನ್ನು ಕಳಿಸಿದ್ದರೆ ಇತ್ತ ಕರ್ನಾಟಕ ಸರ್ಕಾರ ಮಲೆನಾಡಿನಲ್ಲಿರುವ ಹದಿನೈದರಿಂದ ಇಪ್ಪತ್ತು ನಕ್ಸಲೀಯರನ್ನು (ಪೊಲೀಸರೇ ಬಿಡುಗಡೆ ಮಾಡಿರುವ ಪಟ್ಟಿಯ ಪ್ರಕಾರ) ಬೇಟೆಯಾಡುವುದಕ್ಕೆ ಒಂದೂವರೆ ಸಾವಿರ ಶಸ್ತ್ರಸಜ್ಜಿತ ಪೊಲೀಸರನ್ನು ಇಳಿಸಿದೆ. ಶೃಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯ ಕಿಗ್ಗಾ, ಕೆರೆಕಟ್ಟೆ, ದೇವಲಕೊಪ್ಪ ಮತ್ತು ಹಂಚಿಕೂಡಿಗೆ ಪ್ರದೇಶಗಳಲ್ಲಿ, ಜಯಪುರ ಠಾಣಾ ವ್ಯಾಪ್ತಿಯ ಮೆಣಸಿನಹಾಡ್ಯ, ಬಲಿಗೆ, ನಡುಗುಂದ ಮತ್ತು ಕಲ್ಲುಗುಡ್ಡೆ ಪ್ರದೇಶಗಳಲ್ಲಿ, ಕಳಸ ಠಾಣಾ ವ್ಯಾಪ್ತಿಯ ಮುಜೇಖಾನ್ ಮತ್ತು ಸಿಂಗಾರ ಪ್ರದೇಶಗಳಲ್ಲಿ ಹಾಗೂ ಕುದುರೆಮುಖ ಠಾಣಾ ವ್ಯಾಪ್ತಿಯ ಪ್ರದೇಶಗಳಲ್ಲಿ ಈಗಾಗಲೇ ಕಾರ್ಯಾಚರಣೆ ಪ್ರಾರಂಭವಾಗಿದ್ದು ಹಲವು ದಿನಗಳ ಕಾಲ ಮುಂದುವರೆಯಲಿದೆ.



ಕರ್ನಾಟಕದಲ್ಲಿ ನಕ್ಸಲೀಯರ ನಿಗ್ರಹಕ್ಕಾಗಿ ಇಷ್ಟೊಂದು ಬೃಹತ್ ಪ್ರಮಾಣದ ಪೊಲೀಸ್ ಕಾರ್ಯಾಚರಣೆಯನ್ನು ನಡೆಸುತ್ತಿರುವುದು ಇದೇ ಮೊದಲು. ಈಗ್ಗೆ ಕೆಲವು ವರ್ಷಗಳಿಂದ ನಕ್ಸಲೀಯರೊಂದಿಗೆ ಪೊಲೀಸರು ಗುಂಡಿನ ಚಕಮಕಿ ನಡೆಸುತ್ತಲೇ ಇದ್ದಾರೆ. ನಕ್ಸಲ್ ನಿಗ್ರಹಕ್ಕಾಗಿ ನಕ್ಸಲ್ ವಿರೋಧಿ ಪಡೆ ರಚನೆಯೂ ಆಗಿದೆ. ಆದರೆ ನಕ್ಸಲರು ಇರುವ ನಾಲ್ಕೂ ಜಿಲ್ಲೆಗಳ ಒಂದೂವರೆ ಸಾವಿರ ಪೊಲೀಸರು ಅತ್ಯಾಧುನಿಕ ಶಸ್ತ್ರಾಸ್ತ್ರಗಳೊಂದಿಗೆ, ಅತ್ಯಾಧುನಿಕ ತಂತ್ರಜ್ಞಾನ ಉಪಕರಣಗಳೊಂದಿಗೆ ಹಾಗೂ ಪರಸ್ಪರ ಸಮನ್ವಯದೊಂದಿಗೆ ಏಕಕಾಲದಲ್ಲಿ ನಕ್ಸಲ್ ಬೇಟೆಗಾಗಿ ಅರಣ್ಯಕ್ಕೆ ನುಗ್ಗುತ್ತಿರುವುದು ಇದೇ ಮೊದಲು. ಈ ಕಾರ್ಯಾಚರಣೆಯನ್ನು ಸಮನ್ವಯಗೊಳಿಸುವುದಕ್ಕಾಗಿ ಚಿಕ್ಕಮಗಳೂರು ಎಸ್ಪಿ ಎಂ.ಎನ್.ನಾಗರಾಜ್ ನೇತೃತ್ವದಲ್ಲಿ ಶೃಂಗೇರಿಯಲ್ಲಿ ಕಾರ್ಯಾಚರಣ ನಿಯಂತ್ರಣ ಕೇಂದ್ರವನ್ನು ತೆರೆಯಲಾಗಿದೆ. ನಕ್ಸಲ್ ಬೇಟೆಗಾಗಿ ಕಾಡಿನೊಳಗೆ ನುಗ್ಗುವ ಪೊಲೀಸರಿಗೆ ಗ್ಲೋಬಲ್ ಪ್ರೋಸೆಸಿಂಗ್ ಸಿಸ್ಟಂನಂಥ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳನ್ನು ಒದಗಿಸಲಾಗಿದೆ.

ಛತ್ತೀಸ್‌ಗಢದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯ ಪ್ರಾಥಮಿಕ ಪರಿಣಾಮಗಳು ನಿರೀಕ್ಷೆಯಂತೆ ಈಗಾಗಲೇ ಕಾಣತೊಡಗಿವೆ. ನಕ್ಸಲೀಯ ಬೆಂಬಲವಿರುವ ಹಳ್ಳಿಗಳಿಗೆ ನೂರಾರು ಸಂಖ್ಯೆಯಲ್ಲಿ ಶಸ್ತ್ರಸಜ್ಜಿತ ಸೈನಿಕರು ನುಗ್ಗುವುದು, ಆದಿವಾಸಿಗಳ ಮನೆಮಠಗಳನ್ನು ನಾಶಮಾಡುವುದು, ಆದಿವಾಸಿಗಳು ಸಾಕಿರುವ ಕುರಿ–ಕೋಳಿಗಳನ್ನು ಬಲವಂತವಾಗಿ ತೆಗೆದುಕೊಂಡು ಹೋಗಿ ತಿನ್ನುವುದು, ಆದಿವಾಸಿ ಮಹಿಳೆಯರ ಮೇಲೆ ಲೈಂಗಿಕವಾಗಿ ದೌರ್ಜನ್ಯ ನಡೆಸುವುದು, ನಕ್ಸಲೀಯರ ಬೆಂಬಲಿಗರೆಂದು ಅನುಮಾನವಿದ್ದವರನ್ನು ಹುಸಿ ಎನ್‌ಕೌಂಟರ್‌ಗಳಲ್ಲಿ ನಿರ್ದಾಕ್ಷಿಣ್ಯವಾಗಿ ಕೊಂದುಹಾಕುವುದು ಮುಂತಾದ ಅಮಾನವೀಯ ಕೃತ್ಯಗಳು ನಿರಂತರವಾಗಿ ನಡೆಯುತ್ತಲೇ ಇದೆ. ಹದಿನೈದು ದಿನಗಳ ಹಿಂದೆ ನಡೆದ ಘಟನೆಯೊಂದನ್ನೇ ನೋಡಿ. ಛತ್ತೀಸ್‌ಗಢದ ಆದಿವಾಸಿ ಹಳ್ಳಿಯೊಂದರ ಮೇಲೆ ದಾಳಿ ಮಾಡಿದ ಆರೆಸೇನಾ ಪಡೆಯ ಸೈನಿಕರು ಎನ್‌ಕೌಂಟರ್‌ನಲ್ಲಿ ನಕ್ಸಲ್ ಯುವಕ ಹತನಾಗಿದ್ದಾನೆ ಎಂದು ಪ್ರಕಟಿಸಿದರು.

ಆದರೆ ದಾಂತೆವಾಡದಲ್ಲಿ ವನವಾಸಿ ಸೇವಾಶ್ರಮವನ್ನು ನಡೆಸುತ್ತಿರುವ ಗಾಂಧಿವಾದಿ ಹಿಮಾಂಶು ಕುಮಾರ್ ಹೇಳುವಂತೆ ಮೊದಲನೆಯದಾಗಿ ಆ ಘಟನೆಯಲ್ಲಿ ಮಡಿದ ಯುವಕ ಒಬ್ಬ ಸಾಮಾನ್ಯ ಆದಿವಾಸಿಯಾಗಿದ್ದನೇ ಹೊರತು ನಕ್ಸಲೀಯನಾಗಿರಲಿಲ್ಲ, ಎರಡನೆಯದಾಗಿ, ಆತನನ್ನು ಚಾಕುವಿನಿಂದ ಇರಿದು ಕೊಲ್ಲಲಾಗಿತ್ತು, ಒಂದು ವೇಳೆ ಅದು ನಿಜವಾದ ಎನ್‌ಕೌಂಟರ್ ಆಗಿದ್ದರೆ ಆತ ಗುಂಡೇಟಿನಿಂದ ಸಾವನ್ನಪ್ಪಬೇಕಿತ್ತೇ ಹೊರತು ಚಾಕು ಇರಿತದಿಂದಲ್ಲ. ಇನ್ನೊಂದು ಘಟನೆಯಲ್ಲಿ ಆರೆಸೇನಾ ಪಡೆಗಳ ಸೈನಿಕರು ಆದಿವಾಸಿ ಯುವತಿಯೊಬ್ಬಳ ಮೇಲೆ ಎರಡು ದಿನಗಳ ಕಾಲ ಸಾಮೂಹಿಕವಾಗಿ ಅತ್ಯಾಚಾರವೆಸಗಿದರು. ಆಕೆ ಕೆಲವು ಸಾಮಾಜಿಕ ಕಾರ್ಯಕರ್ತರ ಸಹಾಯದೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಕೊಡಲು ಹೋದರೆ ಅದನ್ನು ಕನಿಷ್ಠ ಸ್ವೀಕರಿಸುವ ಗೋಜಿಗೂ ಪೊಲೀಸರು ಹೋಗಿಲ್ಲ. ಇವು ಛತ್ತೀಸ್‌ಗಢದಲ್ಲಿ ನಕ್ಸಲ್ ನಿಗ್ರಹದ ಹೆಸರಿನಲ್ಲಿ ಸೈನಿಕರು ಆದಿವಾಸಿಗಳ ಮೇಲೆ ನಿತ್ಯ ನಡೆಸುತ್ತಿರುವ ದೌರ್ಜನ್ಯಗಳ ಕೆಲವು ಉದಾಹರಣೆಗಳಷ್ಟೆ. ಸೈನಿಕ ಕಾರ್ಯಾಚರಣೆ ನಡೆಯುತ್ತಿರುವ ಪ್ರದೇಶಗಳಲ್ಲಿ ಮಾಧ್ಯಮಗಳನ್ನು ಬಿಡುತ್ತಿಲ್ಲವಾದ್ದರಿಂದ ಇಂಥ ಕ್ರೂರ ಕೃತ್ಯಗಳು ಹೊರ ಜಗತ್ತಿಗೆ ಗೊತ್ತಾಗುತ್ತಲೂ ಇಲ್ಲ. ಹೀಗಾಗಿ, ಪೊಲೀಸರು, ಸೈನಿಕರು ಆಡಿದ್ದೇ ಆ[...] ಎಂಬಂತಾಗಿ ಆದಿವಾಸಿಗಳ ಬದುಕು ಛಿದ್ರವಾಗುತ್ತಿದೆ.



ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪೊಲೀಸರು ನಡೆಸುತ್ತಿರುವ ಬೃಹತ್ ನಕ್ಸಲ್ ನಿಗ್ರಹ ಕಾರ್ಯಾಚರಣೆಯ ಫಲಿತಾಂಶಗಳು ಹೇಗಿರುತ್ತವೆಂಬುದನ್ನು ಊಹಿಸುವುದು ಕಷ್ಟವಲ್ಲ. ಪೊಲೀಸರೇ ಹೇಳಿರುವಂತೆ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಪ್ರತಿಯೊಂದು ಮನೆಯನ್ನೂ ಶೋಧಿಸುತ್ತಾರಂತೆ. ಛತ್ತೀಸ್‌ಗಢದಂತೆಯೇ ಇಲ್ಲಿಯೂ ಕೂಡ ಈ ಕಾರ್ಯಾಚರಣೆಗೆ ಪ್ರಧಾನವಾಗಿ ಬಲಿಯಾಗಲಿರುವವರು ಸಾಮಾನ್ಯ ಆದಿವಾಸಿಗಳೇ ಆಗಿರುತ್ತಾರೆ ಎಂಬುದರಲ್ಲಿ ಯಾವುದೇ ಅನುಮಾನವಿ[...] ಕೂಂಬಿಂಗ್ ಆಪರೇಶನ್ ನಡೆಯುವಷ್ಟು ದಿನ ಪೊಲೀಸರು ಠಾಣೆಗಳಿಗೆ ಹಿಂತಿರುಗದೇ ಕಾಡಿನಲ್ಲೇ ಉಳಿಯಲಿದ್ದಾರಾದ್ದರಿಂದ ಆ ದೀರ್ಘ ಕಾಲದಲ್ಲಿ ಅವ[...] ಎಲ್ಲಾ ಅಗತ್ಯಗಳಿಗಾಗಿ ಆದಿವಾಸಿಗಳನ್ನು ಹಿಂಸಿಸುತ್ತಾರಷ್ಟೆ. ಅಂತಿಮವಾಗಿ ಕಾಡಿನಲ್ಲಿ ಅವಿತಿರುವ ನಕ್ಸಲೀಯರನ್ನು ಬೇಟೆಯಾಡುವುದಕ್ಕೆ ಪೊಲೀಸರಿ[...] ಸಾಧ್ಯವಾಗದಿದ್ದರೆ 'ಇಡೀ ಕಾರ್ಯಾಚರಣೆ ವಿಫಲವಾಯಿತು' ಎಂಬ ಆರೋಪವನ್ನು ಹೊತ್ತುಕೊಳ್ಳಲು ಸಿದ್ಧವಿರದೇ ಪೊಲೀಸರು ನಕ್ಸಲರ ಬಗ್ಗೆ ಮಾಹಿತಿ ಕೊಡಿ ಎಂದು ಆದಿವಾಸಿಗಳನ್ನು ಹಿಂಸಿಸುತ್ತಾ[...] ಅದರಿಂದಲೂ ಹೆಚ್ಚೇನೂ ಪ್ರಯೋಜನವಾಗದಿದ್ದರೆ ಆದಿವಾ[...] ಯುವಕ–ಯುವತಿಯನ್ನೇ ಕೊಂದು 'ಎನ್‌ಕೌಂಟರ್‌ನ[...] ನಕ್ಸಲೀಯರ ಹತ್ಯೆ' ಎಂದು ಬಿಂಬಿಸಿದರೂ ಆಶ್ಚರ್ಯವಿ[...] ಈಗಾಗಲೇ ಮೆಣಸಿನಹಾಡ್ಯ ಎನ್‌ಕೌಂಟರ್‌ನಲ್ಲಿ ಅಮಾಯ[...]ರನ್ನು ಕೊಂದು ನಕ್ಸಲೀಯರ ಪಟ್ಟ ಕಟ್ಟಿದ್ದು ಇನ್ನೂ ಜನ[...] ಮನಸ್ಸಿನಿಂದ ಮರೆಯಾಗಿಲ್ಲ. ಈಗ ಅಂಥ ಮತ್ತಷ್ಟು ಕ[...] ಘಟನೆಗಳನ್ನು ನೋಡಬೇಕಾಗಿ ಬರುತ್ತದೆ.

ಹಾಗೆ ನೋಡಿದರೆ ಕಳೆದ ಆರು ತಿಂಗಳಿನಿಂ[...] ನಕ್ಸಲೀಯರು ಯಾವುದೇ ಹಿಂಸಾಚಾರದಲ್ಲಿ ತೊಡಗಿ[...] ಆದರೂ ಅವರ ಮೇಲೆ ಪೊಲೀಸರು ಮುಗಿಬಿದ್ದಿರುವು[...] ಅವರನ್ನು ಹಿಂಸಾಚಾರಕ್ಕೆ ಪ್ರಚೋದಿಸಿದಂತಾಗುತ್ತದೆಯ[...]

ಹಾಸನ: ಸಾಹಿತ್ಯ ಪರಿಷತ್ತಿನೊಳಗೊಂದು ಸುತ್ತು

ಕನ್ನಡ ಸಾಹಿತ್ಯ ಪರಿಷತ್ತಿಗೆ ಇಬ್ಬರು ಕೇಂದ್ರ ಅಧ್ಯಕ್ಷರನ್ನು ನೀಡಿದ ಕೀರ್ತಿ ಹಾಸನ ಜಿಲ್ಲೆಗೆ ಸಲ್ಲುತ್ತದೆ. ಎಚ್.ಬಿ. ಜ್ವಾಲನಯ್ಯ, ಡಾ. ನಲ್ಲೂರು ಪ್ರಸಾದ್ ಇಬ್ಬರೂ ಹಾಸನ ಜಿಲ್ಲೆಯವರು.



ಹಾಸನ ಕನ್ನಡ ಸಾಹಿತ್ಯ ಪರಿಷತ್ ಘಟಕ ಸ್ಥಾಪನೆಯಾಗಿ 44 ವರ್ಷಗಳು ತುಂಬಿದೆ. ಒಟ್ಟು 9 ಜನ ಅಧ್ಯಕ್ಷರು ಕಾರ್ಯ ನಿರ್ವಹಿಸಿದ್ದಾರೆ. ಇವರುಗಳ ಅವಧಿಯಲ್ಲಿ ಸಾಕಷ್ಟು ಕೆಲಸಗಳಾಗಿವೆ. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಚ್.ಬಿ. ಜ್ವಾಲನಯ್ಯನವರು ಪರಿಷತ್ತಿಗೆ ಶಾಶ್ವತವಾದ ನಿವೇಶನ ಮಾಡಿಕೊಟ್ಟರು. ಈ ನಿವೇಶನವು ಬೇರೆಯವರ ವಶವಾಗದಂತೆ ಎಚ್ಚರ ವಹಿಸಿ ಉಳಿಸಿಕೊಂಡು ಬಂದ ಕೀರ್ತಿ ನಂತರದ ಅಧ್ಯಕ್ಷರಿಗೆ ಸಲ್ಲುತ್ತದೆ.

ಒಟ್ಟು 9 ಜನ ಜಿಲ್ಲಾ ಅಧ್ಯಕ್ಷರುಗಳಲ್ಲಿ 3 ಜನ ಅಧ್ಯಕ್ಷರುಗಳು ಯುವಕರು. ಈ ಮೂರು ಜನ ಯುವಕರ ಅವಧಿಯಲ್ಲಿ ಪರಿಷತ್ತಿಗೆ ಆದ ಕೆಲಸ ಬೇರೆಯವರ ಅವಧಿಯಲ್ಲಿ ಆಗಿರುವುದು ಕಂಡುಬರುವುದಿಲ್ಲ. ಯುವಕರಾಗಿ ಪ್ರಪ್ರಥಮ ಬಾರಿಗೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರವೇಶಿಸಿದ 32 ವರ್ಷದ ಎ.ಜಿ. ಹರಿಗೋಪಾಲ್ ಪರಿಷತ್ತಿಗೆ ಭವನ ಕಟ್ಟುವ ಮೂಲಕ ಸಾಹಿತ್ಯದ ಕೆಲಸ ನಿರಂತರವಾಗಿ ನಡೆಯಲು ಸಹಕಾರಿಗಳಾದರು. ಹರಿಗೋಪಾಲ್‌ರವರ ಕನಸಿನ ಭವನ ಹಾಸನದಲ್ಲಿ ಸಾಹಿತ್ಯ ಚಟುವಟಿಕೆಗಳು ಎತ್ತರಕ್ಕೆ ಏರುತ್ತಿರುವಲ್ಲಿ ಇಂದು ಸಾಕ್ಷಿಯಾಗಿ ನಿಂತಿದೆ.


ನಂತರ ಬಂದ ಎಚ್.ಬಿ. ಮದನಗೌಡ ಶಾಶ್ವತ ಭವನದ ಪ್ರಯೋಜನ ಪಡೆದು ಇಡೀ ಜಿಲ್ಲೆಯೇ [...] ಜಿಲ್ಲೆಯಾದ್ಯಂತ ಸಾಹಿತ್ಯದ ಸಂಚಲನ [...] ಮಾಡಿದರು. ಇವರ ಅವಧಿಯಲ್ಲಿ ಪರಿಷತ್ತು ಜಿಲ್ಲೆಯಾದ್ಯಂತ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಕೊಂಡಿತ್ತು. ಹಾಸನ ಸಾಹಿತ್ಯ ಪರಿಷತ್ತಿನ ಕಾರ್ಯವನ್ನು ಕಂಡು ಹೊರ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಕಾರ್ಯದರ್ಶಿಗಳು ಜಿಲ್ಲೆಗೆ ಭೇಟಿ ನೀಡಿ ಅಧ್ಯಯನ ಮಾಡಿ ಹೋಗಿದ್ದಾರೆ. ಇದು ಹಾಸನ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಹೆಗ್ಗಳಿಕೆ.

ಪ್ರಾಚೀನವಾದ ಹಲ್ಮಿಡಿ ಶಾಸನ ದೊರೆತ ಹಲ್ಮಿಡಿ ಗ್ರಾಮವನ್ನು ಗುರುತಿಸಿ ಅಲ್ಲಿ ಶಾಸನದ ಪ್ರತಿಕೃತಿ ಮತ್ತು ಮಂಟಪವನ್ನು ನಿರ್ಮಿಸಿದ್ದು, ರಸ್ತೆ ಇಲ್ಲದೆ ಕುಗ್ರಾಮವಾಗಿದ್ದ ಹಲ್ಮಿಡಿಗೆ ಮೂಲಭೂತ ಸೌಲಭ್ಯ ಕಲ್ಪಿಸಿ ಮಾದರಿ ಗ್ರಾಮವಾಗಿಸಿ, ಅದನ್ನು ಪ್ರವಾಸಿತಾಣವಾಗಿಸಿದ ಕೀರ್ತಿಗೆ ಹಾಸನ ಸಾಹಿತ್ಯ ಪರಿಷತ್ ಪಾತ್ರವಾಯಿತು.

ಈ ಭವನದಲ್ಲಿ ಸುಮಾರು 250 ಜನ ಕೂರಲು ಆಡಿಟೋರಿಯಂ ಅಧ್ಯಕ್ಷರ ಕಾರ್ಯಾಲಯ, ಕಾರ್ಯದರ್ಶಿಗಳ ಕಾರ್ಯಾಲಯ ಹೀಗೆ ಪ್ರತ್ಯೇಕವಾದ ಕೊಠಡಿಗಳಿವೆ.

ಭವನದಲ್ಲಿ ನಾಡಿದ ಖ್ಯಾತ ಜನಪದ ತಜ್ಞ ಡಾ. ಎಸ್.ಕೆ. ಕರೀಂಖಾನ್‌ರವರ ಹೆಸರಿನಲ್ಲಿ ಗ್ರಂಥಾಲಯ ಪ್ರಾರಂಭಿಸಲಾಯಿತು. ಸಂವಾದಗಳು, ಗೋಷ್ಠಿಗಳು, ಚರ್ಚೆಗಳು, ಸಾಹಿತ್ಯ ಸಮ್ಮೇಳನಗಳು ತಾಲ್ಲೂಕ್ ಹೋಬಳಿ ಮಟ್ಟದಲ್ಲಿ ಹಬ್ಬಗಳಂತೆ ಆಚರಿಸಲ್ಪಟ್ಟವು. ಭವನದ ಉದ್ಯಾನದಲ್ಲಿ ಕುಳಿತುಕೊಳ್ಳಲು ಕುರ್ಚಿಗಳ ವ್ಯವಸ್ಥೆ ಮಾಡಲಾಯಿತು. ಜಿಲ್ಲೆಯ ಸಾಹಿತ್ಯ ಚಟುವಟಿಕೆಗಳ ವಾತಾವರಣ ರಾಜ್ಯಕ್ಕೆ ಮಾದರಿಯಾಯಿತು. ಆದ್ದರಿಂದ ಹೊಸಬರು ಬರೆಯಲು ಪ್ರಾರಂಭವಾಯಿತು. ಹೊಸಬರು ಬರೆದು ಇಂದು ಬಹು ಎತ್ತರಕ್ಕೆ ಬೆಳೆಯುತ್ತ ನಾಡಿನ ತುಂಬ ಹೆಸರು ಮಾಡಿದ್ದಾರೆ.

ಮದನ್‌ಗೌಡರ ನಂತರ ಬಂದ ಅಧ್ಯಕ್ಷರ ಅವಧಿಯಲ್ಲಿ ಹಿಂದಿನ ಕಾರ್ಯಕ್ರಮಗಳನ್ನು ಮುಂದುವರಿಸಲು ಸಾಧ್ಯವಾಗದೇ ಇದ್ದುದರಿಂದ ಸಾಹಿತ್ಯದ ವಾತಾವರಣ ಸ್ವಲ್ಪ ಮಂಕಾಯಿತು. ಆದರೂ ಇವರ ಅವಧಿಯಲ್ಲಿ ಶಾಶ್ವತ ಕೆಲಸಗಳಾದ ಹೊಯ್ಸಳ ಹೆಬ್ಬಾಗಿಲು, ಹೊಯ್ಸಳ ಲಾಂಛನ, ಸಿಂಹಾಸನಪುರಿ ಬಯಲುರಂಗಮಂದಿರಗಳು ನಿರ್ಮಾಣಗೊಂಡವು. ಸಭಾಂಗಣಕ್ಕೆ ಕುರ್ಚಿಗಳು ಧ್ವನಿವರ್ಧಕದ ವ್ಯವಸ್ಥೆಯನ್ನು ಅಧ್ಯಕ್ಷರಾದ ಎಚ್.ಬಿ. ರಮೇಶ್ ಕಲ್ಪಿಸಿಕೊಟ್ಟರು.



2008 ರ ಅಕ್ಟೋಬರ್‌ನಲ್ಲಿ ಹೊಸದಾಗಿ ಆಯ್ಕೆಯಾದ ಉದಯರವಿಯವರು ಒಂದು ವರ್ಷಗಳ ಸೇವೆಯನ್ನು ಪೂರೈಸಿದ್ದಾರೆ. ಇವರು ಮದನ್‌ಗೌಡರ ಅವಧಿಯಲ್ಲಿ ಕಾರ್ಯದರ್ಶಿಯಾಗಿದ್ದವರು, ಹಾಸನದ ಸಾಹಿತ್ಯ ವಾತಾವರಣದ ಅರಿವಿರುವವರು. ಇವರಿಂದ ಸಾಹಿತಿಗಳು, ಸಾರ್ವಜನಿಕರು ಹೆಚ್ಚಿನದನ್ನು ನಿರೀಕ್ಷಿಸುತ್ತಾರೆ. ಆದ್ದರಿಂದ ಉದಯರವಿಯವರು ಹಿಂದಿನ ಅಧ್ಯಕ್ಷರು ಮಾಡಿದ ಕೆಲಸದ ಮಟ್ಟಕ್ಕೆ ಏರದಿದ್ದರೂ ಸಮಾಧಾನ ತರುವಂತ ಕೆಲಸ ಮಾಡುತ್ತಿದ್ದಾರೆ. ಆದರೂ ಮದನಗೌಡರ ಗರಡಿಯಲ್ಲಿ ಬೆಳೆದ ಉದಯರವಿಯವರ ಕೆಲಸ ಸಾಲದು ಎಂಬುದು ಜನರ ಅಭಿಪ್ರಾಯ.

ಉದಯರವಿ ತಮ್ಮ ಅವಧಿಯಲ್ಲಿ ತೀರ ಗಂಭೀರವಾದ ವಿಚಾರಗಳ ಕಾರ್ಯಕ್ರಮ ರೂಪಿಸಿದ್ದಾರೆ.

1. ಗಾಂಧಿ ಚಿಂತನೆ
2. ಅಧ್ಯಯನ ವೃತ್ತ

ಈ ಎರಡು ಕಾರ್ಯಕ್ರಮಗಳು ಪ್ರತಿವಾರ ನಡೆಯುತ್ತವೆ. ಗಾಂಧಿ ಚಿಂತನೆಯಲ್ಲಿ ಗಾಂಧಿ ಮ[...] ಗಾಂಧಿ ವಿಚಾರಗಳ ಕುರಿತ ಗೋಷ್ಠಿ ಸಂವಾದಗ[...] ನಡೆಯುತ್ತಿದೆ. ನಾಡಿನ ಪ್ರತಿಷ್ಠಿತ ಚಿಂತಕರು ಭಾಗವಹಿ[...] ತಮ್ಮ ವಾದ ಮಂಡಿಸಿದ್ದಾರೆ.

ಅಧ್ಯಯನ ವೃತ್ತ ಕಾರ್ಯಕ್ರಮ ಪ್ರತಿ ಮಂಗಳವ[...] ನಡೆಯುತ್ತದೆ. ಇದರಲ್ಲಿ ಲೋಹಿಯಾ, ಜೆ.ಪಿ., ಮಾರ್ಕ್[...] ಅಂಬೇಡ್ಕರ್ ಹಾಗೂ ಇತರೆ ದಾರ್ಶನಿಕರ ಕುರಿತ ಚರ್ಚೆ[...] ನಡೆಯುತ್ತಿವೆ. ಆದರೆ ಇವು ಜನರನ್ನು ತಲುಪು[...] ಸಾಧ್ಯವಾಗುತ್ತಿಲ್ಲ.


ಅಧ್ಯಕ್ಷರಾದವರಿಗೆ ಒಳ್ಳೆಯ ಕಾರ್ಯಕ್ರಮಗಳ[...] ರೂಪಿಸುವ ಸೂಕ್ಷ್ಮತೆ ಇದ್ದರಷ್ಟೇ ಸಾಲದು. [...] ಕಾರ್ಯಕ್ರಮಗಳು ಸಾರ್ವಜನಿಕರನ್ನು, ಸಹೃದಯರ[...] ತಲುಪುವಂತೆ ಮಾಡುವ ಜಾಣ್ಮೆಯೂ ಇರಬೇ[...] ಇಲ್ಲದಿದ್ದರೆ ಎಲ್ಲ ಕಾರ್ಯಕ್ರಮಗಳು ವ್ಯರ್ಥ ಎನ್ನುವು[...] ಜನರ ಅಭಿಪ್ರಾಯವಾಗಿದೆ.

ಉದಯರವಿಯವರ ಕಾಲದಲ್ಲಿ ಮಕ್ಕಳ ಸಾಹಿತ್ಯಮ[...] ಮೆಚ್ಚುಗೆ ಪಡೆಯಿತು. ಆದರೆ ಇವರು ಜಿ[...] ಮಾಡಬೇಕಾಗಿರುವ ಕಾರ್ಯಗಳು ಇನ್ನೂ ಇವೆ.

1. ಪರಿಷತ್ ಭವನದ ಉದ್ಯಾನದಲ್ಲಿ ರಾಷ್ಟ್[...] ಕುವೆಂಪುರವರ ಪ್ರತಿಮೆ ಸ್ಥಾಪನೆ
2. ಶಾಶ್ವತ ಪುಸ್ತಕ ಮಾರಾಟ ಮಳಿಗೆ
3. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳ[...]
4. ಅಖಿಲ ಭಾರತ ಕನ್ನಡ ಜೈನ ಸಾಹಿತ್ಯ ಸಮ್ಮೇ[...]
5. ಮಹಿಳಾ ಸಾಹಿತ್ಯ ಸಮ್ಮೇಳನ
6. ಜಿಲ್ಲೆಯ ಎಲ್ಲಾ ಲೇಖಕರ ಪರಿಚಯಾತ್ಮಕ [...]

ಈ ಕಾರ್ಯಗಳನ್ನು ಮಾಡುವುದರ ಜೊ[...] ಗ್ರಾಮಸಿರಿ ಕಾರ್ಯಕ್ರಮದ ಮೂಲಕ ಹೋ[...] ಮಟ್ಟದಲ್ಲಿ ಸಾಹಿತ್ಯ ಚಟುವಟಿಕೆಗಳು ನಡೆಯು[...] ಮಾಡಬೇಕಾಗಿದೆ. ಸಾಹಿತ್ಯ ಪರಿಷತ್‌ನಿಂದ ದ[...] ಸರಿಯುತ್ತಿರುವ ಸಹೃದಯ ಸಾಹಿತಿಗಳನ್ನು ಪರಿ[...] ಕಡೆ ಕರೆದು ತರಬೇಕಾಗಿದೆ.

...ಂದೇ ಮಾತರಂ : ...ಾಷ್ಟ್ರಪ್ರೇಮಕ್ಕೂ ದುರ್ಗಾ ...ೂಜೆಗೂ ಯಾವ ಸಂಬಂಧ?



...ತ್ತೀಚೆಗೆ ನಡೆದ ಜಂಇಯ್ಯತುಲ್ ಉಲಮಾ ಎ ...ನ ಮೂವತ್ತನೇ ಸಾರ್ವಜನಿಕ ಸಮ್ಮೇಳನದಲ್ಲಿ ... ಮಾತರಂ' ಗೀತೆಯ ಕುರಿತು ಅಂಗೀಕರಿಸಿದ ...ಯದ ಹೆಸರಲ್ಲಿ ಸಂಘ ಪರಿವಾರ ಮತ್ತು ಅದರ ...ವಲ್ಲಿರುವ ಮಾಧ್ಯಮಗಳು ಎಂದಿನಂತೆ ಮುಸ್ಲಿಮರ ...ೇಮವನ್ನು ಪ್ರಶ್ನಿಸಿ ಗೀತೆಯನ್ನು ವಿರೋಧಿಸುವವರು ...ಂದ ತೊಲಗಲಿ ಎಂದು ಅಬ್ಬರಿಸಲಾರಂಭಿಸಿವೆ. ...ದಲ್ಲಿ ವಂದೇ ಮಾತರಂ ಗೀತೆಯು ಮುಸ್ಲಿಮರ ...ಕ ನಂಬಿಕೆಗಳಿಗೆ ವಿರುದ್ಧವಾದ ಒಂದು ಬಹು ...ಾಧಕ ಪದ್ಧತಿಯಾಗಿರುವುದರಿಂದ ಈ ವಿಚಾರದಲ್ಲಿ ...ಕ ವಿದ್ವಾಂಸರು ಈಗಾಗಲೆ ತಮ್ಮ ನಿಲುವನ್ನು ...ಡಿಸಿದ್ದಾರೆ.

...ೌಲಾನಾ ಅಬ್ದುಲ್‌ಬಾರಿ ಫರಂಗಿ ಮೆಹಲ್‌ರವರ ...ದಲ್ಲಿ ಅಸ್ತಿತ್ವಕ್ಕೆ ಬಂದ ಜಂಇಯ್ಯತುಲ್ ಉಲಮಾ ...ಂದ್ ಸ್ವಾತಂತ್ರ್ಯ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದ ...ಟನೆಯಾಗಿತ್ತು. ಮೌಲಾನಾ ಅಬ್ದುಲ್ ಕಲಾಮ್ ...ದ್, ಹಿಫ್ಜುಜರ್‌ರಹ್ಮಾನ್‌ರಂತಹ ಕಾಂಗ್ರೆಸ್‌ನ ರಾಷ್ಟ್ರೀಯ ...ಕರು ಈ ಸಂಘಟನೆಯೊಂದಿಗೆ ನಿಕಟ ಸಂಬಂಧ ...ಕೊಂಡಿದ್ದರು. ಮುಸ್ಲಿಮ್‌ಲೀಗ್‌ನ ದ್ವಿರಾಷ್ಟ್ರ ಸಿದ್ಧಾಂತ ...ನ್ನು ಶಿಖಾಂತ ವಿರೋಧಿಸಿದ ಸಂಘಟನೆಯೆಂಬ ...ಯೂ ಅದಕ್ಕಿತ್ತು.

...ಂದೇ ಮಾತರಂ' ಗೀತೆಗೆ ಬಹಳ ಹಿಂದಿನಿಂದಲೂ ...ಮರ ಆಕ್ಷೇಪವಿದೆ. 1937ರಲ್ಲಿ ನೆಹರೂರವರ ...ತೆಯಲ್ಲಿ ಕೊಲ್ಕತ್ತಾದಲ್ಲಿ ಸೇರಿದ ಎ.ಐ.ಸಿ.ಸಿ ...ಶನದಲ್ಲಿ ವಂದೇ ಮಾತರಂನ ಕೆಲವು ಭಾಗಗಳ ...ಮುಸ್ಲಿಮರಿಗಿರುವ ಆಕ್ಷೇಪಗಳನ್ನು ಒಪ್ಪಿ ನಿರ್ಣಯ ...ಅಂಗೀಕರಿಸಲಾಗಿತ್ತು. ರಾಷ್ಟ್ರಗೀತೆ ಎಂಬ ನೆಲೆಯಲ್ಲಿ ...ರುವ ಪ್ರಕೃತಿ ವರ್ಣನೆಯ ಆರಂಭದ ಚರಣಗಳನ್ನು ...ರೆ ಮಾತ್ರ ಸಾಕೆಂದು ನಿರ್ಣಯದಲ್ಲಿ ಹೇಳಲಾಗಿತ್ತು.

...ಜೆಪಿ ಆಳುತ್ತಿದ್ದ ಕೆಲವು ರಾಜ್ಯಗಳಲ್ಲಿ 'ವಂದೇ ...ರಂ' ಅನ್ನು ಕಡ್ಡಾಯಗೊಳಿಸಿದಾಗ 2006ರಲ್ಲೇ ...ಮ್ಮತುಲ್ ಉಲಮಾದ ವಿಶ್ವವಿದ್ಯಾನಿಲಯವಾದ ...ಬಂದ್ ಈ ಕುರಿತು ವ್ಯಾಪಕ ಪ್ರತಿಭಟನೆ ...ಸಿತ್ತು. 'ವಂದೇ ಮಾತರಂ' ಅನ್ನು ಮುಂದಿಟ್ಟು ... ಆ ಸಂಘಟನೆಯ ದೇಶಪ್ರೇಮವನ್ನು ಶಂಕಿಸುವ ...ಮತ್ತು ಬೆತ್ತಲೆ ಜಗತ್ತಿನ ಭೀಷ್ಮರು ಆತ್ಮಹತ್ಯಾ ...ರ್‌ಗಳಾಗಿ ನಿರಪರಾಧಿಗಳ ಮಾರಣಹೋಮ ... ಭಯೋತ್ಪಾದನೆ ವಿರುದ್ಧ ಅದು ನೀಡಿದ ಫತ್ವಾವನ್ನು ...ಮರೆತಿರುವುದು ಅವರ ಹಿತಾಸಕ್ತಿಗೆ ಪೂರಕವಾದ ...ಚನೆಯಾಗಿದೆ ಎನ್ನಲಡ್ಡಿಯಿಲ್ಲ.

...ಮುಸ್ಲಿಮ್ ನಾಯಕರು ಹಾಗೂ ಬುದ್ಧಿಜೀವಿಗಳು ... ಚಳವಳಿಗಾಗಿ ಮಾಡಿದ ಅವಿರತ ಶ್ರಮವನ್ನು ...ದೆ ಬ್ರಿಟಿಷರ ದಲ್ಲಾಲಿಗಳಾದವರ ಪರಂಪರೆಯಲ್ಲಿ ... ಕೆಲವು ಫ್ಯಾಸಿಸ್ಟ್ ಧೋರಣೆಯ ವ್ಯಕ್ತಿಗಳು ...ರ ಬಗ್ಗೆ ಕಪೋಲಕಲ್ಪಿತ ಕಟ್ಟುಕಥೆಗಳನ್ನು ಕಟ್ಟಿ ...-ಮುಸ್ಲಿಮ್ ಸಮಾಜದಲ್ಲಿ ಬಿರುಕನ್ನುಂಟು ...ತ್ತಿದ್ದಾರೆ. 1885ರಲ್ಲಿ ಸ್ಥಾಪನೆಗೊಂಡ ಭಾರತ ...ಯ ಕಾಂಗ್ರೆಸ್‌ನಲ್ಲಿ ಒಂದುಗೂಡಿ ಅನೇಕ ...ರು ಭಾರತದ ವಿಮೋಚನೆಗಾಗಿ ಹೋರಾಡಿ ...ದುರಣವಪ್ಪಿದ್ದಾರೆ. ಗಡಿನಾಡಗಾಂಧಿ ಎಂದೇ ...ರಾದ 'ಭಾರತ ರತ್ನ' ಖಾನ್ ಅಬ್ದುಲ್ ಗಫಾರ್ ... ಮೌಲಾನಾ ಅಬುಲ್ ಕಲಾಮ್ ಆಜಾದ್, ...ದ್ ತಯ್ಯಬ್‌ಜೀ, ಡಾ! ಖಾನ್, ಸರ್ ಸೈಯದ್ ..., ಡಾ!! ಅನ್ಸಾರಿ, ಹಸ್ರತ್ ಮೋಹಾನಿ, ಶೈಖ್ ... ಮೌಲಾನಾ ಮುಹಮ್ಮದ್ ಅಲಿ, ಶೌಕತ್ ...ಮೌಲಾನಾ ರಶೀದ್ ಅಹ್ಮದ್ ಗಂಗೋಹಿ, ಸೈಫು ...ಚ್ಲೂ ಮತ್ತು ಅಲಿಘರ್‌ನ ಮೌಲಾನಾ ಉಬೈದುಲ್ಲಾ ...ಾದವರು ಕೆಲವು ಹೆಸರುಗಳು ಮಾತ್ರ. ... ತೊಡಗಿಕೊಂಡ ಎಲ್ಲರನ್ನೂ ಹೆಸರಿಸುವುದು ಕಷ್ಟಸಾಧ್ಯವಾದ ಮಾತು. 'ವಂದೇ ಮಾತರಂ' ಗೀತೆಯನ್ನು ಹೇತುವಾಗಿಟ್ಟುಕೊಂಡು ಅದನ್ನು ವಿರೋಧಿಸುವವರಿಗೆ ದೇಶದಲ್ಲಿ ಉಳಿಯುವ ಹಕ್ಕಿಲ್ಲ ಎಂದು ಫರ್ಮಾನು ಹೊರಡಿಸುವವರು ಮುಸ್ಲಿಮರ ತ್ಯಾಗಬಲಿದಾನಗಳ ಪ್ರಸ್ತಾಪವಿಲ್ಲದೆ ಭಾರತದ ಸ್ವಾತಂತ್ರ್ಯದ ಇತಿಹಾಸವಿಲ್ಲ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

'ವಂದೇ ಮಾತರಂ' ಎಂಬ ಗೀತೆಯು ಖ್ಯಾತ ಬಂಗಾಳಿ ಸಾಹಿತಿ ಬಂಕಿಮ್‌ಚಂದ್ರ ಚಟರ್ಜಿಯವರ 'ಆನಂದ ಮಠ' ಕಾದಂಬರಿಯಲ್ಲಿ ಬರುತ್ತದೆ. ವಸ್ತುತಃ ಅದು ದುರ್ಗಾ ದೇವಿಯನ್ನು ಸ್ತುತಿಸುವ ಗೀತೆಯಾಗಿದೆ. ಸುಜಲೆ, ಸುಫಲೆ, ಸಸ್ಯಶ್ಯಾಮಲೆ ಮತ್ತು ಕೋಮಲೆಯಾದ ಭಾರತಾಂಬೆಯನ್ನು ಮಾತ್ರ ಅದರಲ್ಲಿ ಸ್ತುತಿಸಲಾಗಿದೆ. ಸಹಜವಾಗಿ ಮೂರ್ತಿ ಪೂಜೆ ಮಾಡದ ಮುಸ್ಲಿಮರಿಗೆ ಅದು ಅಂಗೀಕಾರಾರ್ಹ ವಾಗಲಾರದು.

ಬಂಕಿಮ್ ಚಂದ್ರ ಚಟರ್ಜಿಯವರು 1882ರಲ್ಲಿ 'ಆನಂದ ಮಠ' ಕಾದಂಬರಿಯನ್ನು ಬರೆದರು. ಮುಸ್ಲಿಮ್ ವಿರೋಧವೇ ಅದರ ವಿಷಯವಾಗಿತ್ತು. 1714ರಲ್ಲಿ ಮುಸ್ಲಿಮ್ ಆಳ್ವಿಕೆಯಲ್ಲಿದ್ದ ಬಂಗಾಳವೇ ಅದರ ಹಿನ್ನೆಲೆಯಾಗಿದೆ. ಕಥಾ ನಾಯಕರಲ್ಲೊಬ್ಬನಾದ ಭವಾನಂದನು, ಮುಸ್ಲಿಮ್ ಸರಕಾರದ ವಿರುದ್ಧ ಸಶಸ್ತ್ರ ಹೋರಾಟಕ್ಕಾಗಿ ಗುಪ್ತ ಸೇನೆಯನ್ನು ರಚಿಸುತ್ತಾನೆ. ತನ್ನ ಮಿತ್ರ ಮಹೇಂದ್ರನಿಗೆ ಭವಾನಂದ್ 'ವಂದೇ ಮಾತರಂ' ಗೀತೆಯನ್ನು



ಹೇಳಿಕೊಡುತ್ತಾನೆ. ಆದರೆ ಮಹೇಂದ್ರ "ನಮ್ಮ ಧರ್ಮವನ್ನು ಕಳೆದುಕೊಂಡಿ ದ್ದೇವೆ. ನಮ್ಮ ಗೌರವವನ್ನು ಕಳೆದುಕೊಂಡಿದ್ದೇವೆ. ನಮ್ಮ ಪ್ರಾಣವೇ ಅಪಾಯದಲ್ಲಿದೆ. ನೀರಾಸರನ್ನು (ಮುಸ್ಲಿಮರ ವಿರುದ್ಧ ಬಳಸುತ್ತಿದ್ದ ಕೆಟ್ಟ ಪದ) ಉಚ್ಚಾಟಿಸದಿದ್ದರೆ ಇಲ್ಲಿ ಹಿಂದೂ ಧರ್ಮ ಉಳಿಯಲಾರದು. ನೀವು ಈ ಕಾರ್ಯವನ್ನು ಒಬ್ಬರೇ ನಿರ್ವಹಿಸುವಿರಾ?'' ಎಂದು ಪ್ರಶ್ನಿಸುತ್ತಾನೆ.

ಅದಕ್ಕೆ ಉತ್ತರವಾಗಿ ಭವಾನಂದನು ''ನೀವು ಇಲ್ಲಿ ದುರ್ಬಲರೆಂದು ಯಾರು ಹೇಳಿಯಾರು? ಏಳು ಕೋಟಿ ಕೈಗಳಲ್ಲಿ ಖಡ್ಗವು ಝಳಪಿಸುವಾಗ, ಎಪ್ಪತ್ತು ದಶಲಕ್ಷ ಕಂಠಗಳಿಂದ ನಿಮ್ಮ ಹೆಸರು ಭಯಾನಕವಾಗಿ ತೀರಗಳಿಗೆ ಅಪ್ಪಳಿಸುವುದಿಲ್ಲವೇ? ಈ ಮಾತೆಯ ಪ್ರತಿಷ್ಠೆ ಮರಳಿ ಸ್ಥಾಪಿತವಾಗುವುದಿಲ್ಲವೇ?'' ಎಂದು ಹೇಳುತ್ತಾನೆ.

ಭವಾನಂದನು ಆತನನ್ನು 'ಆನಂದ ಮಠ' ದೇವಾಲಯಕ್ಕೆ ಕರೆದೊಯ್ಯುತ್ತಾನೆ. ಅಲ್ಲಿನ ಪೂಜಾರಿ ಸ್ವಾಮೀ ಸತ್ಯಾನಂದನು, ಮಹೇಂದ್ರನನ್ನು ಮಠದ ಗರ್ಭಗುಡಿಗೆ ಕರೆದೊಯ್ಯುತ್ತಾನೆ. ಆ ಗುಡಿಯಲ್ಲಿ ನಿರ್ಲಕ್ಷಿತ ಸ್ಥಿತಿಯಲ್ಲಿರುವ ನಗ್ನವಾದ ಕಾಳಿಯ ವಿಗ್ರಹವಿರುತ್ತದೆ. ಅದನ್ನು ತೋರಿಸಿ ''ಇದು ನಮ್ಮ ತಾಯ್ನಾಡಿನ ಈಗಿನ ಅವಸ್ಥೆ'' ಎನ್ನುತ್ತಾನೆ ಪೂಜಾರಿ. ಆ ಬಳಿಕ ಸ್ವಾಮಿಯು ಮಹೇಂದ್ರನನ್ನು ದುರ್ಗೆಯ ವಿಗ್ರಹವಿರುವ ಬೇರೊಂದು ಕೋಣೆಗೆ ಕರೆದೊಯ್ಯುತ್ತಾನೆ. ಅಲ್ಲಿ ದುರ್ಗೆಗೆ ಹತ್ತು ಕೈಗಳಿರುತ್ತವೆ. ಅದರತ್ತ ಬೆಟ್ಟು ಮಾಡಿ ಪೂಜಾರಿ ''ವೈರಿಗಳನ್ನು ಉಚ್ಚಾಟಿಸಿದರೆ ನಮ್ಮ ಮಾತೆ ಹೀಗಿರುತ್ತಾಳೆ'' ಎನ್ನುತ್ತಾನೆ. ಎಲ್ಲ ವಿಗ್ರಹಗಳ ಮುಂದೆ ಸತ್ಯಾನಂದನು ವಂದೇ ಮಾತರಂ ಗಟ್ಟಿಯಾಗಿ ಆಲಾಪಿಸುತ್ತಾನೆ.

ಅನಂತರ ಕಾದಂಬರಿಯಲ್ಲಿ ಮುಸ್ಲಿಮರ ವಿರುದ್ಧ ನಡೆದ ಭೀಕರ ಹೋರಾಟವನ್ನು ವಿವರಿಸಲಾಗಿದೆ. ಹಿಂದೂಗಳು ಸಾಮೂಹಿಕವಾಗಿ ಮುಸ್ಲಿಮರನ್ನು ಕೊಂದ ಮತ್ತು ದೋಚಿದ ಘಟನೆಗಳನ್ನು ಬಹಳ ಭಾವಾವೇಶದಿಂದ ಚಟರ್ಜಿ ವಿವರಿಸುತ್ತಾರೆ. ವಿಷ್ಣು ಭಕ್ತರನ್ನು ಒಂದುಗೂಡಿಸಿ 'ನೀಚ' ಮುಸ್ಲಿಮರನ್ನು ಸಂಪೂರ್ಣವಾಗಿ ಹೊಡೆದೋಡಿಸಲಾಗುತ್ತದೆ. ತಾಯಿ ನಾಡಿನ ಮಕ್ಕಳೇ ತಾಯಿ ನಾಡಿನ ಹಕ್ಕುದಾರರೆಂಬ ಘೋಷಣೆಗಳನ್ನು ಕೂಗುತ್ತಾ 'ವಂದೇ ಮಾತರಂ' ಹಾಡುತ್ತಾ ಅವರು ಕೊಲೆ ಸುಲಿಗೆಗಳನ್ನು ನಡೆಸುತ್ತಾರೆ. ವಿಜಯೋನ್ಮಾದದಿಂದ ಕಾಳಿಯ ವಿಗ್ರಹದ ಮುಂದೆ ನರ್ತಿಸುತ್ತಾರೆ.

ಆನಂದ ಮಠದ ಕೊನೆಯ ಅಧ್ಯಾಯದ ಕೊನೆಯ ಭಾಗ ಹೆಚ್ಚು ಗಮನಾರ್ಹವಾಗಿದೆ. ಕಾದಂಬರಿಯು ಬ್ರಿಟಿಷರ ಪರವಾಗಿದ್ದು ಆ ಕಾರಣದಿಂದಲೇ ರಾಷ್ಟ್ರ ವಿರೋಧಿಯೆಂದು ಅದರಿಂದ ವ್ಯಕ್ತವಾಗುತ್ತದೆ. ದೇವಾಲಯದ ಪೂಜಾರಿ ಸ್ವಾಮೀ ಸತ್ಯಾನಂದನ ಸಭೆಯೊಂದರಲ್ಲಿ ಒಬ್ಬಾತ ಕೇಳುತ್ತಾನೆ: "ನಾವು ಮುಸ್ಲಿಮರನ್ನು ಉಚ್ಚಾಟಿಸಿದೆವು. ಆದರೂ ಇಲ್ಲಿ ಹಿಂದೂ ರಾಷ್ಟ್ರ ಸ್ಥಾಪನೆಯಾಗಲಿಲ್ಲ, ಇಲ್ಲಿ ರಾಧಾ ಮಾಧವ ಮಂದಿರ ಕಟ್ಟುವ ಸುದಿನ ಬಂದೀತೇ? ವಂದೇ ಮಾತರಂ!''

''ಕೊಲ್ಕತ್ತಾ ಬ್ರಿಟಿಷರ ಆಳ್ವಿಕೆಯಲ್ಲಿದೆಯಲ್ಲವೇ? ಆದ್ದರಿಂದ ಇನ್ನು ಇಲ್ಲಿ ಯಾರೂ ನಮಗೆ ವೈರಿಗಳಿಲ್ಲ, ಬ್ರಿಟಿಷರು ನಮ್ಮ ಮಿತ್ರರು, ಅವರು ಸ್ವತಃ ಅಧಿಕಾರ ವನ್ನು ವಿಷ್ಣುವಿಗೆ ಒಪ್ಪಿಸುತ್ತಾರೆ'' ಎಂದು ಸ್ವಾಮೀ ಸತ್ಯಾನಂದ ಆತನನ್ನು ಸಮಾಧಾನಪಡಿಸುತ್ತಾನೆ. ಅಲ್ಲಿಗೆ 'ಆನಂದ ಮಠ' ಮುಕ್ತಾಯವಾಗುತ್ತದೆ.

ಅಂದರೆ, 'ವಂದೇ ಮಾತರಂ' ಗೀತೆಯನ್ನು ಹೊಂದಿರುವ 'ಆನಂದ ಮಠ' ಸಂಪೂರ್ಣವಾಗಿ ಮುಸ್ಲಿಮ್ ವಿರೋಧಿ ಕಾದಂಬರಿಯಾಗಿದೆ.

ಆದರೆ ಮುಸ್ಲಿಮರಿಗೆ ಅದಕ್ಕಿಂತ ಹೆಚ್ಚಾಗಿ ಧಾರ್ಮಿಕ ವಿಶ್ವಾಸಕ್ಕೆ ಸಂಬಂಧಿಸಿದ ಅಂಶವು ಪ್ರಧಾನವಾಗಿದೆ. 'ವಂದೇ ಮಾತರಂ' ಮೂರ್ತಿ ಪೂಜೆಯಿರುವ ಗೀತೆಯಾಗಿದೆ. ಭಾರತವನ್ನು ಪವಿತ್ರ ಮಾತೆಯೆಂದು ಊಹಿಸಿ, ಅದನ್ನು ತಾಯಿ ಮತ್ತು ದೇವಿಯೆಂದು ಸಂಭೋಧಿಸಿ, ದುರ್ಗಾ ಮತ್ತು ಲಕ್ಷ್ಮಿ ಎಂದು ವರ್ಣಿಸಿ, ಅದರೊಂದಿಗೆ ಪ್ರಾರ್ಥಿಸುವ 'ವಂದೇ ಮಾತರಂ' ಇಸ್ಲಾಮಿನ ಮೂಲ ಸಿದ್ಧಾಂತ ವಾಗಿರುವ ಏಕ ದೇವಾರಾಧನೆಗೆ ತೀರಾ ವಿರುದ್ಧ ವಾಗಿದೆ.

ಯಾವುದೇ ಧರ್ಮದ ಅನುಯಾಯಿಗಳನ್ನು ಅವರ ವಿಶ್ವಾಸ ಮತ್ತು ಆರಾಧನಾ ಕರ್ಮಗಳಿಗೆ ವಿರುದ್ಧವಾದ ಕೃತ್ಯಗಳಿಗೆ ಬಲವಂತಪಡಿಸುವುದು, ರಾಷ್ಟ್ರವು ಅಂಗೀಕರಿಸಿದ ಸಂವಿಧಾನಕ್ಕೂ, ಅದು ಎತ್ತಿ ಹಿಡಿಯುವ ಜಾತ್ಯತೀತ ಮೌಲ್ಯಗಳಿಗೂ ವಿರುದ್ಧವಾಗಿದೆ. ಆದ್ದರಿಂದಲೇ ಭಾರತದ ಖ್ಯಾತ ಪತ್ರಕರ್ತ ಕುಲದೀಪ್ ನಯ್ಯರ್ ಹೀಗೆ ಬರೆದಿದ್ದಾರೆ: ''ಮುಸ್ಲಿಮ್ ವಿರೋಧಿ ಹಿನ್ನೆಲೆಯಲ್ಲಿ ರಚಿಸಲಾದ ಮತ್ತು ಮೂರ್ತಿ ಪೂಜೆಯನ್ನು ಸ್ತುತಿಸುವ ಈ ಗೀತೆಯ ಅರ್ಥವು ಅದೆಷ್ಟೇ ರಾಷ್ಟ್ರಭಕ್ತಿಯಿಂದ ಕೂಡಿದ್ದರೂ ಅದಕ್ಕೆ ಜಾತ್ಯತೀತ ರಾಷ್ಟ್ರವೊಂದರ ರಾಷ್ಟ್ರಗೀತೆಯ ಸ್ಥಾನವನ್ನು ನೀಡುವುದು ಸರಿಯಲ್ಲ.''

ಮುಸ್ಲಿಮರು ಏಕದೇವನನ್ನು ಹೊರತುಪಡಿಸಿ ಬೇರೆ ಯಾರೂ ಮತ್ತು ಯಾವುದನ್ನೂ ಆರಾಧಿಸು ವುದಿಲ್ಲ, ಗೀತೆಯಲ್ಲಿ ಬರುವ ಖಡ್ಗಧಾರಿಣಿಯಾದ ದುರ್ಗಾದೇವಿ ಹಾಗೂ ತಾವರೆಯ ಕಿರೀಟವನ್ನು ತೊಟ್ಟ ಲಕ್ಷ್ಮಿದೇವಿಯ ಸ್ಥಾನದಲ್ಲಿ ಪ್ರವಾದಿ ಮಹಮ್ಮದ್‌ರ ಹೆಸರು ಉಲ್ಲೇಖಿತವಾದರೂ ಮುಸ್ಲಿಮರು ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದು ಅವರೊಂದಿಗೆ ಪ್ರೀತಿ ಮತ್ತು ಗೌರವ ಇಲ್ಲದ ಕಾರಣದಿಂದಲ್ಲ, ಬದಲಾಗಿ ಇಸ್ಲಾಮಿನಲ್ಲಿ ಅವರು ಕೂಡಾ ಆರಾಧನೆಗೆ ಅರ್ಹರಲ್ಲ ಎನ್ನುವುದೇ ನಿಜವಾದ ಕಾರಣ. ''ಮುಸ್ಲಿಮರು ಮಾತೃಭೂಮಿಯನ್ನು ಪ್ರೀತಿಸುತ್ತಾರೆ ಹಾಗೂ ಗೌರವಿಸುತ್ತಾರೆ, ಆದರೆ ಆರಾಧಿಸುವುದಿಲ್ಲ'' ಎಂಬ ಫತ್ವಾ ಅದೇಕೆ ದೇಶ ದ್ರೋಹವಾಗಬೇಕು? ರಾಷ್ಟ್ರಪ್ರೇಮವನ್ನು ದುರ್ಗಾ ಪೂಜೆಯಾಗಿ ಮಾರ್ಪಡಿಸುವುದು ಸಂವಿಧಾನದ ಪ್ರಜಾಸತ್ತಾತ್ಮಕ ಸ್ವರೂಪಕ್ಕೆ ವಿರುದ್ಧವಾಗಿದೆ.

ಅಷ್ಟಕ್ಕೂ ಭಾರತ ಸೇರಿದಂತೆ ಇಡೀ ಪ್ರಪಂಚವನ್ನು ಸೃಷ್ಟಿಸಿದ ದೇವನನ್ನು ಆರಾಧಿಸುವ ಬದಲಿಗೆ ಮಾನವ ನಿರ್ಮಿತ ಗಡಿಯನ್ನೊಳಗೊಂಡ ಒಂದು ಸೀಮಿತ ಭೂಪ್ರದೇಶವನ್ನು ಪೂಜಿಸಬೇಕೆಂದು (ಪ್ರೀತಿಸುವುದು, ಗೌರವಿಸುವುದಲ್ಲ) ಒತ್ತಾಯಿಸುವುದು ಎಲ್ಲರ ಸೃಷ್ಟಿಕರ್ತನಾದ ದೇವನಿಗೆ ಮಾಡುವ ವಿದ್ರೋಹವೆಂದು ಸಂಘ ಪರಿವಾರದವರಿಗೆ ಹೊಳೆಯುವುದಿಲ್ಲವೇಕೆ?

● ಅಬ್ದುಲ್ ಜಬ್ಬಾರ್ ಕಾಟಪಳ್ಳಿ

▶▶▶2 ಹಿಂದೂ ರಾಷ್ಟ್ರ, ಮುಸ್ಲಿಂ ದ್ವೇಷ, ಬ್ರಿಟಿಷ್ ಭಕ್ತಿ!

ನಾಯಕನನ್ನು ಉದ್ದೇಶಿಸಿ ಮುಸ್ಲಿಮರನ್ನು ಹಿಮ್ಮೆಟ್ಟಿಸಿದ್ದರಿಂದ ಅವನ ಗುರಿ ಈಡೇರಿದೆಯೆಂದು ಘೋಷಿಸುತ್ತದೆ. ಇನ್ನು ಬಂಗಾಳದ ಆಡಳಿತವನ್ನು ದೈವಕೃಪೆಯಿಂದ ಬ್ರಿಟಿಷರೇ ವಹಿಸಿ ಕೊಳ್ಳುವುದರಿಂದ ಹಿಂದೂಗಳಿಗೆ ಯಾವುದೇ ತೊಂದರೆಯಾಗು ವುದಿಲ್ಲವೆಂದೂ, ಈ ಬಂಡಾಯದ ಉದ್ದೇಶವಿದ್ದದ್ದೇ ಬ್ರಿಟಿಷರು ನೇರವಾಗಿ ಆಡಳಿತ ವಹಿಸುವಂತೆ ಮಾಡುವುದಾಗಿತ್ತೆಂದೂ ಆ ದೈವವಾಣಿ ತಿಳಿಹೇಳುತ್ತದೆ. ಆದರೆ ಇದರಿಂದ ಸಮಾಧಾನವಾಗದ ಕಥಾನಾಯಕ ಮುಸ್ಲಿಂ ಆಡಳಿತ ಹಿಮ್ಮೆಟ್ಟಿದರೂ ಹಿಂದೂಗಳ ಆಡಳಿತವನ್ನು ಸ್ಥಾಪಿಸಲಾಗದೇ ಇರುವುದರಿಂದ ತಮ್ಮ ಗುರಿ ಇನ್ನೂ ಮುಟ್ಟಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾನೆ. ಆದರೆ ಆ ದೈವವಾಣಿಯು ಅದರ ಬಗ್ಗೆ ಯೋಚಿಸುವ ಅಗತ್ಯವಿಲ್ಲ ವೆಂದೂ, ಬ್ರಿಟಿಷರು ಸನಾತನ ಧರ್ಮವನ್ನು ಗೌರವಿಸುತ್ತಾರೆಂದೂ, ಅವರ ಆಡಳಿತದಿಂದ ಹಿಂದೂಗಳಿಗೆ ಭೌತಿಕ ಲಾಭವಿದೆಯೆಂದೂ ಸಮಾಧಾನಪಡಿಸುತ್ತದೆ.

ಹೀಗೆ ಯಾವುದನ್ನು ದೇಶಭಕ್ತಿಯ ಪ್ರತೀಕ ಎಂದು ಪ್ರಚಾರ ಮಾಡಲಾಗುತ್ತಿದೆಯೋ ಆ ಗೀತೆ ಮತ್ತು ಕಾದಂಬರಿಯ ಉದ್ದೇಶವೇ ನೇರ ಬ್ರಿಟಿಷ್ ವಸಾಹತು ಆಡಳಿತವನ್ನು ಜಾರಿಗೆ ತರುವುದಾಗಿತ್ತು!!

ಕಾದಂಬರಿಯ ಈ ನಿಜವಾದ ಸಂದೇಶವನ್ನು ಅರ್ಥಮಾಡಿ ಕೊಂಡೇ ಬ್ರಿಟಿಷ್ ಸರ್ಕಾರವು 1881ರಲ್ಲಿ ಹಣಕಾಸು ಇಲಾಖೆ ಯಲ್ಲಿ ಹುಟ್ಟುಹಾಕಿದ ಹೊಸ ಅಸಿಸ್ಟೆಂಟ್ ಸೆಕ್ರೆಟರಿ ಹುದ್ದೆಗೆ ಬಂಕಿಮಚಂದ್ರರನ್ನು ಆಯ್ಕೆ ಮಾಡಿ ಪುರಸ್ಕರಿಸಿತು. ಆಮೇಲೆ ಕೆಲವರ ವಿರೋಧದಿಂದಾಗಿ ಅವರನ್ನು ಅಧೀನ ಕಾರ್ಯದರ್ಶಿ ಹುದ್ದೆಗೆ ಇಳಿಸಲಾಯಿತಾದರೂ ಕೆಲಸದಿಂದೇನೂ ತೆಗೆಯಲಿಲ್ಲ. ವಾಸ್ತವವಾಗಿ ಆ ಸಂದರ್ಭವು ಬ್ರಿಟಿಷ್ ಆಡಳಿತ ತನ್ನ ವಿರುದ್ಧ ವ್ಯಕ್ತವಾಗುತ್ತಿದ್ದ ಎಲ್ಲಾ ಬಗೆಯ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನೂ ಹತ್ತಿಕ್ಕುತ್ತಿದ್ದ ಕಾಲ. ಉದಾಹರಣೆಗೆ ದೀನಬಂಧು ಮಿತ್ರರವರ 'ನೀಲ್ ದರ್ಪಣ್' ಎಂಬ ಕೃತಿ 1861ರಲ್ಲಿ ಪ್ರಕಟವಾಯಿತು. ಅದು ಪ್ಲಾಂಟೇಷನ್‌ಗಳಲ್ಲಿ ಬ್ರಿಟಿಷರು ಹೇಗೆ ಸ್ವದೇಶೀಯರನ್ನು ಶೋಷಿಸುತ್ತಿದ್ದಾರೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿತ್ತು. ಆದರ ಇಂಗ್ಲಿಷ್ ಅನುವಾದ ಆಳರಸರ ಕೆಂಗಣ್ಣಿಗೆ ಗುರಿಯಾಗಿದ್ದು ಮಾತ್ರವಲ್ಲದೇ ಅದರ ಅನುವಾದಕ ರೆವರೆಂಡ್ ಜೇಮ್ಸ್ ಲಾಂಗ್ ನನ್ನು ಸೆರೆಮನೆಗೂ ದೂಡಲಾಯಿತು. ಆದೇರೀತಿ ಬ್ರಿಟಿಷರನ್ನು ವಿಮರ್ಶಿಸಿ ಬರೆದ ಕೃತಿಗಳಾದ ಉಪೇಂದ್ರನಾಥ ದಾಸರ 'ಶರ್ ಸರೋಜಿನಿ ನಾಟಕ್' ಮತ್ತು 'ಸುರೇಂದ್ರ ಬಿನೋದಿನಿ ನಾಟಕ್' ಗಳನ್ನು ಬ್ರಿಟಿಷ್ ಸರ್ಕಾರ ಬಹಿಷ್ಕರಿಸಿ ಲೇಖಕರನ್ನು ಬಂಧಿಸಿತು. 1876ರಲ್ಲಿ ಪ್ರಕಟವಾದ ದಕ್ಷಿಣರಂಜನ್ ಚಟ್ಟೋಪಾಧ್ಯಾಯರವರ 'ಚಾ ಕಾರ್ ದರ್ಪಣ್' ಕೃತಿಯಂತೂ ಬ್ರಿಟಿಷ್ ಸರ್ಕಾರವು ಇಂಥಾ ಕೃತಿಗಳನ್ನು ಬಹಿಷ್ಕರಿಸಲು 'ಡ್ರಾಮಾಟಿಕ್ ಪರ್ಫಾರ್ಮೆನ್ಸ್ ಆಕ್ಟ್' ಅನ್ನು ಜಾರಿಗೆ ತರಲು ಕಾರಣವಾಯಿತು.

ಇದು ನಿಜಕ್ಕೂ ಬ್ರಿಟಿಷ್ ವಿರೋಧೀ ದೇಶಭಕ್ತಿ ಸಂಪನ್ನ ಕೃತಿಗಳ ಬಗ್ಗೆ ಬ್ರಿಟಿಷ್ ಸರ್ಕಾರ ನಡೆದುಕೊಳ್ಳುತ್ತಿದ್ದ ರೀತಿ. ಆದರೆ "ದೇಶಭಕ್ತ" ಕೃತಿಯೆಂದು ಪರಿಗಣಿಸಲ್ಪಡುತ್ತಿರುವ 'ಆನಂದ ಮಠ'ವನ್ನು ಬ್ರಿಟಿಷ್ ಸರ್ಕಾರ ಹೇಗೆ ಭಾವಿಸಿತು? 'ಆನಂದ ಮಠ'ದ ಮೊದಲ ಆವೃತ್ತಿಗೆ ಬರೆದ ಮುನ್ನುಡಿಯಲ್ಲೇ ಬಂಕಿಮಚಂದ್ರರು ತನ್ನ ಕಾದಂಬರಿಯ ಬಂಡಾಯ "ಸಾಮಾಜಿಕ ಬಂಡಾಯ"ವೇ ಹೊರತು ರಾಜಕೀಯ ಬಂಡಾಯವಲ್ಲವೆಂದು- ಅರ್ಥಾತ್ ಬ್ರಿಟಿಷ್ ವಿರೋಧಿ ಕೃತಿಯಲ್ಲವೆಂದು- ಸ್ಪಷ್ಟಪಡಿಸಿಬಿಟ್ಟಿದ್ದರು. 1883ರ ಮಾರ್ಚ್ 31ರಂದು ಬ್ರಿಟಿಷ್ ಆಡಳಿತದ ಅಧಿಕೃತ ಗೆಜೆಟ್ಟಿನಲ್ಲಿ ಈ ಕಾದಂಬರಿಯು "ಧಾರ್ಮಿಕ ಭಾವನೆ ಗಳಿಂದ ಪ್ರೇರಿತಗೊಂಡ, ಮುಸ್ಲಿಮ್ ಆಳ್ವಿಕೆಯ ಕೊನೆಯನ್ನು ಬಯಸುವ ಮತ್ತು ಬ್ರಿಟಿಷರು ಭಾರತದ ಮೇಲೆ ಸಂಪೂರ್ಣ ಸ್ವಾಮ್ಯ ಪಡೆಯಬೇಕೆಂಬ ಆಶಯವುಳ್ಳ" ಕಾದಂಬರಿಯೆಂದು ಹೊಗಳಲಾಗಿತ್ತು. 1937ರಲ್ಲಿ ವೈಸ್‌ರಾಯ್ ಕೌನ್ಸಿಲ್ಲ ಸದಸ್ಯನಾಗಿದ್ದ ಸರ್ ಹೆನ್ರಿ ಕ್ರೈಕ್ "ಈ ಕಾದಂಬರಿಯು ಮುಸ್ಲಿಮರ ವಿರುದ್ಧ ಘೋಷಗೀತೆ"ಯೆಂದೇ ಬಣ್ಣಿಸಿದ್ದನು. ಹೀಗಾಗಿಯೇ ಈ ಹಾಡನ್ನಾಗಲೀ, ಕಾದಂಬರಿಯನ್ನಾಗಲೀ ಬ್ರಿಟಿಷ್ ಆಡಳಿತ ಯಾವತ್ತೂ ನಿಷೇಧಿಸಲಿಲ್ಲ!

ಇದು 'ವಂದೇ ಮಾತರಂ' ಮತ್ತು 'ಆನಂದ ಮಠ'ಗಳ ನಿಜಸ್ವರೂಪ. ನಮ್ಮನ್ನು ಸುಲಿಗೆ ಮಾಡಿದ ವಸಾಹತುಶಾಹಿಗಳನ್ನೇ ರಕ್ಷಕರೆಂದು ಘೋಷಿಸುವ, ನಮ್ಮ ಸಹವಾಸಿಗಳನ್ನು ಶತ್ರುಗಳೆಂದು ಬೋಧಿಸುವ 'ವಂದೇ ಮಾತರಂ' ರಾಷ್ಟ್ರಭಕ್ತಿ ಗೀತೆ ಹೇಗಾಗುತ್ತದೆ? ಅದು ಈ ದೇಶವನ್ನು ಮತ್ತೊಮ್ಮೆ ನವವಸಾಹತು ಶೋಷಣೆಗೆ ತೆರೆದಿಟ್ಟು, ದೇಶವಾಸಿಗಳ ನಡುವೆ ದ್ವೇಷ ಬಿತ್ತಬಯಸುವ ಹಿಂದೂತ್ವವಾದಿಗಳ ಗೀತೆಯೇ ಹೊರತು ನಮ್ಮೆಲ್ಲರ ಸ್ವಾತಂತ್ರ್ಯದ ಆಶಯವನ್ನು ಉದ್ದೀಪಿಸುವ ಗೀತೆಯಲ್ಲ. ಆದ್ದರಿಂದ ಇದನ್ನು ಮುಸ್ಲಿಮರು ಮಾತ್ರವಲ್ಲ ನಿಜವಾದ ದೇಶಭಕ್ತರೆಲ್ಲರೂ ವಿರೋಧಿಸಬೇಕು.

–ಈ ವಿಷಯದ ಬಗ್ಗೆ ಹೆಚ್ಚಿನ ಓದಿಗಾಗಿ EPWಪತ್ರಿಕೆಯಲ್ಲಿ ಪ್ರಕಟವಾದ ಖ್ಯಾತ ಚಿಂತಕ ತನಿಕ ಸರ್ಕಾರ್‌ರವರ "Birth Of Godess" ಲೇಖನವನ್ನು ಓದಿರಿ. ಇದು ಅಂತರ್ಜಾಲದಲ್ಲಿ ಈ ವಿಳಾಸದಲ್ಲಿ ಸಿಗುತ್ತದೆ:

http://epw.in/epw/uploads/articles/7338.pdf

ಶೈಲಜ ಹಿರೇಮಠ

ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶೈಲಜ, ತಮ್ಮ 'ಪಾತರದವರು' ಕೃತಿಯಿಂದ ಗಮನ ಸೆಳೆದವರು. ನಂತರ ಅವರು 'ಸ್ತ್ರೀಕಥನ' ಮುಂತಾದ ಕೃತಿಗಳನ್ನು ಪ್ರಕಟಿಸಿದರು. ಆದರೂ 'ಪಾತರದವರು' ಅವರ ಪ್ರಮುಖ ಕೃತಿಯಾಗೇ ಉಳಿದಿದೆ. ಸಾಹಿತ್ಯ ಅಕಾದೆಮಿಯ ಬಹುಮಾನವನ್ನೂ ಪಡೆದಿರುವ ಈ ಕೃತಿ, ನಟುವ ಅಥವಾ ಕಲಾವಂತ ಎಂದು ಕರೆಯಲಾಗುವ ಸಮುದಾಯವೊಂದರ ತಲಸ್ಪರ್ಶಿಯಾದ ಅಧ್ಯಯನದ ಪರಿಣಾಮ.



ಕನ್ನಡದ ಹೊಸತಲೆಮಾರಿನ ಲೇಖಕರಲ್ಲಿ ಸಾಹಿತ್ಯ ವಿಮರ್ಶಕರುಂಟು. ಪಿಎಚ್‌ಡಿ. ಪದವಿಗಾಗಿ ಸಂಶೋಧನೆ ಮಾಡಿದವರೂ ಉಂಟು. ಆದರೆ ತಮಗೆ ಕಾಡುವ ವಿಷಯವೊಂದನ್ನು ಆರಿಸಿಕೊಂಡು ವ್ಯಾಪಕವಾದ ಕ್ಷೇತ್ರಕಾರ್ಯ ಮಾಡಿ, ಸಾಂಸ್ಕೃತಿಕವಾದ ಸಂಶೋಧನೆ ಮಾಡುವವರು ಮಾತ್ರ ತೀರಾ ಕಡಿಮೆ. ಇವರಲ್ಲಿ ಮಹಿಳೆಯರು ಇನ್ನೂ ಕಡಿಮೆ. ಈ ಹಿನ್ನೆಲೆಯಲ್ಲಿ ಡಾ. ಶೈಲಜ ಹಿರೇಮಠ ಅವರ ಹೆಸರು ಮುಖ್ಯವಾಗಿ ತೋರುತ್ತದೆ.

ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶೈಲಜ, ತಮ್ಮ 'ಪಾತರದವರು' ಕೃತಿಯಿಂದ ಗಮನ ಸೆಳೆದವರು. ನಂತರ ಅವರು 'ಸ್ತ್ರೀಕಥನ' ಮುಂತಾದ ಕೃತಿಗಳನ್ನು ಪ್ರಕಟಿಸಿದರು. ಆದರೂ 'ಪಾತರದವರು' ಅವರ ಪ್ರಮುಖ ಕೃತಿಯಾಗೇ ಉಳಿದಿದೆ. ಸಾಹಿತ್ಯ ಅಕಾದೆಮಿಯ ಬಹುಮಾನವನ್ನೂ ಪಡೆದಿರುವ ಈ ಕೃತಿ, ನಟುವ ಅಥವಾ ಕಲಾವಂತ ಎಂದು ಕರೆಯಲಾಗುವ ಸಮುದಾಯವೊಂದರ ತಲಸ್ಪರ್ಶಿಯಾದ ಅಧ್ಯಯನದ ಪರಿಣಾಮ.

'ಪಾತರದವರು' ಕರ್ನಾಟಕದ ನಟನೆ ಮತ್ತು ಹಾಡುಗಾರಿಕೆ ಮಾಡುವ ಒಂದು ಸಮುದಾಯ. ಇದರಲ್ಲಿ ಮುಸ್ಲಿಮರನ್ನೂ ಒಳಗೊಂಡಂತೆ ಮುಖ್ಯವಾಗಿ ಕೆಳಜಾತಿಯ ಮಹಿಳೆಯರು ಇದ್ದಾರೆ. ಇವರಲ್ಲಿ ಕೆಲವರು ನಾಟಕ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರೆ ಮತ್ತೆ ಕೆಲವರು ಕರ್ನಾಟಕದ ಗುಡಿಸಂಸ್ಕೃತಿಯ ಭಾಗವಾಗಿರುವವರು. ಕರ್ನಾಟಕದ ನಾಟಕ ಸಂಗೀತಗಳ ಚರಿತ್ರೆಯನ್ನು ಇವರ ಹೊರತುಪಡಿಸಿ ಕಲ್ಪಿಸಿಕೊಳ್ಳುವಂತಿಲ್ಲ. ಇವರಲ್ಲಿ ಅನೇಕರು ನಟಿಯರಾಗಿಯೂ ಸಂಗೀತ ವಿದುಷಿಯರಾಗಿಯೂ ಪ್ರಸಿದ್ಧರಾದರು. ಪುರುಷ ಪ್ರಧಾನ ಸಮಾಜದ ಸಂಸ್ಥೆಗಳಾಗಿ ಹೋಗಿರುವ ವಿವಾಹ ಕುಟುಂಬಗಳ ಚೌಕಟ್ಟನಾಚೆ, ತಮ್ಮಿಚ್ಛೆಯ ಪುರುಷರನ್ನು ಸಂಗಾತಿಯಾಗಿಸಿಕೊಂಡು ಬದುಕು ಕಟ್ಟಿಕೊಂಡಿದ್ದ ಇವರು, ಒಂದು ಬಗೆಯಲ್ಲಿ ಸ್ವತಂತ್ರರು. ಆದರೆ ಈ ಸ್ವಾತಂತ್ರ್ಯದ ಜತೆಯಲ್ಲೇ ಸಾಮಾಜಿಕವಾಗಿ ಅಪಮಾನವನ್ನೂ ಆರ್ಥಿಕವಾದ ಅಭದ್ರತೆಯನ್ನೂ ಕೌಟುಂಬಿಕವಾದ ಭಗ್ನತೆಯನ್ನೂ ಕೂಡ ಅವರು ಅನುಭವಿಸಿದವರು. ಕರ್ನಾಟಕದಲ್ಲಿ ಇದೊಂದು ಕಣ್ಣಿಗೆ ತಟ್ಟನೆ ಕಾಣದ ಆದರೆ ತಲ್ಲಣದ ಬದುಕನ್ನು ಅನುಭವಿಸುತ್ತಿರುವ ಸಮುದಾಯ. ಎಲ್ಲಾಕಡೆ ಅಪಮಾನಕ್ಕೂ ಒಳಪಟ್ಟಿರುವ ಈ ಅಧೋಲೋಕದ ಬಗ್ಗೆ ಶೈಲಜ ಪ್ರಕಟಿಸಿರುವ ಅಧ್ಯಯನವು ಕನ್ನಡದಲ್ಲಿ ಪ್ರಮಾಣಗ್ರಂಥದಂತಿದೆ.


ಇದಾದ ಬಳಿಕ ಶೈಲಜ ಇದೇ ಲೋಕದ ಇತರ ಕವಲುಗಳಂತೆ ತೋರುವ ಬಸವಿ ಹಾಗೂ ದೇವದಾಸಿ ಸಂಪ್ರದಾಯಗಳ ಮೇಲೆ ಅಧ್ಯಯನ ಮಾಡಿದರು; ಮಾತೃಪ್ರಧಾನ ಸಂಸ್ಕೃತಿ ಕುರಿತು ಪುಸ್ತಕ ಬರೆದರು. ದೇವದಾಸಿ ವಿಮೋಚನ ಸಂಸ್ಥೆಯನ್ನು ನಡೆಸುವ ಸಾಮಾಜಿಕ ಕಾರ್ಯಕರ್ತರನ್ನು ಹಾಗೂ ಕಲಾವಂತ ಸಮುದಾಯಕ್ಕೆ ಸೇರಿದ ರಂಗನಟಿಯರನ್ನು ಸಂದರ್ಶನ ಮಾಡಿದರು. ಮಹಿಳೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಕ್ಷೇತ್ರವನ್ನು ಇಟ್ಟುಕೊಂಡು, ಅದರ ಬೇರೆಬೇರೆ ಮಗ್ಗುಲುಗಳನ್ನು ಶೋಧಿಸುತ್ತ ಹೋಗುತ್ತಿರುವ ಅವರ ಈ ಅಧ್ಯಯನಗಳು ಸಾಂಸ್ಕೃತಿಕವಾಗಿ ಮಹತ್ವದ್ದಾಗಿವೆ.

ಶೈಲಜ ಅವರ ಅಧ್ಯಯನಗಳ ವಿಶೇಷತೆಗಳೆಂದರೆ,

1. ನೇರ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ವಿವರಗಳ ಮೂಲಕ ಅಧ್ಯಯನ ಮಾಡುವುದು. ಪಾತರದವರು, ಬಸವಿಯರು ಮತ್ತು ದೇವದಾಸಿಯರನ್ನು ಹುಡುಕಿಕೊಂಡು ಶೈಲಜ ಕರ್ನಾಟಕದ ಮೂಲೆಮುಡುಕಿನ ಸ್ಥಳಗಳಿಗೆ ಹೋಗಿದ್ದಾರೆ. ಅವರನ್ನು ಖುದ್ದಾಗಿ ಭೇಟಿ ಮಾಡಿದ್ದಾರೆ; ಅವರು ಮೊದಲಿಗೆ ಮಾತಾಡಲು ತಿರಸ್ಕರಿಸಿದರೂ, ಛಲಬಿಡದೆ, ಒಲಿಸಿ, ಅವರ ವಿಶ್ವಾಸಗಳಿಸಿ, ಅವರು ತಮ್ಮಂತರಂಗದ ಲೋಕವನ್ನು ತೆರೆದುಕೊಳ್ಳುವಂತೆ ಮಾಡಿದ್ದಾರೆ. ಅವರ ಮಾತುಗಳಿಂದಲೇ ಅವರ ಕತೆಯನ್ನು ಕಟ್ಟಿಕೊಡುವ ಕಥನ ಮಾದರಿಯನ್ನು ಸಹ ರೂಪಿಸಿಕೊಂಡಿದ್ದಾರೆ. ಹೀಗಾಗಿ ಶೈಲಜರ ಅಧ್ಯಯನಗಳು ಕಥೆಯಂತೆ ಓದಿಸಿಕೊಳ್ಳುತ್ತವೆ.

2. ತಮಗೆ ಸಿಕ್ಕ ಮಾಹಿತಿ ಮತ್ತು ತಮಗಾದ ಅನುಭವವನ್ನು ವರ್ತಮಾನದ ಬದುಕಿನಲ್ಲಿಟ್ಟು, ಆಧುನಿಕ ನಾಗರಿಕ ಮಹಿಳೆಗೆ ಬೇಕಾದ ಸಮಾನತೆ ಸ್ವಾತಂತ್ರ್ಯಗಳ ಮೌಲ್ಯಗಳ ನೆಲೆಯಲ್ಲಿ ನಿಷ್ಠುರವಾಗಿ ವಿಶ್ಲೇಷಿಸುವುದು. ಸಾಮಾನ್ಯವಾಗಿ ಧರ್ಮದ ಲೇಪವುಳ್ಳ ಸಂಗತಿಗಳನ್ನು ಸಂಸ್ಕೃತಿಯ ಹೆಸರಲ್ಲಿ ಸಮರ್ಥಿಸುವ ಪರಿಪಾಠವು ಕೆಲವು ಸಂಶೋಧಕರಲ್ಲಿದೆ. ಇವರು ಕೆಲವು ಪದ್ಧತಿಗಳನ್ನು ಸಾಂಸ್ಕೃತಿಕ ವಿಶ್ಲೇಷಣೆಯ ಹೆಸರಲ್ಲಿ ಚಾರಿತ್ರಿಕವಾಗಿ ವಿಶ್ಲೇಷಿಸುವಷ್ಟಕ್ಕೆ ನಿಲ್ಲಿಸುವುದು ಅಥವಾ ಅವನ್ನು ಸಮಕಾಲೀನ ಮೌಲ್ಯಗಳ ನೆಲೆಯಲ್ಲಿ ವಿಮರ್ಶೆ ಮಾಡದೆ ನಿರ್ಲಿಪ್ತತೆ ತೋರುವುದನ್ನು ಮಾಡುವರು. ಕೆಲವೊಮ್ಮೆ ಅವನ್ನು ವೈಭವೀಕರಿಸುವುದೂ ಉಂಟು. ಸಾಮಾಜಿಕ ಮತ್ತು ವರ್ಗೀಯ ಅಸಮಾನತೆಗೆ ಸಂಬಂಧಪಟ್ಟ ಯಾವುದೇ ವಿಷಯ ಕುರಿತು ಅಧ್ಯಯನ ಮಾಡುವಾಗ, ವಿದ್ವತ್ತಿಗಿಂತ ಮುಖ್ಯವಾದುದು ಅದನ್ನು ವರ್ತಮಾನದ ಬದುಕಿನಲ್ಲಿಟ್ಟು ನೋಡುವ ವೈಚಾರಿಕ ದೃಷ್ಟಿಕೋನ. ಸ್ತ್ರೀವಾದಿ ಚಿಂತನೆಯುಳ್ಳ ಶೈಲಜ, ಈ ದೇವಸ್ತ್ರೀಯರ ಮೂಲಕ ಕರ್ನಾಟಕದ 'ಸಾಂಸ್ಕೃತಿಕ' 'ಧಾರ್ಮಿಕ' ಚರಿತ್ರೆಯನ್ನು ಪುನಾರಚಿಸುವುದಕ್ಕೆ ಹೋಗುವುದಿಲ್ಲ. ಬದಲಿಗೆ ವರ್ತಮಾನದಲ್ಲಿ ಅವರ ಬದುಕು ಏನಾಗಿದೆ ಎಂದು ಶೋಧಿಸುವತ್ತ ಗಮನ ಹರಿಸುತ್ತಾರೆ.

3. ಈಗಾಗಲೇ ಪ್ರಸಿದ್ಧರಾಗಿರುವ ವಿದ್ವಾಂಸರು ಚರಿತ್ರೆ ಸಂಸ್ಕೃತಿಯ ಹೆಸರಲ್ಲಿ ಕಟ್ಟಿಕೊಟ್ಟಿರುವ ಕಥನಗಳ ಒಳಗಿರುವ ಊಳಿಗಮಾನ್ಯ ಪುರುಷವಾದಿ ಸಂಕಥನಗಳ ಮೇಲೆ ಪ್ರಶ್ನೆ ಎತ್ತುವುದು ಹಾಗೂ ಅವನ್ನು ಕಟುವಿಮರ್ಶೆಗೆ ಒಳಪಡಿಸುವುದು - ಹೀಗೆ ವಿಮರ್ಶೆಗೆ ಒಳಪಡುವಲ್ಲಿ ಗ್ರಹಿಕೆಗಳಲ್ಲಿ ಪುರುಷ ವಿದ್ವಾಂಸರವು ಮಾತ್ರವಲ್ಲ; ಪುರುಷವಾದಿ ಮೌಲ್ಯಗಳನ್ನು ಒಪ್ಪಿಕೊಂಡಿರುವ ಮಹಿಳಾ ವಿದ್ವಾಂಸರೂ ಇದ್ದಾರೆ. ಗಣ್ಯತೆ ಪಡೆದಿರುವ ಅಧ್ಯಯನಕಾರರ ಪೂರ್ವಗ್ರಹಿಕೆಗಳನ್ನು ತಮ್ಮ ಕಾಮನ್‌ಸೆನ್ಸಿಕ್ ಆದ ನೇರ ಮತ್ತು ದಿಟ್ಟ ನಿಲುವಿನಿಂದ ಶೈಲಜ ಬಯಲುಗೊಳಿಸುತ್ತಾರೆ ಮತ್ತು ಮೌಲ್ಯಮಾಪನ ಮಾಡುತ್ತಾರೆ.



4. ವಿದ್ವತ್ ಕಾಳಜಿಗಿಂತ ಮಿಗಿಲಾಗಿ ಈ ಸನ್ನಿವೇಶವು ಬದಲಾವಣೆಯಾಗಬೇಕೆಂಬ ಸಾಮಾಜಿಕ ತುಡಿತ ಇರುವುದು. ಇಲ್ಲಿ ಅಧ್ಯಯನ ಮಾಡುವವರಿಗೆ ಖಚಿತವಾದ ಸಾಮಾಜಿಕ ದೃಷ್ಟಿಕೋನಗಳು ಬೇಕಾಗುತ್ತವೆ. ಶೈಲಜ ಅವರ ಅಧ್ಯಯನಗಳು ನಿರ್ಲಿಪ್ತ ವರದಿಗಾರಿಕೆಗಿಂತ ಭಿನ್ನವಾಗಿ ಭಾವನಾತ್ಮಕವಾದ ತೀಕ್ಷ್ಣತೆಯನ್ನು ಒಳಗೊಂಡಿವೆ. ಹೀಗಾಗಿ ಅವರ ಅಧ್ಯಯನಗಳು ಉರಿಯುವ ಆತ್ಮಗಳ ಕಥನಗಳಂತಿವೆ. ದಮನಿತ ಮಹಿಳೆಯರ ಬದುಕನ್ನು ಕುರಿತ ಪ್ರಾಮಾಣಿಕ ಕಳಕಳಿ ಮತ್ತು ಅವರ ಅವಸ್ಥೆಗೆ ಕಾರಣವಾಗಿರುವ ವ್ಯವಸ್ಥೆ ಕುರಿತ ಆಕ್ರೋಶಗಳು ಅನೇಕ ಒಳನೋಟಗಳಿಗೆ ಕಾರಣವಾಗಿವೆ. ಸ್ತ್ರೀಯ ನೋವುನಲಿವುಗಳೇ ಮುಖ್ಯವಾಗಿರುವುದರಿಂದ ಅವರು ಯಾವ ಜಾತಿ ಮತ್ತು ಧರ್ಮಗಳಿಗೆ ಸೇರಿದವರು ಎಂಬ ಸಂಗತಿಯು ಹಿನ್ನೆಲೆಗೆ ಸರಿದು, ಜೆಂಡರ್ ಸೆಕ್ಯುಲರಿಸಂನ ನಿಲುವು ರೂಪುಗೊಂಡಿದೆ. ಹೀಗಾಗಿ ಇಲ್ಲಿನ ಅಧ್ಯಯನಕ್ಕೆ ಒಂದು ಬಗೆಯ ಆಕ್ಟಿವಿಸ್ಟ್ ಆಯಾಮ ಒದಗಿದೆ. ಈ ಹಿನ್ನೆಲೆಯಿಂದ ಶೈಲಜ ಅವರ ವಿಶ್ಲೇಷಣೆಗಿಂತ ಅನುಬಂಧದಲ್ಲಿ ಬರುವ 'ಕ್ಷೇತ್ರಕಾರ್ಯಾನುಭವ'ಗಳು ಕುತೂಹಲಕರವಾಗಿದೆ.

ಕನ್ನಡ ಚಿಂತನೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಈಗ ಮಹಿಳಾವಾದಿ ಚಿಂತನಕ್ರಮಗಳು ಪ್ರವೇಶಿಸುತ್ತಿವೆ. ಅವು ಕರ್ನಾಟಕದ ಅಧ್ಯಯನಗಳಲ್ಲಿ ದೊಡ್ಡಮಟ್ಟದಲ್ಲೇ ಸ್ಥಾಪಿತವಾಗಿರುವ ಲೋಕದೃಷ್ಟಿಯಲ್ಲಿ ಪಲ್ಲಟವನ್ನೂ ತರುತ್ತಿವೆ. ಆದರೂ ಕರ್ನಾಟಕ ಅಧ್ಯಯನಗಳ ದೊಡ್ಡಭಾಗವು ಸಾಹಿತ್ಯಕ ಅಧ್ಯಯನಗಳಿಗೆ ಸೀಮಿತವಾಗಿದೆ ಮತ್ತು ಅಲ್ಲಿರುವ ಸ್ತ್ರೀವಾದಿ ನೆಲೆಯು ನಗರ ಮಧ್ಯಮವರ್ಗದ ಮೇಲುಜಾತಿಯ ನೆಲೆಯ ಪರಿಮಿತಿಗೆ ಒಳಗಾಗಿದೆ. ಅದಕ್ಕೆ ನಾಡಿನ ದುಡಿಯುವ ವರ್ಗದ ಮತ್ತು ಸಾಮಾಜಿಕವಾಗಿ ಕೆಳಜಾತಿಗಳ ನೆಲೆಯ ಮಹಿಳೆಯರ ಬಾಳಿನ ಆಯಾಮ ದಕ್ಕಬೇಕಾದಷ್ಟು ಪ್ರಮಾಣದಲ್ಲಿ ದಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾಜಿಕವಾದ ಅಪಮಾನ ಮತ್ತು ಧಾರ್ಮಿಕ ಗೌರವದಂತಹ ಎರಡು ಅತಿರೇಕದ ಉಪಚಾರವುಳ್ಳ, ಈ 'ದೇವಸ್ತ್ರೀ'ಯರನ್ನು ಕುರಿತ ಶೈಲಜರ ಅಧ್ಯಯನಗಳು ಮುಖ್ಯವಾಗಿ ಕಾಣುತ್ತವೆ.

ಪಾತರದವರು, ಬಸವಿಯರು ಮತ್ತು ದೇವದಾಸಿಯರದು, ನಮ್ಮ ನಾಡಿನ ಗುಡಿಸಂಸ್ಕೃತಿ, ಫ್ಯೂಡಲ್ ವ್ಯವಸ್ಥೆ ಮತ್ತು ಶ್ರೇಣೀಕೃತ ಜಾತಿವ್ಯವಸ್ಥೆಗಳು ಕೂಡಿ ಚಾರಿತ್ರಿಕವಾಗಿ ಸೃಷ್ಟಿಸಿರುವ ಒಂದು ಸಮುದಾಯ. ಈ ಸಮುದಾಯಕ್ಕೆ ಸಂಗೀತ, ನಟನೆಯಂತಹ ಕಲಾ ಆಯಾಮವೂ ಇದೆ. ವೇಶ್ಯಾವೃತ್ತಿಯಂತಹ ಸಾಮಾಜಿಕ ಸಮಸ್ಯೆಯ ಆಯಾಮವೂ ಇದೆ. ಇಂತಹ ಲೋಕಗಳಲ್ಲಿ ಕೆಲಸ ಮಾಡುವುದೇ ಒಂದು ಸವಾಲು. ಇಲ್ಲಿ ಮಹಿಳಾ ಅಧ್ಯಯನಕಾರರಿಗೆ ಸಿಗುವ ಸುಲಭ ಪ್ರವೇಶವು ಇತರರಿಗೆ ಸಿಗುವುದಿಲ್ಲ. ಒಂದೊಮ್ಮೆ ಪ್ರವೇಶ ಸಿಕ್ಕರೂ ಸಾಮಾಜಿಕ ಸಂಕೋಚದಿಂದ ನರಳುವ ಅವರ ಜತೆ ವಿಶ್ವಾಸ ಸಂಪಾದಿಸುವುದು, ಹಂಚಿಕೊಳ್ಳಲು ಕಷ್ಟವೆನಿಸುವ ಖಾಸಗಿ ಅನುಭವಗಳನ್ನು ಪಡೆದುಕೊಳ್ಳುವುದು ಸುಲಭವಲ್ಲ. ಇನ್ನೂ ಕಷ್ಟದ ಸಂಗತಿಯೆಂದರೆ, ಈ ಅನುಭವ ಮತ್ತು ವಿವರಗಳನ್ನು ಹಂಚಿಕೊಂಡವರಿಗೆ ಮುಜುಗರವಾಗದಂತೆ ಅಧ್ಯಯನದಲ್ಲಿ ಮಂಡಿಸುವುದು. ನಾಗರಿಕ ಜಗತ್ತಿಗೆ ಮಂಡಿಸುವ ವಿಧಾನದ್ದು. ಅನೇಕ ಸಲ ಜನರ ಬದುಕಿನ ವೈಯಕ್ತಿಕ ವಿವರಗಳು ಸಂಶೋಧನೆಗೆ ಕೇವಲ ವಸ್ತುವಾಗತೊಡಗಿದರೆ, ಅಲ್ಲಿ ಮಾನವೀಯ ಸೂಕ್ಷ್ಮತೆ ಕಣ್ಮರೆಯಾಗುತ್ತದೆ. ಸಂಶೋಧನೆ ಪ್ರಕಟವಾದ ಬಳಿಕ ಹೊಸ ಕಷ್ಟಪರಂಪರೆಗಳು ಆರಂಭವಾಗುತ್ತವೆ. ಇಂತಹ ಗುಪ್ತಲೋಕಗಳಲ್ಲಿ ಅಧ್ಯಯನ ಮಾಡುವಾಗ, ನಾಗರಿಕ ಜಗತ್ತಿಗೆ ಹೆಚ್ಚು ಗೊತ್ತಿಲ್ಲದ ಲೋಕ ಹೊಕ್ಕು ಬಂದೆ ಎಂಬ ಹೆಮ್ಮೆ ಕೆಲಸ ಮಾಡತೊಡಗುತ್ತದೆ. ಇದು ತಂದ 'ಅಪರೂಪ'ದ ಮಾಹಿತಿಯನ್ನು ನಾಗರಿಕ ಲೋಕಕ್ಕೆ ತೋರಿಸಿ ಬೆರಗುಗೊಳಿಸುವ ಹಮ್ಮಾಗಿ ಮಾರ್ಪಡಬಹುದು. ಗೂಢಲೋಕಗಳ ಮೇಲೆ ಬೆಳಕು ಚೆಲ್ಲುತ್ತೇವೆಂದು ಹೇಳಿಕೊಂಡು, ಅನೇಕ ಪತ್ರಿಕೆ ಮತ್ತು ದೃಶ್ಯಮಾಧ್ಯಮಗಳು, ಇಂತಹ ಸಮುದಾಯಗಳ ಬಗ್ಗೆ ಸಾಂಸ್ಕೃತಿಕ ಸೂಕ್ಷ್ಮತೆಯೂ ಮಾನವೀಯ ಸಂವೇದನೆಯೂ ಇಲ್ಲದ ರೋಚಕ ವರದಿಗಳನ್ನು ಮಾಡಿ ಸಾಕಷ್ಟು ಅನಾಹುತ ಮಾಡಿವೆ. ಮಾರುಕಟ್ಟೆ ಸಂಸ್ಕೃತಿಗೆ ಜನರ ಬದುಕಿನ ಖಾಸಗಿ ವಿವರವನ್ನೂ ಸರಕಿನಂತೆ ಮಾರಿ ಲಾಭಮಾಡುವ ಪ್ರವೃತ್ತಿಯಿದೆ. ಇಂತಹ ಸಂದರ್ಭದಲ್ಲಿ ಸಂಶೋಧಕರು ಸಾಮಾಜಿಕ ಹೊಣೆಗಾರಿಕೆ ಪ್ರಕಟಿಸಬೇಕಾಗುತ್ತದೆ. ನಮ್ಮ ಜತೆಗೇ ಬದುಕುತ್ತಿರುವ ಜೀವಂತ ವ್ಯಕ್ತಿ ಮತ್ತು ಸಮುದಾಯಗಳ ಮೇಲೆ ಅಧ್ಯಯನ ಮಾಡುವುದು, ನಿರ್ಜೀವ ವಸ್ತುಗಳ ಮೇಲೆ ಅಧ್ಯಯನ ಮಾಡುವುದಕ್ಕಿಂತ ಭಿನ್ನವಾದುದು. ಇಲ್ಲಿನ ವಿಶಿಷ್ಟ ಸಂಗತಿಗಳನ್ನು ಬಹಿರಂಗಪಡಿಸಿದರೆ, ಹೇಳಿಕೊಂಡವರ ಖಾಸಗಿ ಬದುಕು ಘಾಸಿಯಾಗಿ, ಅವರಿಗೆ ಅಪಮಾನವಾಗುತ್ತದೆ. ಅದನ್ನು ಹೇಳದಿದ್ದರೆ ಅಧ್ಯಯನ ಅಪೂರ್ಣವಾಗುತ್ತದೆ. ಇಂತ[...] ಇಕ್ಕಟ್ಟಿನ ಒಳಗೆ ಮಾನವೀಯ ಎಚ್ಚರ ಮತ್ತು ಸೂಕ್ಷ್ಮತೆಯನ್ನು ಪ್ರಕಟಿಸಬೇಕಾಗುತ್ತದೆ. ಶೈಲಜ ಇದನ್ನು ಪ್ರಕಟಿಸಲು ಯತ್ನಿಸಿದ್ದಾರೆ.


ಶೈಲಜ ಅವರ ಅಧ್ಯಯನಗಳಲ್ಲಿ ಕೆಲವು ಮಿತಿಗಳಿ[...] ಅವೆಂದರೆ- 1. ಮಾಹಿತಿ ಸಂಗ್ರಹ ಮತ್ತು ಅದನ್ನು ವಿಶ್ಲೇಷಣೆ ಮಾಡುವ ಜತೆಗೆ ಅದನ್ನು ಒಂದು ಸಾಮಾ[...] ಥಿಯರಿಯಾಗಿ ರೂಪಿಸುತ್ತ ತೆಗೆದುಕೊಂಡು ಹೋಗಲ[...] ಸಾಧ್ಯವಾಗದೆ ಇರುವುದು. ಅಮೂಲ್ಯ ಅನುಭವ ಮತ್ತು ಮಾಹಿತಿಗಳನ್ನು ಚಿಂತನೆಗಳಾಗಿ ಪರಿವರ್ತಿಸಲು ಬೇಕಾ[...] ತತ್ತ್ವೀಕರಣದ ಕುಶಲತೆ ಪಡೆದುಕೊಳ್ಳುವುದು ನವ[...] ಹೊಸಗಾಲದ ವಿದ್ವಾಂಸರ ಮುಂದಿನ ಸವಾಲಾಗಿ[...] 2. ಸಾಹಿತ್ಯಕ ವಿಶ್ಲೇಷಣೆ ಮಾಡುವ ಭಾಗಗಳ[...] ದುರ್ಬಲವಾಗಿರುವುದು. ಅನೇಕ ಸಲ ಸಾಹಿತ್ಯ[...] ಅಧ್ಯಯನಗಳಲ್ಲಿ ಸಿಗುವ ಸೂಕ್ಷ್ಮತೆಯು ಸಾಮಾಜಿ[...] ಅಧ್ಯಯನಗಳಲ್ಲಿ ಉಪಯುಕ್ತವಾದ ನೋಟಗಳಿ[...] ಕಾರಣವಾಗಬಲ್ಲದು. ಈ ಸಂದರ್ಭದಲ್ಲಿ ಪಾತರದವರ[...] ವಸ್ತುವಾಗಿಸಿಕೊಂಡ ಕಾದಂಬರಿ, ಅದರಲ್ಲೂ ಕಾರಂತ[...] 'ಮೈಮನಗಳ ಸುಳಿಯಲ್ಲಿ', ಇಲ್ಲಿ ನೆನಪಾಗುತ್ತಿದೆ. ದಮನಿತ ಮಹಿಳೆಯರ ಬದುಕಿನ ಸಂಕಷ್ಟಗ[...] ಹುಟ್ಟಿಸಿರುವ ಭಾವನಾತ್ಮಕ ಆಕ್ರೋಶ ಮತ್ತು ಅನುಕಂಪೆಗಳು ಮತ್ತಷ್ಟು ಆಳವಾದ ಸಂಕೀರ್ಣವಾ[...] ವಿಶ್ಲೇಷಣೆಗೆ ಹೋಗಲು ತಡೆದಿರುವುದು. [...] ಪುರುಷನೆಲೆಯನ್ನು ಎದುರಾಳಿಯಾಗಿ ಇಟ್ಟುಕೊಂ[...] ನೋಡುವ ಧೋರಣೆಯಿಂದ ಇಲ್ಲಿ ಹೊಸನೋಟಗ[...] ದಕ್ಕಿವೆ. ಆದರೂ ಈ ಧೋರಣೆ ಸಮಾಜದ ಅಥ[...] ಬಾಳಿನ ಇತರೆ ಆಯಾಮಗಳತ್ತ ನೋಡಲು ಬೇಕಾ[...] ದಿಟ್ಟವಿಸ್ತರಣೆಗೆ ತೊಡಕಾಗಿರುವಂತೆ ತೋರುತ್ತದೆ. [...] ಜನಬದುಕಿನ ಒಳಗೆ ಆಳವಾಗಿ ಪ್ರವೇಶವುಳ್ಳ ಇ[...] ಅಧ್ಯಯನಗಳು, ಇದೇ ವಿಷಯ ಕುರಿತಂತೆ ಬೇರೆಬೇ[...] ಭಾಷೆಗಳಲ್ಲಿ ನಡೆದಿರುವ ಅಧ್ಯಯನಗಳ ಅಭ್ಯಾಸದಿ[...] ತೌಲನಿಕ ಪ್ರಯೋಜನ ಪಡೆಯಲು ಸಾಧ್ಯವಾಗ[...] ಇರುವುದು. ಕನ್ನಡದ ಅಧ್ಯಯನಕಾರರಿಗೆ ಕನ್ನಡೇ[...] ಅಧ್ಯಯನಗಳಿಂದ ಶಕ್ತಿಯನ್ನು ಪಡೆದುಕೊಳ್ಳಲು ಕನಿ[...] ಮಟ್ಟದ ಇಂಗ್ಲಿಷು ಬೇಕಾಗಿದೆ. ಸಾಧ್ಯವಾದರೆ ಭಾರತ[...] ಸಹ ಚಿಂತಕರ ಜತೆ ತಮ್ಮ ಅಧ್ಯಯನ ಫಲಗಳ[...] ಹಂಚಿಕೊಳ್ಳಲು ಸಂವಾದ ಮಟ್ಟದ ಇಂಗ್ಲಿಷನ್ನು [...] ಪಡೆದುಕೊಳ್ಳುವ ಅಗತ್ಯವಿದೆ. ಇಲ್ಲದಿದ್ದರೆ, ನ[...] ಬಹಳಷ್ಟು ಉಪಯುಕ್ತವಾದ ಅಧ್ಯಯನಗಳು ದ್ವೀಪದ[...] ಪ್ರಾದೇಶಿಕ ಪರಿಮಿತಿಯಲ್ಲೇ ಉಳಿದುಬಿಡುತ್ತವೆ.

ಕರ್ನಾಟಕ ಅಧ್ಯಯನಗಳಿಗೆ ಹೊಸಹೆ[...] ಪ್ರತಿಭೆಗಳ ಆಗಮನವು ಇನ್ನಷ್ಟು ಬೇಕಾಗಿದೆ. ಆ[...] ಪ್ರತಿಭೆಗಳು ಮಾತ್ರ ಬಂದರೆ ಸಾಲದು. ಅವಕ್ಕೆ [...] ದೃಷ್ಟಿಕೋನಗಳೂ ಬರಬೇಕು. ಅದರಲ್ಲೂ ಮಹಿ[...] ದೃಷ್ಟಿಕೋನಗಳು ಕರ್ನಾಟಕದ ಚರಿತ್ರೆ ಕಲೆ ಸಂಸ್[...] ಭಾಷೆ ಇತ್ಯಾದಿ ವಿಷಯಗಳಲ್ಲಿ ಮತ್ತಷ್ಟು ದೊ[...] ಪ್ರಮಾಣದಲ್ಲಿ ಪ್ರವೇಶಿಸುವ ಅಗತ್ಯವಿದೆ. ಇದರಿ[...] ಕರ್ನಾಟಕವನ್ನು ಕುರಿತ ಹೊಸ ನೋಟಗಳು ಸಿಗು[...] ಮಾತ್ರವಲ್ಲ, ಈಗಾಗಲೇ ಸಂಸ್ಕೃತಿ ಚಿಂತಕರೆಂದೂ ದೊ[...] ವಿದ್ವಾಂಸರೆಂದೂ ಖ್ಯಾತಿವೆತ್ತಿದವರು, ಮಾಡಿರ[...] ಶೋಧಗಳಲ್ಲಿರುವ ಪರಿಮಿತಿಗಳನ್ನು ತೋರಿಸ[...] ಹಾಗೂ ಅವರು ಅಡಗಿಸಿರುವ ಪ್ರಶ್ನೆಗಳನ್ನು ಎತ್ತ[...] ನೆರವಾಗುತ್ತದೆ.

ಶೈಲಜ ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದಾ[...]

ರೆಡ್ಡಿಗಳು ಎಡೂರಪ್ಪನ್ನ ಹಿಡ ಮಾಡಿ ಕೈಬುಟ್ರು!

ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದು ಗಳು ಮನೆ ಮಠ ಕಳೆದುಕೊಂಡು ಯುಲ್ಲಿದ್ದರೆ, ಈ ಬಿಜೆಪಿಗಳು ತಮಗೆ ತಾವೇ ತ ಸೃಷ್ಟಿ ಮಾಡಿಕೊಂಡು ಮಾನ ರ್ಯಾದೆಯನ್ನು ಬೀದಿಯಲ್ಲಿ ಹರಾಜು ಕೊಂಡಿದ್ದರ ಬಗ್ಗೆ ಮಾತನಾಡುತ್ತ ಬಿದ್ದುಬಿದ್ದು ಸೀರ, ಆಚೆ ಕೇರಿಯ ಅಪಾಪೋಲಿಗಳ



ದಂತೆ ಬಿಜೆಪಿ ಜಗಳವನ್ನು ಪರಿಗಣಿಸಿ ಬಹಳ ರವಾಗಿ ಮಾತು ಮುಂದುವರಿಸಿದಾಗ ಗೊಂಡ ಕಾಳಮಾವ,

"ಬುದ್ಧ ಅದೇನಾರ ಅವುರ ಸುದ್ದಿ ಮಾತಾಡಿ"

"ಇವುರಾಡಿದಾಟ ನೋಡಿ ನಿರಕ್ಕಾದತೇನಣ್ಣ? ಅವುನ ಮಕ ನ್ನೋಡದಿಲ್ಲ ಅನ್ನೊನು, ಇವುನ ಮಕ ನ್ನೋಡದಿಲ್ಲ ಅನ್ನೊನು, ಆದ್ರು ದಾಬದರಾ ನಿಂತಗಂಡು ಬ್ಯಲ್ಲ ತಿನ್ನಿಸಿದ್ರೆ ನಗದೆ ನು ಮಾಡಿ" ಎಂದ.

ಸೀರಮಾವ, ದಳದೋರ ಜಗಳ ನ್ಯನಿಸಿಗಂಡ್ರೆ ನು ಅಲ್ಲ ಕಣೊ. ಅವುರ ಜಗಳ ಾನುಗಟ್ಲೆ ನ್ಯಡದವೆ. ಆ ಕಡೆ ಯಗಡೆ, ಈ ದ್ಯಾವೇಗೌಡ, ಮದ್ಯದಲ್ಲಿ ನಿನ್ನಂಥೋರು ಾನುಗಟ್ಲೆ ಜಗಳ ಮಾಡಿದ್ರು. ಅವುರ ದೆ ಈ ಬಿಜೆಪಿಗಳು ಏನೇನು ಅಲ್ಲ, ಜಲ್ದಿ ಮುಗಿಸಿದ್ರು" ಎಂದ ಉಗ್ರಿ.

ಆದ್ರು ಸೋಬುನ್ನ ತಗದದ್ದು ಅನ್ಯಾಯ " ಎಂದಳು ಜುಮ್ಮಿ.

ಅನ್ಯಾಯ ಅಂತ ನೀನಂತಿ. ನ್ಯಾಯ ಅಂತ ಕಾಚಾರಿ ಅಂತನೆ. ಇದಕೇನೇಳನಾ?"

ಅವುನಿಗೇನು ಮಾಡಿದ್ಲು ಇವುಳು?"

ಎಲ್ಲೋ ಹಿಡಕಳಕ್ಕೋಗ್ಯವುನೆ; ಅವುಳು ಳೆ. ಅದ್ಕ ಇವುನಿಗೆ ಸಿಟ್ಟು ಬಂದಿರಬೇಕು" ಸೀರ ತನ್ನ ಕುಚೋದ್ಯಕ್ಕೆ ತಾನೇ ಗಹಗಹಿಸಿ

, ಅವುನ್ಯಾಕಿವುಳಿಡಕಳಕ್ಕೋದನೊ? ಅವುನ್ಗೆ ಜಯಲಕ್ಷ್ಮಿ ಇರಲಿಲ್ವೆ, ನೀನೊಬ್ಬ?" ಎಂದ

"ಅವುಳಿದ್ರುವೆ ಹೆಂಗಸರ ಚಟ ಇರೊ ನನಮಕ್ಕಳು ಯಾರ್ನ ಅಂದ್ರೆ ಅವುರ್ನ ಹಿಡಕಳಕ್ಕೋಗತಾರಂತೆ ಕಂದ್ಯ. ಅಂಗೆ ಇವುನು ಏನೋ ಮಾಡಕ್ಕೋಗ್ಯವುನೆ. ಅವುಳು ಮದ್ಲೆ ಕಿಲಾಡಿ ಹೆಂಗ್ಸಲವೆ. ಚೋದು ಒದಿಸಿರಬೇಕು. ಅದ್ಕೆ ಆಚಾರಿ ಮಚ್ಚರ ಮಡಗಿಬುಟ್ಟವುನೆ" ಎಂದು ಸೀರ ತನ್ನ ವಾದವನ್ನೆ ಮುಂದುವರಿಸಿದ.

"ಥೂ, ಅದು ಹಿಂಗೆ ಕಣೊ ಆಗಿರದು. ಈ ರೇಣುಕಾಚಾರಿ ಮದ್ದಿಗೆ ಯಾವಾಗ್ಲೂ ಎಡೂರಪ್ಪನಿಂದನೇ ಇರೋನಂತೆ. ಅದ್ಕು ಮದ್ಲು ಪಟೇಲ್ರುತಾ ಇದ್ನಂತೆ. ಪಟೇಲ್ರು ಯಾವಾಗ ಸತ್ತರೊ ಇಲ್ಲಿಗೆ ಬಂದು ಸೇರಿಕಂಡ. ಎಡೂರಪ್ಪನು ಸಂತೆಲಿ ಸಿಕ್ಕಿದ ತಮ್ಮನಂಗೆ ನೋಡಿಕಂಡು ಬತ್ತಾಯಿರುವಾಗ ಇದ್ದಕಿದ್ದಂಗೆ ದ್ಯಾವೇಗೌಡ್ರುನ ಮಗನ ತೆವುಲಿಗೆ ಇವುರಿಗೂ ಅಧಿಕಾರ ಸಿಕ್ಕಿಬುಡ್ತು. ಆಗ ಸಡನ್ನಂತ ಎಡೂರಪ್ಪನತ್ರಕೆ ಶೋಭ ಬಂದು ನಿಂತಗಂಡ್ಳು. ರೇಣುಕಾಚಾರಿಗೆ ಅಲ್ಲಿ ಜಾಗಿಲ್ಲದಂಗಾಯ್ತು. ಅದು ಕ್ರಮೇಣ ವಟ್ಟೆಕಿಚ್ಚಿಗೆ ತಿರಿಕತ್ತು. ಅವುಳ ರಾಜೀನಾಮೆವರಿಗೂ ಬ್ಯಳಕಂಡೋಯ್ತು."

"ಆಟೊಂತರ ಗಂಡುಸ್ರು ಸೇರಿಕಂಡು ಹೆಣ್ಣೆಂಗಸ ರಾಜಿನಾಮೆ ಕೊಡಿಸಿದ್ರಲ್ಲ, ನಾಚಿಗಾಗದಿಲವೆ ಮುಂಡೆ ಮಕ್ಕಳಿಗೆ" ಎಂದಳು ಜುಮ್ಮಿ.

"ರೆಡ್ಡಿ ಬಣಕ್ಕೆ ಬರೀ ಶೋಭನ ರಾಜೀನಾಮೆ ಅಷ್ಟೇ ಬೇಕಿರಲಿಲ್ಲ ಕಣಕ್ಕ. ಇನ್ನ ಇಂಪಾರ್‌ಟೆಂಟು ಮ್ಯಾಟ್ರು ಅವೆ" ಎಂದುಕೊಂಡು ವಾಟಿಸ್ಸೆ ಬಂದ.

"ಇನ್ನಾ ವಿದ್ದವುಲ?"

"ನೋಡಕ್ಕ, ರೇಣುಕಾಚಾರಿಗೆ ಶೋಭನ ರಾಜೀನಾಮೆ ಬೇಕಾಗಿತ್ತು. ರೆಡ್ಡಿಗಳಿಗೆ ಎಡೂರಪ್ಪ ಗಣಿ ಲಾರಿಗಳ ಮೇಲೆ ಹಾಕಿದ ಸಾವುರುಪಾಯಿ ಟ್ಯಾಕ್ಸ್ ತಗಿಬೇಕಿತ್ತು. ತಮಿಗೆ ಬೇಕಾದ ಅಧಿಕಾರಿಗಳ ವರ್ಗಾವಣೆ ಮಾಡಿಸೋಬೇಕಾಗಿತ್ತು. ತಮ್ಮ ಖಾತೆ ವಳಿಕೆ ಯಾರೂ ತಲೆಯಿಕ್ಕದಂಗೆ ಮಾಡಿಕಬೇಕಾಗಿತ್ತು. ಇನ್ನ ಬೆಳ್ಳುಬ್ಬಿ ಅನ್ನೊನಿಗೆ ತಿರಗ ಮಂತ್ರಿಯಾಗಬೇಕಾಗಿತ್ತು. ಅಮ್ಯಾಲೆ ಬೇಳೂರು ಗೋಪಾಲಕೃಷ್ಣ ಅನ್ನೊ ಪೂಲಿಪ್ ಫೆಲೊ ಕ್ಷೇತ್ರದಲ್ಲಿ ದಿವಾಕರ ಅನ್ನೊ ವಕೀಲ ತಿರಗಾಡದು ಬೇಕಾಗಿರಲಿಲ್ಲ, ಜೊತೆಗೆ ಲಿಕ್ಕರ್ ಶಾಪ್ ಓನರ್ ತರ ಇರೊ ಹರತಾಳು ಹಾಲಪ್ಪ ಅನ್ನೊ ಮಂತ್ರಿ ಕಂಡ್ರೆ ಬೇಳೂರಿಗೆ ಬೆಳ್ಳು ಜಜ್ಜಿಕಂಡಂಗಾಗದು. ಇವ್ನೆಲ್ಲ ಟೊಟ್ಟು ಸೇರಿಕಂಡು ರೆಡ್ಡಿಗಳ ಬಂಡಾಯ ಶುರುವಾಯ್ತು. ಸಕ್ಸಸ್ಸೂ ಆಯ್ತು" ಎಂದ ವಾಟಿಸ್ಸೆ.

"ಸಕ್ಸಸ್ ಆಯ್ತು ಅಂತಿಯಾ?"


"ಎಸ್ ಹನ್ನೆರಡನೇ ಶತಮಾನದ ಬಸವಣ್ಣನ್ನ ಮುಗಿಸಿದಂಗೆ ಎಡೂರಪ್ಪನ್ನ ಮುಗಿಸ್ಯಾಕಿದ್ರು."

"ಎಡೂರನ್ಯಾಕೆ ಬಸವಣ್ಣನಿಗೆ ಹೋಲುಸ್ತಿಯೋ?"

"ಸಾರಿ, ಓಲಿಕೆ ಹಿಂದಕೆ ತಗತನಿ. ಎಡೂರಪ್ಪನ್ನ ರೆಡ್ಡಿಗಳು ಇವತ್ತು ಹಿಡ ಮಾಡಿ ಕೈಬುಟ್ಟವುರೆ. ಹಿಡ ಮಾಡಿಸಿಕಂಡ ಮಿಕದಲ್ಲಿ ಸೆಕ್ಸ್ ಪೌರುಷ ಬರದಿಲ್ಲ; ಬರಿ ಹೂಂಕಸರಬವುದಷ್ಟೆ. ಅದ್ಕೆ ನೋಡು ಎಡೂರಪ್ಪಾಗ್ಲೆ ಹೂಂಕರಿಸ್ಯವುನೆ."

"ಏನೂಂಕರಿಸ್ಯವುನ್ನ?" ಎಂದ ಕಾಳಮಾವ.

"ಹಣಕ್ಕೂ ಬಗ್ಗದಿಲ್ಲ, ತೋಳಬಲಕೂ ಬಗ್ಗದಿಲ್ಲ ಅಂದವುನೆ."



"ಇನ್ಯಾತಕ್ಕೆ ಬಗ್ಯನಂತೆ?"

"ಹೈಕಮಾಂಡಿಗೆ ಬಗ್ಗಬವುದು."

"ಇಸಿಸಿ, ಹೈಕಮಾಂಡು ರೆಡ್ಡಿಗಳ ಹಣಬಲ ತೋಳಬಲಕೆ ಹೆದ್ರಿಕಂಡು ಎಡೂರಪ್ಪನ್ನ ಕೆಡಗಿರುವಾಗ ಇವುನ ಮಾತಿಗೆ ಬ್ಯಲೆ ಬಂದತೇನೊ ವಾಟಿಸ್ಸೆ?" ಎಂದ ಉಗ್ರಿ.

"ಎಡೂರಪ್ಪ ಅನ್ನೊ ಮಾತಿನ ಅರ್ಥನೆ ಬೇರೆ ಕಣೊ ಉಗ್ರಿ. ಪರೆಗ್‌ಚಾಂಪಲ್ ನಾನಿಸ್ಗ ಹತ್ತು ವರ್ಸ ಮುಖ್ಯಮಂತ್ರಿ ಅಂದ. ಅಂಗಂದ್ರೇನು? ಅದು ಅವುನಾಸೆ, ಆದ್ರೆ ಅಲ್ಲಿಗಂಟ ಇರದಿಲ್ಲ, ಹಣ ತೋಳಬಲಕ್ಕೆ ಬಗ್ಗದಿಲ್ಲ ಅಂದವುನೆ. ಅಂಗದ್ರೇನೂ ಅಂದ್ರೆ, ಆ ಯರದು ಬಲಕ್ಕೂ ಓಗ್ಗಾಮುಗ್ಗ ಆಗ್ಯವುನೆ ಅಂತ. ಇನ್ನ ಶೋಭಕನ್ಸ ರಾಣಿ ಅಬ್ಬಕ್ಕ ಅನ್ನಂಗೆ ಹೊಗಳ್ಯವುನೆ. ತ್ಯಾಗ, ಬಲಿದಾನ, ನಿಷ್ಠೆ, ಶ್ರಮ ಇಂತ ಪದನ್ನಲ್ಲ ಅಗ್ಗವಾಗಿ ಬಳಸಿಬುಟ್ಟವುನೆ. ಅದೂ ಅಲ್ದೆ ಹೆಣ್ಣುಮಗಳಿಗೆ ಅನ್ಯಾಯ ಮಾಡಿದೆ ಅಂತ ಹೆದ್ರಿಕಂಡು ಚಾಮುಂಡಿ ಪೂಜೆ ಮಾಡಿದನಂತೆ."

"ಸೋಬ ಮುಂದೇನು ಮಾಡ್ತಳಂತ್ಲ?" ಎಂದಳು ಜುಮ್ಮಿ.

"ಈಗ ನೀನೇನು ಮಾಡ್ತಯಿದ್ದಿ ಅದನ್ನೆ ಮಾಡಬವುದು ಕಣಕ್ಕ."

"ಸರಿಯಾಗೇಳ್ಳ."

"ಸೋಷಿಯಲ್ ಸರ್‌ವಿಸ್ ಮಾಡ್ತಳಂತೆ."

"ಅಂಗಂದ್ರೇನು?"

"ಆರೆಸೆಸ್ ಮನೆಲಿ ಯಾರಿಗೊ ಮದುವೆ ಆಗಿಲ್ಲ ಅಂತ ಇಟ್ಟಕೊ, ಗಂಡುಡುಕ್ತಳೆ, ಮದುವೆ ಮಾಡ್ತಳೆ."

"ಅವುಳೆ ಗಂಡುಡುಕಿ ಮದಿವಾಗಕ್ಯಾಯ್ತಿರಲಿಲ್ವೆ."

"ಮದುವೆ ಆಗಿದ್ರೆ ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಕ್ಯಾಯ್ತೇನಕ್ಕ? ಪೂಲಿಸ್ ಫೆಲೊ ತರ ಮಾತಾಡಬ್ಯಾಡ. ಒಂದು ಬೇಕು ಅಂದ್ರೆ ಇನ್ನೊಂದು ತ್ಯಾಗ ಮಾಡಬೇಕು."

"ಆದ್ರೆ ಈಗ ಯರಡ್ನು ತ್ಯಾಗ ಮಾಡಿದಂಗಾಯ್ತಲ್ಲೊ?" ಎಂದ ಉಗ್ರಿ.

"ಅದವುರೆ ಮಾಡಿಕಂಡಿದ್ದು ಕಣೊ. ಅಂಥ ಪಟೇಲ್ರಿಗೇ ಇಲ್ಲದ ಕೆಟ್ಟೆಸರು ಎಡೂರಪ್ಪನಿಗೆ ಬತ್ತು. ಅವುಳಿಗೊಂದು ಖಾತೆ ಕೊಟ್ಟ ಮ್ಯಾಲೆ ಅವುಳಷ್ಟಕ್ಕೆ ಅವುಳ ಬುಡಬೇಕಾಗಿತ್ತು. ಜ್ವತೆಲಿ ಕರಕಂಡು ತಿರುಗಬಾರದಿತ್ತು" ಎಂದ ವಾಟಿಸ್ಸೆ.

"ಅಂತೂ ಸೀತೆ ಹುಟ್ಟ ಲಂಕೆ ಹಾಳಾಯ್ತು ಅನ್ನಂಗೆ ಎಡೂರಪ್ಪನ ರಾಜ್ಯ ಹಾಳಾಯ್ತು ಅನ್ನು" ಎಂದ ಕಾಳಮಾವ.

"ಒಂಥರದಲ್ಲಿ ಅಂಗೆ ಆಯ್ತು ದ್ವಡಪ್ಪ, ಇಟೀಸ್ ಸೇಂಟು ಆರೆಸೆಸ್ ಕಮ್ಯುನಿಟಿ" ಎಂದ ವಾಟಿಸ್ಸೆ. ●



ತೀರಿಕೊಂಡವರ ತೀರಿಕೊಂಡ ಕೃತಿಗಳು

ತಮ್ಮನ್ನು ತಾವೇ ನೋಡಿಕೊಳ್ಳುವ, ತಮ್ಮಿಂದ ಹೊರಗಿರುವುದನ್ನು ಗಮನಿಸಿ ತಮ್ಮ ವ್ಯಕ್ತಿತ್ವದ ಭಾಗವಾಗಿಸಿಕೊಳ್ಳಲು ಬೇಕಾದ ಪ್ರೀತಿ ಮತ್ತು ವಿನಯ ಇಲ್ಲದ ಸಂಸ್ಕೃತಿ ನಮ್ಮದೆಂದು ಕೆಲವೊಮ್ಮೆ ಅನ್ನಿಸುತ್ತದೆ. ಇಲ್ಲಿ ತಂದೆಯ ಕಲಾಕೃತಿಗಳಿಗೂ, ಮಕ್ಕಳ ಆಸಕ್ತಿಗಳಿಗೂ ಸಂಬಂಧವಿರುವುದಿಲ್ಲ. ಹೀಗಾಗಿ ಒಬ್ಬ ಸಾಹಿತಿ ತೀರಿಕೊಂಡ ಕೆಲವೇ ವರ್ಷಗಳಲ್ಲಿ ಆತನ ಪುಸ್ತಕ ಪ್ರಕಟಿಸುವವರು ಇರುವುದಿಲ್ಲ, ಪ್ರಕಟಿಸಿದರೂ ಸಂಭಾವನೆಯನ್ನು ಯಾರಿಗೆ ಕಳಿಸುವುದೆಂದು ಗೊತ್ತಿರುವುದಿಲ್ಲ. ನಾನು ಹತ್ತಾರು ಉದಾಹರಣೆ ಕೊಡಬಲ್ಲೆ. ರಮಾನಂದ ಅವರ ಪ್ರಬಂಧಗಳು ಎಲ್ಲೂ ಸಿಕ್ಕುತ್ತಿಲ್ಲ. ಅವುಗಳನ್ನು ಪ್ರಕಟಿಸೋಣವೆಂದರೆ ಯಾರನ್ನು ಕೇಳುವುದೆಂದು ಹುಡುಕಿದರೂ ...ವುದಿಲ್ಲ. ಮೊನ್ನೆ ತೀರಿಕೊಂಡ ವೆಂಕಟರಾಮಪ್ಪನವರ ಪ್ರಬಂಧಗಳ ಸಂಕಲನವೊಂದಕ್ಕಾಗಿ ಕೇಳಿ ಉತ್ತರ ...ಯದೆ ಸುಸ್ತಾದೆ. ಹೀಗೆಯೇ ಅನೇಕ ಕೃತಿಗಳು ಸಿಕ್ಕುವುದಿಲ್ಲ. ರಾಜರತ್ನಂ ಅವರ 'ಹನಿಗಳು' ಎಂಬ ...ಬಂಧಗಳ ಸಂಕಲನ ಸಿಗುತ್ತಿಲ್ಲ. ಅಳಸಿಂಗಾಚಾರ್ಯರ ರಾಮಾಯಣ ಕಾಣುತ್ತಿಲ್ಲ. ಡಿ.ವಿ. ಗುಂಡಪ್ಪನವರು ...ಖಲೆ ಸಾರ್ವಜನಿಕ ಸಂಸ್ಥೆ' ಸ್ಥಾಪಿಸಿ ಹೋಗಿದ್ದರೂ ಅವರ ಪುಸ್ತಕಗಳು ಅಲ್ಲಿ ಸಿಕ್ಕುತ್ತಿಲ್ಲ. ಸರ್ಕಾರ ಅವನ್ನೆಲ್ಲ ...ಸುವವರೆಗೆ ಕಾಯಬೇಕು.

...ಸಾಹಿತಿ ಬದುಕಿರುವವರೆಗೆ ತನ್ನ ಪುಸ್ತಕ ಅಚ್ಚಾಗುವುದನ್ನು ನೋಡಿ ಆನಂದಿಸಿ ಸಾಯುತ್ತಾನೆ–ಓದುಗರು ...ಹೊಸ ತಲೆಮಾರುಗಳ ಬೆನ್ನು ಹತ್ತುತ್ತಾರೆ. ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ...' ಎಂಬ ಪುಸ್ತಕವನ್ನು ಈಚೆಗೆ ನೋಡಿದ್ದೀರಾ? ಯಾವನೋ ಅಯ್ಯಂಗಾರಿ ತಲೆ ಕೆಡಿಸಿಕೊಳ್ಳದಿದ್ದರೆ ...ನವರ ಪುಸ್ತಕಗಳಿಗೂ ಈ ಗತಿಯೇ ಬರಲಿದೆ.....




"ಭೂಷಣರು"

ಮೊನ್ನೆ ಎದ್ದು ದಿನಪತ್ರಿಕೆ ನೋಡಿದಾಗ ಮುಖಪುಟದಲ್ಲಿ ಸರೋಜಾದೇವಿ, ಮಲ್ಲಿಕಾರ್ಜುನ ಮನ್ಸೂರ್, ಗಿರೀಶ್ ಕಾರ್ನಾಡ್, ಅಟಲ್ ಬಿಹಾರಿ ವಾಜಪೇಯಿ ಮುಂತಾದವರ ಫೋಟೋ ನೋಡಿದೊಡನೆ ಶಾಕ್ ಆಯಿತು. ಎಲ್ಲಾದರೂ ಏರೋಪ್ಲೇನ್ ಬಿದ್ದುಹೋಯಿತೋ ಎಂದು ಭಯವಾಗಿ ವಿಷಯ ಓದಿದರೆ ಅವರಿಗೆಲ್ಲ ಪದ್ಮಭೂಷಣ, ವಿಭೂಷಣ ಇತ್ಯಾದಿ ಪ್ರಶಸ್ತಿಗಳು ಬಂದಿದ್ದವು. ಈ ಪದ್ಮಶ್ರೀ, ಪದ್ಮಭೂಷಣಗಳು ಏನು ಮಾಡುತ್ತವೆಂದು ನನಗೆ ಅರ್ಥವಾಗಿಲ್ಲ. ಹೋದವರ್ಷ ಪದ್ಮವಿಭೂಷಣನಾದ ಕಣ್ಣಿನ ವೈದ್ಯನೊಬ್ಬ ನನಗೆ ಲಂಚ ಕೊಡಲು ಯತ್ನಿಸಿದ್ದರ ಬಗ್ಗೆ ಬರೆದಿದ್ದೆ, ನಿಮಗೆ ನೆನಪಿರಬಹುದು. ಆಮೇಲೆ ಇದೇ ರೀತಿಯ ಪದ್ಮಶ್ರೀಯೋ, ರಾಜ್ಯೋತ್ಸವ ಪ್ರಶಸ್ತಿಯವನೋ ಒಬ್ಬ ಶಿವಮೊಗ್ಗದಲ್ಲಿ ಮಾನಸಿಕ ಚಿಕಿತ್ಸೆ ಮಾಡುವುದಾಗಿ ಹೇಳಿ ಜನರನ್ನು ವಂಚಿಸುತ್ತಿರುವ ಬಗ್ಗೆ ಕಳೆದ ಸಂಚಿಕೆಯಲ್ಲಿ ಬರೆದಿದ್ದೇವೆ. ಈತನ ಬಗ್ಗೆ ಪತ್ರಗಳು ಬರುತ್ತಲೇ ಇವೆ. ಈ ಸಮಾಜದ್ರೋಹಿ ಮೊನ್ನೆ ಗಿರೀಶ್ ಕಾರ್ನಾಡರೊಂದಿಗೆ ಚಲನಚಿತ್ರ ಮಾಡುತ್ತಿರುವುದಾಗಿ ಓದಿದ್ದೆ. ಇದೆಲ್ಲ ನೋಡಿದರೆ ಗಿರೀಶ್‌ಗೆ ಈ ಬಗೆಯ ಪ್ರಶಸ್ತಿಗಳ ಅರ್ಹತೆ ಇರುವಂತಿದೆ. ಇವತ್ತು ಬೆಳಗ್ಗೆ ನಮ್ಮಲ್ಲಿಗೆ ಬಂದಿದ್ದ ದಿಲ್ಲಿ ಸಂಪರ್ಕದ ಒಬ್ಬರು, "ಈ ಪ್ರಶಸ್ತಿಗಳೆಲ್ಲ ಬರುಬರುತ್ತಾ ಆಸ್ಥಾನ ವಿದ್ವಾನ್‌ಗಳಿಗೆ ಕೊಡುವ ಮನ್ನಣೆಗಳಂತೆ ಆಗುತ್ತಿವೆ. ದಿಲ್ಲಿಯ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷ ಗಿರೀಶ್‌ಗೆ ಒಂದು ಭೂಷಣ, ಅಲ್ಲಿಯ ಉಪಾಧ್ಯಕ್ಷ ಕೃಷ್ಣನ್‌ಗೆ ಇನ್ನೊಂದು ಭೂಷಣ. ತುಂಬ ಸೊಗಸಾಗಿದೆ!" ಎಂದು ಹೇಳಿದರು.

ಇದಕ್ಕೆ ಸರಿಯಾಗಿ ಗಿರೀಶ್ ಈ 'ಭೂಷಣ'ದ ಬಗ್ಗೆ ಪ್ರತಿಕ್ರಿಯೆ ನೀಡುತ್ತ ತಾವು ಇದರಿಂದ 'ಥ್ರಿಲ್' ಆಗಿರುವುದಾಗಿ ಹೇಳಿಕೊಂಡಿದ್ದಾರೆ. ಇದನ್ನು ಕೇಳಿದ ಅವರ ಚೇಲರಿಗೆ ನಿಜಕ್ಕೂ ಥ್ರಿಲ್‌ಗಿಂತ ಹೆಚ್ಚಿನದೇನೋ ಆಗಿರಲೇಬೇಕು!


–ಫೆಬ್ರವರಿ 2, 1992



ಪೊಲೀಸ್ ಒಳಗೊಂದು ನೈತಿಕ ಪೊಲೀಸು!

ನೈತಿಕತೆ ಅನ್ನುವುದು ಪರಮಪವಿತ್ರ. ಆದುದರಿಂದ ಅದನ್ನ ಜತನವಾಗಿ ಕಾಪಾಡಿಕೊಳ್ಳುವುದು ಭಾರತೀಯ ಮಹಿಳೆಯರ ಪವಿತ್ರ ಕರ್ತವ್ಯ ಅನ್ನೋದು ಲಾಗಾಯ್ತಿನಿಂದ ಬಂದಿರುವ ಸಂಪ್ರದಾಯವೇ ಆಗಿದೆ. ಅವರೇನಾದರೂ ಅದನ್ನ ಯದ್ವಾತದ್ವಾ ಉಡಾಯಿಸಿಬಿಟ್ಟರೇನು ಗತಿ ಎಂದು ಭಾರತೀಯ ಪುರುಷ ಸಿಂಹಗಳು ಹಾಗಾಗದಂತೆ ಕಾವಲು ಕಾಯುತ್ತಾ ಇರುತ್ತವೆ. ಸಂಘಪರಿವಾರದವರು ಹಿಂದೂ ಸ್ತ್ರೀಯರ ನೈತಿಕತೆ ಸುತ್ತ ಭದ್ರಕೋಟೆ ನಿರ್ಮಿಸಿದ್ದರೂ ಒಮ್ಮೊಮ್ಮೆ ಅದರಲ್ಲೂ ನುಸುಳುವುದುಂಟು. ಇಂತಹ ಅಸಂಸ್ಕೃತ ನಡವಳಿಕೆ ಗಮನಕ್ಕೆ ಬಂದ ತಕ್ಷಣ ತಮ್ಮ ಮಹಿಳೆಯರನ್ನು ಹೊಡೆದು ಬಡಿದು ಸರಿಮಾರ್ಗಕ್ಕೆ ತರುತ್ತಿರುವುದು ಪರಿವಾರಕ್ಕೆ ಸಮಾಧಾನ ತರುವ

ಅಣಕ



ಎಚ್.ಎಲ್. ಕೇಶವಮೂರ್ತಿ

ಸಂಗತಿಯಾಗಿದೆ. ಅವರ ಹೆಂಗಸರ ನೈತಿಕತೆ ಅವರು ಕಾಪಾಡಿಕೊಂಡರೆ ನಮ್ಮ ಮಹಿಳೆಯರ ನೈತಿಕತೆಯನ್ನು ನಾವು ಕಾಪಾಡಬಾರದೆ ಎಂಬ ಧರ್ಮಬುದ್ಧಿಯಿಂದ ಪ್ರೇರಿತವಾದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕೆಲವು ಪಡ್ಡೆ ಹುಡುಗರು ಸಂಘ ಪರಿವಾರದ ವಿರುದ್ಧ ಸಮರವನ್ನೇ ಸಾರಿ ಅವರಂತೆಯೇ ಕಾರ್ಯಪ್ರವೃತ್ತರಾಗುತ್ತಿರುವುದು ಕಂಡು ಬರುತ್ತಿದೆ. ಅಂತೂಇಂತೂ ಇವೆಲ್ಲ ಹಿಂದೂ-ಮುಸ್ಲಿಂ ಮಹಿಳೆಯರ ನೈತಿಕತೆ ಕಾವಲು ಕಾಯುತ್ತಿವೆ ಅಂದ ಹಾಗಾಯಿತು. ಮಹಿಳೆಯರಿಗೆ ಇದರಿಂದ ಆಘಾತ ಆಗಬಹುದಾದರೂ ನೈತಿಕತೆ ಕಾಪಾಡುವ ದೃಷ್ಟಿಯಿಂದ ಇದನ್ನು ಪರಮಪವಿತ್ರ ಕಾರ್ಯ ಎಂದು ಪರಿಗಣಿಸಬಹುದಾಗಿದೆ!

ಉಡಿಪುಡಿ ಸಂಘಟನೆಗಳೆಲ್ಲ ಮಹಿಳೆಯರ ನೈತಿಕತೆ ಕಾಪಾಡಲು ಇಷ್ಟೊಂದು ಮುತುವರ್ಜಿ ವಹಿಸುತ್ತಿರುವಾಗ, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ರಕ್ಷಣೆ ನೀಡಬೇಕಾದ ನಾವು ಸುಮ್ಮನೆ ಕುಳಿತಿರುವುದು ತರವಲ್ಲ ಎಂದು ಭಾವಿಸಿದ ಬೆಂಗಳೂರು ದಕ್ಷಿಣವಲಯ ಪೊಲೀಸರು ಮಹಿಳೆಯರ ನೈತಿಕತೆಗೆ ಒತ್ತು ನೀಡಲು ನಿರ್ಧರಿಸಿ 'ನೈತಿಕ ಪೊಲೀಸು' ಆಗಲು ನಿರ್ಧರಿಸಿದಂತಿದೆ. ಅಂದರೆ ಪೊಲೀಸ್ ಒಳಗೊಂದು ನೈತಿಕ ಪೊಲೀಸು!

ಪೊಲೀಸ್ ನೈತಿಕ ಪೊಲೀಸ್‌ನವರು ಏನು ಮಾಡಿದರಪ್ಪ ಅಂದರೆ... ಸರಗಳ್ಳತನವನ್ನೇ ಕಸುಬು ಮಾಡಿಕೊಂಡಿರುವವರು ಹಾದಿಬೀದೀಲಿ ಮಹಿಳೆಯರ ಬಳಿ ತಮ್ಮ ಕೈಚಳಕ ತೋರಿಸುತ್ತಾರಲ್ಲ ಅದರ ಬಗ್ಗೆ ಎಚ್ಚರಿಸಲು ಬ್ಯಾನರ್ ಬರೆಸಲು ಯೋಚಿಸಿದರು. ನೋಡಿ ನೋಡಿ ಅಭ್ಯಾಸ ಆದವರು ಅದರ ಕಡೆ ಗಮನಾನೇ ನೀಡಲ್ಲ ಅನ್ನುವುದು ಅನುಭವದಿಂದ ತಿಳಿದುಬಂದ ವಿಷಯ ಆಗಿತ್ತು. ಹೃದಯಕ್ಕೆ ನಾಟುವಂತೆ ವಿಷಯ ಬರೆಸಿದರೆ ಅದು ಮನಸ್ಸಿನ ಆಳದಲ್ಲಿ ಬೇರೂರುತ್ತೆ, ಅಂತಹದ್ದನ್ನು ಬರೆಸಬೇಕು ಅಂತ ಬಲೇ ತಲೆಕೆಡಿಸಿಕೊಂಡರು. ಪೊಲೀಸ್ ಸ್ಟೇಷನ್ನುಗಳು ಅಂದರೆ ಹಿಂದೂ ದೇವಾಲಯಗಳ ಗರ್ಭಗುಡಿ ಹಾಗೆ ಕಾಣ್ತಾವಲ್ಲವಾ ಅಲ್ಲಿನ ಪೂಜಾರಿಗಳ ಬುದ್ಧಿಗೆ ಕುಂಕುಮ ನೀಡಿದ ತಕ್ಷಣ ಮಾಂಗಲ್ಯಕ್ಕೆ ಹಚ್ಚಿ ಮಾಂಗಲ್ಯವನ್ನು ಎರಡೂ ಕೈಗಳಿಂದ ಹಿಡಿದು ಕಣ್ಣಿಗೊತ್ತಿಕೊಳ್ಳುವ ದೃಶ್ಯವನ್ನು ನೋಡಿ ಸಂತೃಪ್ತಿಯನ್ನು ಹೊಂದಿದ ಪುರುಷ ಪುಂಗರಲ್ಲವೇ ಅವರು- ಮಿಂಚಿನ ಸಂಚಾರವಾಯಿತಂತೆ. 'ಮಾಂಗಲ್ಯ ಪವಿತ್ರ' ಅಂತ ಬರೆಸಬೇಕು! ಅದೇ ಸರಿಯಾದ ಮಾತು. ಭಾರತೀಯ ಪರಂಪರೆಯನ್ನು ಉಳಿಸಿದ ಹಾಗೂ ಆಯಿತು, ಮಹಿಳೆಯರಿಗೆ ಎಚ್ಚರಿಕೆ ನೀಡಿದಂತೆಯೂ ಆಯಿತು ಎಂದೆಲ್ಲ ಯೋಚಿಸಿ ಬ್ಯಾನರ್‌ಗಳನ್ನು ಡಿಸೈನ್ ಮಾಡಿಸಿದರು. ಅದು ಹೇಗಿತ್ತಪ್ಪ ಅಂದರೆ...

ಇಬ್ಬರು ಬೈಕ್ ಸವಾರರು ಮಹಿಳೆಯ ಕತ್ತಿನಿಂದ ಚಿನ್ನದ ಸರ ಕೀಳುವ ದೃಶ್ಯ, ಸರಗಳ್ಳರಿದ್ದಾರೆ ಎಂಬ ಎಚ್ಚರಿಕೆ ಮಾತಿನ ಜೊತೆಗೆ ಕೆಂಪು ಹಿಂಬದಿ ಇರುವಂತೆ 'ಮಾಂಗಲ್ಯ ಪವಿತ್ರವಾದದ್ದು' ಎಂಬ ಘೋಷವಾಕ್ಯ! ಥೇಟ್ ಸಿನಿಮಾ ಶೈಲಿಯ ಅದನ್ನು ನೋಡಿ ಕೆಲವರು 'ಮಾಂಗಲ್ಯ ಪವಿತ್ರ' ಎನ್ನುವ ಸಿನಿಮಾ ಬ್ಯಾನರು ಇರಬೇಕೆಂದು ಭ್ರಮಿಸಿದ್ದೂ ಉಂಟಂತೆ!

ಮಹಿಳೆಯರ ನೈತಿಕತೆ ರಕ್ಷಿಸಲು ಇಷ್ಟೆಲ್ಲ ಶ್ರಮವಹಿಸಿದ್ದಕ್ಕೆ 'ಭೇಷ್, ಭೇಷ್' ಅಂತ ಪೊಲೀಸರ ಬೆನ್ನು ತಟ್ಟಬೇಡವೆ ಜನ ಅನ್ನೋರು. ಅವರ ಮೂಗಿಗೆ ಪರೋಕ್ಷವಾಗಿ ಹಿಂದೂ ಮಹಿಳೆಯರಿಗೆ ಮಾತ್ರ ಪೊಲೀಸರ ರಕ್ಷಣೆ ಅನ್ನುವ ವಾಸನೆ ಬಡಿದಿದೆ. ಮಾಂಗಲ್ಯ ಇಲ್ಲದವರಿಗೆ ಇವರ ರಕ್ಷಣೆ ಇಲ್ಲವಾ, ಬೀದಿಗಳಲ್ಲಿ ಮಹಿಳೆ ರಕ್ಷಣೆಗೆ ಗಂಡಸು ಕಟ್ಟಿದ ಮಾಂಗಲ್ಯದ ಮೊರೆ ಹೋಗಬೇಕಾ ಎಂದೆಲ್ಲಾ ಕೇಳ್ತಾ ಬಿದ್ದವ್ರೆ. ಅಲ್ಲಮ್ಮ ಹೆಂಗಸು ಅಂತ ಇದ್ದರೆ ಅದೊಂದು ಇದು. ಶೋಭಾ ಕರಂದ್ಲಾಜೆ ವಿಷಯ ತಗೊಳ್ಳಿ. ಹಿಂದೆಮುಂದೆ ಗಂಡಸರೆನ್ನಿಸಿಕೊಂಡವನು ಇಲ್ಲದಿದ್ದುದಕ್ಕೆ ಮಂತ್ರಿಗಿರಿಯಿಂದಲೇ ಕಿತ್ತು ಬಿಸಾಕಿದರು. ಹೆಂಗಸು ಅಂದಮೇಲೆ ರಕ್ಷಣೆಗೆ ಪುರುಷ ಸಿಂಹ ಒಂದು ಇದ್ದೇ ಇರಬೇಕು ಅನ್ನೋದು ಭಾರತೀಯ ಪರಂಪರೆ!



ಪೊಲೀಸ್ ನೈತಿಕ ಪೊಲೀಸರ ಭಾರತೀಯ ಚಿಂತನೆಗಳನ್ನು ಅವರ ವಿರುದ್ಧ ಎಗರಾಡುತ್ತಿರುವವರಿಗೆ ಮನವರಿಕೆ ಮಾಡಿಕೊಡುವುದು ಹೇಗೆ ಅಂತ....

ಸಿಕ್ಕಿತ್ತು ರಹದಾರಿ!

ಹೊರಗಾಗಿದ್ದ ಶಾಸಕರೆಲ್ಲ ಮಡಿ ಉಟ್ಟು ಶುಚಿರ್ಭೂತರಾಗಿ ಹಿಂತಿರುಗಿದ್ದಾರೆ. ಅವರೇನು ಸುಖಾ-ಸುಮ್ಮನೆ ಹೈದರಾಬಾದಿಗೆ ಹೋಗಿರಲಿಲ್ಲ. ಆಂಧ್ರಪ್ರದೇಶದಲ್ಲಿ ನೆರೆಹಾವಳಿ ಬಂದಿತ್ತಲ್ಲ ಅಲ್ಲಿ ಹೇಗೆ ಪರಿಹಾರ ಕಾರ್ಯ ಕೈಗೊಂಡಿದ್ದಾರೆ ಎಂಬುದರ ಅಧ್ಯಯನ ಮಾಡುತ್ತಿದ್ದರಂತೆ!

ಇತ್ತ ದೂರ್ವಾಸ ಸ್ವರೂಪಿ ಯಡ್ಯೂರಪ್ಪನವರು ವೀರ ಯೋಧನಂತೆ 'ಈ ಯಡ್ಯೂರಪ್ಪ ಯಾರಿಗೂ ಬಗ್ಗುವುದಿಲ್ಲ' ಎಂದು ಎದೆ ತಟ್ಟಿ ಆರ್ಭಟಿಸಿದರು. (ಬಳಿಗಾರ್ ಹಾಗೂ ಶೋಭಾ ಕರಂದ್ಲಾಜೆ ತಲೆದಂಡ ನೀಡಿದರು! ಆಮೇಲೆ ಕಣ್ಣೀರು ಸುರಿಸಿ ಪಾಪ ನಿವಾರಿಸಿಕೊಂಡರು!) ಜನತೆಯನ್ನೇ ಪ್ರಶ್ನಿಸಿದರು-'ಪ್ರಾಮಾಣಿಕನಾಗಿರುವುದೇ ಅಪರಾಧವೇ?'

ಆಹಾ! ಎಂತಹ ಮಾತು!

ಅತ್ತ ರೆಡ್ಡಿ ಗ್ಯಾಂಗೂ ಇದೇ ಮಾತನ್ನು ಹೇಳುತ್ತಿತ್ತು, ನೆರೆಹಾವಳಿಯಿಂದ ತತ್ತರಿಸಿದ ಉತ್ತರ ಕರ್ನಾಟಕದ ಜನರ ಕಣ್ಣೀರು ಒರೆಸುವ ಪ್ರಾಮಾಣಿಕ ಪ್ರಯತ್ನಕ್ಕೆ ಯಡ್ಯೂರಪ್ಪ ಅಡ್ಡ ಬಂದರು ಎನ್ನುತ್ತಿತ್ತು!

ಪ್ರಾಮಾಣಿಕರು ಯಾರು ಎಂದು ಚಿಕ್ಕಮಕ್ಕಳೇನಾದರೂ ಪ್ರಶ್ನಿಸಿದರೆ ಉತ್ತರ ಸುಲಭ. ಯಡ್ಡಿ-ರೆಡ್ಡಿ ಗ್ಯಾಂಗ್ ತೋರಿಸಿದರಾಯಿತು!

ಅವರನ್ನು ಇವರು ಹೀಯಾಳಿಸಿದರು. ಇವರನ್ನ ಅವರು ಬಾಯಿಗೆಬಂದಂತೆ ಅಂದರು.

ಜಗ್ಗೇಶ್ ಸಿನಿಮಾಗಳಲ್ಲಿ ಇಬ್ಬರು ವಾಚಾಮಗೋಚರವಾಗಿ ಬೈಯುತ್ತಾ ಇರುವಾಗ ನಾಯಿಗಳು ಬೊಗಳಿದ ಶಬ್ದ ಕೇಳುತ್ತಲ್ಲ ಅಂತಹದ್ದೇ ದೃಶ್ಯ ಇಲ್ಲಿ ರೂಪುಗೊಂಡಿತ್ತು.

ನಡುಬೀದಿಯಲ್ಲೇ ನಡೆದಿತ್ತು ಮೈಥುನ!

ಜನರಿಗೆ ಅಸಹ್ಯ ತರಿಸಿತ್ತು

ಭಾಜಪ ಮುಖಂಡರಿಗೆ ಇದು - ಕುಟುಂಬ ಕಲಹ!

ದೃಶ್ಯ ಬದಲಾವಣೆ

ರೆಡ್ಡಿ-ಯಡ್ಡಿ ಪರಸ್ಪರ ಕೇಕ್ ತಿನ್ನಿಸಿದರು.

(ಇದರ ಹಂಚಿಕೆಯದ್ದೇ ಕಿತ್ತಾಟ ಇರಬೇಕು)

ಯಡ್ಡಿ ಹಿರಿಯಣ್ಣ ಆದರು


ರೆಡ್ಡಿ ತಮ್ಮ ಆದರು

ತಾಯಿ ಅಂತ ಒಬ್ಬರು ಇರಬೇಕಲ್ಲ. ಸುಷ್ಮಾ ಸ್ವರಾಜ್ ತಾಯಿ ಆದರು!

ತಂದೆ? ಅವರೂ ಇದ್ದಾರೆ. ನರ್ಸ್ ರೇಣುಕಾಚಾರ್ಯರಿಗೆ ಯಡ್ಡಿ ತಂದೆ ಆದರು!

ಇನ್ನು ಯಾರನ್ನೂ ಯಾರೂ ಪ್ರಶ್ನಿಸುವಂತಿಲ್ಲ!

ರಾಜ್ಯ ಕೊಳ್ಳೆ ಹೊಡೆಯಲು ಎಲ್ಲರಿಗೂ ದಕ್ಕಿದೆ ರಹದಾರಿ! ●



ತೆಲುಗು ಮಾಫಿಯಾ ರಾಜ್ಯಕ್ಕೆ ಅಪಾಯಕಾರಿ

ಬಿಜೆಪಿ ಸಂಪೂರ್ಣವಾಗಿ ಮೌಢ್ಯ ತುಂಬಿರುವ ಪಕ್ಷವೆಂಬುದು ನಿಜ (ಲಂಕೇಶ್ 18-11-2009). ಹಿಂದೂತ್ವಕ್ಕೂ ಮೌಢ್ಯಕ್ಕೂ ಮೂರು ಸಾವಿರ ವರ್ಷಗಳ ಗಾಢ ನಂಟು!. ಮೌಢ್ಯ ವಿರೋಧಿಸಿದ್ದಕ್ಕಾಗಿಯೇ ಚಾರ್ವಕನನ್ನು ಜೀವಂತ ಸುಟ್ಟಿದ್ದು, ಬೌದ್ಧ ಧರ್ಮವನ್ನು ಭಾರತದಿಂದ ಓಡಿಸಿದ್ದು, ಶ್ರೀರಾಮನೇ ಮುಗ್ಧ ಶಂಭೂಕನನ್ನು ಕೊಂದಿದ್ದು. ಹಾಗಿರುವಾಗ ಹಿಂದೂತ್ವವಾದಿ ಪಕ್ಷವಾದ ಬಿಜೆಪಿಯು ಮೌಢ್ಯವನ್ನು ಬಿಟ್ಟಿರಲು ಹೇಗೆ ಸಾಧ್ಯ? ಮೇಲಾಗಿ ರಾಜಕಾರಣಿಗಳು ಹಾಗೂ ಸಿನಿಮಾ ರಂಗದವರು ಮೂಢನಂಬಿಕೆಗಳ 'ರಾಯಭಾರಿಗಳು' ತಾನೇ?

ಇನ್ನು ಕರ್ನಾಟಕ ಸರಕಾರವನ್ನು ಅಲ್ಲಾಡಿಸುತ್ತಿರುವ ಗಣಿಕಳ್ಳ ರೆಡ್ಡಿಗಳ ಬಗ್ಗೆ ಹೇಳಬೇಕೆಂದರೆ, ರಾಯಲಸೀಮೆ ತೆಲುಗರಲ್ಲಿ ದುರಹಂಕಾರ ಹಾಗೂ ಅಪರಾಧ ಪ್ರವೃತ್ತಿ ರಕ್ತಗತವಾಗಿದೆ. (ಮುಸ್ಲಿಮರಲ್ಲಿ ಅಪರಾಧ ಪ್ರವೃತ್ತಿ ಹೆಚ್ಚು ಎನ್ನುವ 'ಹೊಸದಿಗಂತ' ದಿನಪತ್ರಿಕೆಯವರು ರಾಯಲಸೀಮಾ ಪ್ರದೇಶದಲ್ಲಿ ಇದ್ದು ಬಂದಿದ್ದರೆ ತಮ್ಮ ಅಭಿಪ್ರಾಯ ಅಗತ್ಯವಾಗಿ ಬದಲಿಸುತ್ತಿದ್ದರು)

ಈ ಕಾರಣಕ್ಕಾಗಿಯೇ ತೆಲಂಗಾಣ ಹಾಗೂ ಉತ್ತರ ಆಂಧ್ರದ ತೆಲುಗರೇ ಈ ರಾಯಲಸೀಮೆಯ ತೆಲುಗರನ್ನು ದ್ವೇಷಿಸುತ್ತಾರೆ. ಹೈದ್ರಾಬಾದ್‌ನಲ್ಲಿ ಕೇಂದ್ರ ಕಚೇರಿ ಹೊಂದಿ, ಹಿಂದಿನ 8-10 ವರ್ಷಗಳಿಂದ ಕರ್ನಾಟಕದ ಸರಕಾರಿ ಕಾಂಟ್ರ್ಯಾಕ್ಟ್‌ಗಳನ್ನೆಲ್ಲಾ ಅಕ್ರಮ ಮಾರ್ಗದಿಂದ ಕೈವಶ ಮಾಡಿಕೊಳ್ಳುತ್ತಿರುವ ಆಂಧ್ರದ ಕಂಪೆನಿಗಳ ಪ್ರವರ್ತಕರಲ್ಲಿ ಹೆಚ್ಚಿನವರೆಲ್ಲಾ ರಾಯಲಸೀಮಾದ ರೆಡ್ಡಿ-ಕಮ್ಮಾ-ರಾಜು ಜಾತಿಯ ಖದೀಮರೇ. ತಮಿಳು ಅಥವಾ ಮರಾಠಿ ಭಾಷಾಂಧರಿಗಿಂತ, ತೆಲುಗು ಧನದಾಹಿ ಕ್ರಿಮಿನಲ್ ಉದ್ಯಮಿಗಳೇ ಕರ್ನಾಟಕದ ಪಾಲಿಗೆ ಬಹುದೊಡ್ಡ ಅಪಾಯ. ಗಣಿಕಳ್ಳರ ತೆಲುಗು ಮಾಫಿಯಾದ ಮುಷ್ಟಿಯಿಂದ ಆತ್ಮಸಮ್ಮಾನವುಳ್ಳ ಕನ್ನಡಿಗರು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳುವುದು ಅತ್ಯವಶ್ಯಕ. ಸಾಹಿತಿ ಯು.ಆರ್.ಅನಂತಮೂರ್ತಿಯವರು ಯಡ್ಡಿಯ ಪರವಾಗಿ ಮಾತನಾಡುತ್ತಿರುವುದು ಇದೇ ಕಾಳಜಿಯಿಂದ ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಿದೆ.

-ಟಿ.ಎಸ್.ಶೆಟ್ಟಿ, ಮಂಗಳೂರು

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಭಗವದ್ಗೀತೆ ಬೇಡ, ವಚನಗಳು ಬೇಕು!

ಯಡಿಯೂರಪ್ಪನವರ ಬಿಜೆಪಿ ಸರ್ಕಾರದಲ್ಲಿ ಅನೇಕ ವ್ಯತ್ಯಯಗಳು, ಗೊಂದಲಗಳು, ವಿರೋಧಾಭಾಸಗಳು ಮತ್ತು ಭಿನ್ನಾಭಿಪ್ರಾಯಗಳು ಇವೆಯಾದರೂ ಒಂದು ವಿಷಯದಲ್ಲಿ ಯಾವುದೇ ಒಡಕಿಲ್ಲದೆ, ಅತ್ಯಂತ ಶಿಸ್ತಿನಿಂದ, ಚಾಣಕ್ಯತನದಿಂದ ಗುಪ್ತವಾಗಿ ಕಾರ್ಯನಿರತವಾಗಿದೆ. ಅದೆಂದರೆ ಪುರೋಹಿತಶಾಹಿ-ಸನಾತನ ಹಾಗೂ ವರ್ಣಭೇದ ಅವಲಂಬಿತ ಮೌಲ್ಯಗಳ ಹೇರಿಕೆ ಮತ್ತು ಮುಂದುವರಿಕೆ. ಇದಕ್ಕಾಗಿ ಲಭ್ಯವಿರುವ ಎಲ್ಲಾ ಸಾಧ್ಯತೆಗಳನ್ನೂ ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳುತ್ತಿದೆ. ಉದಾಹರಣೆಗೆ ಮುಜರಾಯಿ ಇಲಾಖೆಯಲ್ಲಿ ಹಿಂದಿನ ಸಚಿವರಾಗಿದ್ದ ಕೃಷ್ಣಯ್ಯನವರ ಲಾಡೂ, ಗಂಗಾಜಲ, ಗಂಜಲ ಇತ್ಯಾದಿಗಳ ಹಂಚುವಿಕೆ, ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್‌ನ ಪುಸ್ತಕಗಳ ಕಡ್ಡಾಯ ಖರೀದಿ, ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಅತೀ ಉತ್ಸಾಹ, ಇತ್ಯಾದಿ.

ಈ ಬಳಗದ ಅತ್ಯಂತ ಪ್ರಮುಖ ಗುರಿ ಎಂದರೆ ಶಾಲೆಗಳಲ್ಲಿ ಓದುತ್ತಿರುವ ಎಳೆಮಕ್ಕಳ ಮುಗ್ಧ ಹೃದಯಗಳು. ಅಲ್ಲಿನ ಮೂಲಭೂತ ಸೌಕರ್ಯಗಳನ್ನು ಯಾವುದೇ ಎಗ್ಗಿಲ್ಲದೆ ಉಪಯೋಗಿಸಿಕೊಳ್ಳಲು RSSನವರಿಗೆ ಅಲಿಖಿತ ಪರವಾನಗಿ ಇದೇ ಅಲ್ಲದೆ ಇಂತಹ ರಿವಾಜುಗಳಲ್ಲಿ ಅಪಾರ ನಂಬಿಕೆ ಇಟ್ಟಿರುವ ಅನೇಕ ಮಠಗಳ ಸಹಯೋಗದೊಂದಿಗೆ ಮುನ್ನೆಲೆಯಲ್ಲಿ ಅತ್ಯಂತ ಮಾನವೀಯ ಸೇವೆಯಂತೆ ಕಾಣುವ ಆದರೆ ಹಿನ್ನೆಲೆಯಲ್ಲಿ ಮಾನವದ್ವೇಷಿ ಅಜೆಂಡಾಗಳನ್ನು ಬಹಳ ಸೂಕ್ಷ್ಮವಾಗಿ ನಡೆಸುತ್ತಿದೆ. ಇತ್ತೀಚಿನ ವಿದ್ಯಮಾನವೆಂದರೆ ಉತ್ತರ ಕನ್ನಡ ಸಿರ್ಸಿಯ ಶ್ರೀಸೋಂದಾ ಸ್ವರ್ಣದಲ್ಲಿ ಮಹಾ ಸಂಸ್ಥಾನ ಕೈಗೊಂಡಿರುವ "ಸ್ವಯಂಪ್ರೇರಿತ" ಭಗವದ್ಗೀತಾ ಕಂಠಪಾಠ ಅಭಿಯಾನ. ಭಗವದ್ಗೀತೆಯನ್ನು ಎಲ್ಲರೂ ಗೌರವಿಸುವ ಹಾಗೂ ಎಲ್ಲರಿಗೂ ಅನಿವಾರ್ಯ ಎಂದು ತಾವೇ ಘೋಷಿಸಿಕೊಂಡು ಇಂದಿಗೂ ಅನೇಕ ಗೊಂದಲಗಳ ಗೂಡಾಗಿರುವ (ಇಲ್ಲದಿದ್ದರೆ ಹತ್ತಾರು ವ್ಯಾಖ್ಯಾನಗಳ ಅಗತ್ಯ ಏನಿತ್ತು?) ಅನೇಕರಿಗೆ ಅರ್ಥವಾಗದ ಭಾಷೆಯಾದ ಸಂಸ್ಕೃತದಲ್ಲಿರುವ ಶ್ಲೋಕಗಳನ್ನು 5 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಕಂಠಪಾಠ ಮಾಡಿಸುವ ಯತ್ನ ನಡೆಸಿದ್ದಾರೆ. ಅದರಲ್ಲೂ ಭೌತಿಕ ಬದುಕಿನ ನಿಷ್ಫಲತೆಯನ್ನು ಸಾರುವ 14 ಮತ್ತು 15ನೇ ಅಧ್ಯಾಯಗಳನ್ನು ಪ್ರಮುಖವಾಗಿ ಬಳಸಬೇಕೆಂದು ವಿಧಿಸಲಾಗಿದೆ. ಇಂತಹ ಪ್ರಯತ್ನಗಳ ಹಿನ್ನೆಲೆ ಏನು? ಜೀವ ವಿರೋಧಿ ವೈದಿಕ ಮೌಲ್ಯಗಳನ್ನು ಮುಗ್ಧ ಮನಸ್ಸುಗಳಲ್ಲಿ ನಾಟುವುದೆ?

ವೈಜ್ಞಾನಿಕ ಮನೋಭಾವವನ್ನೂ, ಜಾತ್ಯತೀತ ಮೌಲ್ಯಗಳನ್ನೂ ರೂಢಿಸುವ ಮೂಲಕ ದೇಶ ಕಟ್ಟಬೇಕೆನ್ನುವ ನಮ್ಮ ಸಂವಿಧಾನದ ಆಶಯಗಳಿಗೆ ತದ್ವಿರುದ್ಧವಾಗಿರುವ ಇಂತಹ ಹುನ್ನಾರಗಳನ್ನು ತೀವ್ರವಾಗಿ ಖಂಡಿಸಬೇಕಿದೆ ಮತ್ತು ವಿರೋಧಿಸಬೇಕಿದೆ.

ಚಿಕ್ಕಮಕ್ಕಳಲ್ಲಿ ಸರಳತೆ, ಭ್ರಾತೃತ್ವ, ನಿಸ್ವಾರ್ಥತೆ, ನಮ್ರತೆ ಇವುಗಳನ್ನು ಬೆಳೆಸುವ ಪ್ರಾಮಾಣಿಕ ಆಸಕ್ತಿ ಇದ್ದರೆ ನಮ್ಮ ಆಯ್ಕೆ ಈ ನಾಡಿನ ಅತ್ಯಂತ ವಿಶಿಷ್ಟವಾದ ಹಾಗೂ ಜನ-ಮನ ಭಾಷೆಯಾದ ಸರಳ ಕನ್ನಡದಲ್ಲಿರುವ ವಚನಗಳನ್ನು ಮತ್ತು ದಾಸವರೇಣ್ಯರ ಕೀರ್ತನೆಗಳನ್ನು ಕಂಠಪಾಠ ಮಾಡಿಸಬೇಕಿದೆ. ಇದನ್ನು ನಮ್ಮ ನಾಡಿನ ಎಲ್ಲಾ ವಿರಕ್ತಮಠಗಳೂ ಒಂದು ಆಂದೋಲನದಂತೆ ಮಾಡಬೇಕಿದೆ. ಬಸವಾದಿ ಶರಣರು ಹಾಕಿಕೊಟ್ಟಿರುವ "ಸಲ್ಲಲಿತ ಸನ್ಮಾರ್ಗ"ದ ಅರ್ಥವನ್ನೂ, ಕುವೆಂಪುರವರು ಹಾಕಿಕೊಟ್ಟ "ವಿಶ್ವಮಾನವ ಪಥ"ವನ್ನೂ ಎಳೆಯ ಹೃದಯಗಳಲ್ಲಿ ಬಿತ್ತಬೇಕಿದೆ. ಯಾವ ತಕ್ಕಡಿಯಲ್ಲಿ ತೂಗಿದರೂ, ವಚನ ಸಾಹಿತ್ಯದ ಜೀವಪ್ರೀತಿಯ ಸಹಬಾಳ್ವೆಯ ಆದರ್ಶಗಳಿಗೆ ಭಗವದ್ಗೀತೆಯ ಗೊಂದಲಮಯ ಕಬ್ಬಿಣದ ಕಡಲೆ ಸರಿಸಾಟಿಯಾಗಲಾರದೆಂದು ಅರಿಯಬೇಕಿದೆ.

-ಡಾ. ತುಮಕೂರು ಚಂದ್ರಕಾಂತ, ಬೆಂಗಳೂರು

...ವರವರಿಗೆ ಕಂಡಂತೆ ಉಮಾಶ್ರೀ...

ಏಳು ಕುರುಡರು ಆನೆಯನ್ನು ಮುಟ್ಟಿ ಹೇಗೆ ತಮ್ಮ ತಮ್ಮ ಕಲ್ಪನೆಗೆ ತಕ್ಕಂತೆ ...ವನ್ನು ವರ್ಣಿಸಿದರೆಂಬ ಕಥೆಯನ್ನು ನೆನಪಿಸುವಂತಿತ್ತು ಗಾಂಧಿನಗರದ ಜನ ಮೊನ್ನೆ ...ಮಾಶ್ರೀಗೆ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದಾಗ ಸಂಭ್ರಮಿಸಿದ್ದು.

ಯಾವತ್ತೂ ಕನ್ನಡದ ನಟಿ, ನಟಿಯರಿಗೆ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದಾಗ ವಾಣಿಜ್ಯ ...ಡಳಿಯವರು ಅವರನ್ನು ಕರೆದು ಹಾರ ಹಾಕಿ ಸನ್ಮಾನ ಮಾಡಿದ ಉದಾಹರಣೆಯೇ ...ಲ್ಲ. ರಾಷ್ಟ್ರೀಯ ಪುರಸ್ಕಾರ ಪಡೆಯುವ ನಿರ್ದೇಶಕರು, ತಂತ್ರಜ್ಞರೆಲ್ಲಾ "ಮುಖ್ಯವಾಹಿನಿಗೆ ...ದವರಲ್ಲ''ಎಂಬ ಅಸಡ್ಡೆ ಈ ಜನರದ್ದಾಗಿರುವುದರಿಂದ "ನಾವ್ಯಾಕೆ ಅವರನ್ನು ...ನಿಸಬೇಕು'' ಎಂಬುದು ಅವರ ಧೋರಣೆಯಾಗಿತ್ತು, ಇಲ್ಲದಿದ್ದರೆ, ಆರೇಳು ಪ್ರಶಸ್ತಿ ...ದಿರುವ ಗಿರೀಶ್ ಕಾಸರವಳ್ಳಿ, ನಾಗಾಭರಣ, ಗಿರೀಶ್ ಕಾರ್ನಾಡ್, ನಾಗತಿಹಳ್ಳಿ ...ವ್ರೇಖರ್ .... ಇವರನ್ನೆಲ್ಲಾ ವಾಣಿಜ್ಯ ಮಂಡಳಿಯವರು ಕರೆದು ಗೌರವಿಸುತ್ತಿದ್ದರಲ್ಲವೇ? ...ಮಾಶ್ರೀ ಕಮರ್ಷಿಯಲ್ ಚಿತ್ರದ ಪ್ರತಿನಿಧಿಯಾಗಿದ್ದರಿಂದ ಈ ಬಾರಿ ವಾಣಿಜ್ಯ ...ಡಳಿ ಆಕೆಯನ್ನು ಸನ್ಮಾನಿಸುವ ಮುಖಾಂತರ ತಮ್ಮನ್ನು ತಾವು ಸನ್ಮಾನಿಸಿಕೊಂಡಂತೆ ...ಗುತ್ತಿದ್ದಾರೆ."

ಇನ್ನೊಂದು ವಿಶೇಷವೆಂದರೆ, ವಾಣಿಜ್ಯ ಮಂಡಳಿಯ ಅಧ್ಯಕ್ಷೆಯಾಗಿ ಜಯಮಾಲಾ ...ಗ ಕಾರ್ಯ ನಿರ್ವಹಿಸುತ್ತಿರುವುದರಿಂದ ಆಕೆಗೆ ತನ್ನ ಅಧಿಕಾರಾವಧಿಯಲ್ಲಿ ಮತ್ತೊಬ್ಬ ...ಣ್ಣು ಮಗಳಿಗೆ ಗೌರವಿಸುವ ಬಗ್ಗೆ ಆಸಕ್ತಿಯಿತ್ತು.

ಈ ಮಧ್ಯೆ ರಂಗಭೂಮಿ ಕಲಾವಿದರು ಒಟ್ಟು ಸೇರಿ ಉಮಾಶ್ರೀ ಮೂಲಭೂತವಾಗಿ ...ಗಭೂಮಿ ನಟಿ ಎಂದು ಹೇಳುತ್ತಾ ಆಕೆಯ ಯಶಸ್ಸಿಗೆ ಹಾಗೂ ಆಕೆ ಈ ಎತ್ತರಕ್ಕೆ ...ಯಲಿಕ್ಕೆ ರಂಗಭೂಮಿಯಲ್ಲಿ ಸಿಕ್ಕಿದ ದಟ್ಟ ಅನುಭವವೇ ಕಾರಣ ಎಂದು ಹೇಳುತ್ತಾ ...ಯನ್ನು ಸನ್ಮಾನಿಸಿದರು. ಹಾಗೆ ಮಾಡುವ ಮೂಲಕ ರಂಗಭೂಮಿಯ ಕಲಾವಿದರೆಲ್ಲ ...ವೇ ರಾಷ್ಟ್ರೀಯ ಪ್ರಶಸ್ತಿ ಪಡೆದಷ್ಟು ಹಿರಿಹಿರಿ ಹಿಗ್ಗಿದರು.

ಉಮಾಶ್ರೀಯ ಪ್ರಶಸ್ತಿ ಸಂಭ್ರಮ ಇಷ್ಟಕ್ಕೇ ನಿಲ್ಲಲಿಲ್ಲ, ಆಕೆ ಕಾಂಗ್ರೆಸ್ ಪಕ್ಷದ ಸಕ್ರಿಯ ...ರ್ಯಕರ್ತೆಯಾದ್ದರಿಂದ ಈ ಮಾಜಿ ಶಾಸಕಿಯನ್ನು ಸನ್ಮಾನಿಸಲು ಕಾಂಗ್ರೆ ಕಾರ್ಯಕರ್ತರೂ ...ಂದಾದರು. ಅಲ್ಲಿ ಉಮಾಶ್ರೀಯ ಸಿನಿಮಾ ರಂಗದ ಗೆಲುವನ್ನು ಕಾಂಗ್ರೆ ಕಾರ್ಯಕರ್ತರು ...ಕೀಯ ಗೆಲುವಿನಂತೆ ಆಸ್ವಾದಿಸಿದರು. ಇದೇ ಸಂದರ್ಭದಲ್ಲಿ ಟೀವಿ ಅಸೋಸಿಯೇಷನ್ ...ವೇನು ಕಮ್ಮಿ ಎಂದು ಅವರೂ ಕೂಡಾ 'ಟೀವಿ ಕಲಾವಿದೆ ಉಮಾಶ್ರೀ'ಯ ...ವಣಿಗೆ ಮತ್ತು ಸಂತೋಷವನ್ನು ಹಬ್ಬದಂತೆ ಆಚರಿಸಿದರು.

ಈ ಮಧ್ಯೆ "ಉಮಾಶ್ರೀ ಪ್ರತಿಭೆಯನ್ನು ನನ್ನ 'ಪುಟ್ನಂಜ' ಚಿತ್ರದಲ್ಲಿ ತೋರಿಸಿದ್ದೇ ...ನು. ಆಗಲೇ ಗೊತ್ತಿತ್ತು ಒಂದಲ್ಲಾ ಒಂದು ದಿನ ಈಕೆ ರಾಷ್ಟ್ರೀಯ ಪ್ರಶಸ್ತಿ ಪಡೆಯುತ್ತಾಳೆ'' ...ದು ಕ್ರೇಜಿ ಸ್ಟಾರ್ ರವಿಚಂದ್ರನ್ ಕೂಡ ಆಕೆಯನ್ನು ಕೊಂಡಾಡಿ ಆಕೆಯ ಗೆಲುವಲ್ಲಿ ...ನ್ನ ಪಾತ್ರವಿದೆ ಎಂಬುದನ್ನು ಸಾರಿದರು.

ಉಮಾಶ್ರೀಯ ವ್ಯಕ್ತಿತ್ವದ ಇನ್ನೊಂದು ಆಯಾಮವೆಂದರೆ, ಆಕೆ ದೇವಾಂಗ ಜನಾಂಗಕ್ಕೆ ...ದವರು. ಇದೇ ಮೊದಲ ಬಾರಿಗೆ ದೇವಾಂಗ ಜನಾಂಗದಿಂದ ಬಂದ ಕಲಾವಿದೆಯೊಬ್ಬಳು ...ಲಿಗೆ ಹೋಗಿ ರಾಷ್ಟ್ರಪತಿಯಿಂದ ಪ್ರಶಸ್ತಿಯನ್ನು ಸ್ವೀಕರಿಸಿದ್ದನ್ನು ಕಂಡು ದೇವಾಂಗ ... ಬಾಂಧವರೆಲ್ಲಾ ಪುಳಕಿತರಾದರು.

ಈ ಸಮಯಕ್ಕೆ ಸರಿಯಾಗಿ 'ಕಾಂಜೀವರಮ್' ಚಿತ್ರ ಅತ್ಯುತ್ತಮ ರಾಷ್ಟ್ರ ಪ್ರಶಸ್ತಿ ...ದದ್ದು ಆ ಚಿತ್ರದಲ್ಲಿ ದೇವಾಂಗ ಜನಾಂಗ ವಿವಿಧ ರೀತಿಯ ಶೋಷಣೆಗೆ ಒಳಗಾಗುವುದನ್ನು ...ರಿಸಿರುವುದು ಕೂಡ ಒಂದು ಹೊಸ ತಿರುವನ್ನು ಉಮಾಶ್ರೀಗೆ ನೀಡಿತ್ತು. "ನಾನು ...ೀ ದೇವಾಂಗ ಜನಾಂಗಕ್ಕೆ ಸೇರಿದವಳು, ಈಗಲೂ ದೇವಾಂಗ ಜನಾಂಗದವರು ...ೀ ರೀತಿ ಶೋಷಣೆಯನ್ನು ಅನುಭವಿಸುತ್ತಿದ್ದಾರೆ; ಇವರ ಅಭಿವೃದ್ಧಿಗಾಗಿ ನಾನು ...ಕಿಯಾಗಿದ್ದಾಗ ಅನೇಕ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದೆ''' ಎಂದು ಗದ್ಗದಿತಳಾಗಿ ...ಕ ಕಡೆ ರಾಜಕಾರಣಿ ಥರ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಿ ಪ್ರಶಸ್ತಿಯನ್ನು ಬೇರೆ ...ಯಲ್ಲಿ ಉಪಯೋಗಿಸಿಕೊಂಡರು.

ಹೀಗೆ... ಒಂದು ಪ್ರಶಸ್ತಿ ಕನ್ನಡ ಚಿತ್ರರಂಗದಲ್ಲಿ ಒಬ್ಬೊಬ್ಬರ ಪಾಲಿಗೆ ಒಂದೊಂದು ...ಯಲ್ಲಿ ಕಾಣಿಸಿಕೊಂಡಿತು. ಸ್ವತಃ ಉಮಾಶ್ರೀ ಕೂಡಾ ... ಪ್ರಶಸ್ತಿಯ ಸಂತಸವನ್ನು ಕಲಾವಿದೆಯಾಗಿ ...ಭವಿಸುವ ಬದಲು ರಾಜಕಾರಣಿ ಮತ್ತು ...ಮಾಜಿಕ ಕ್ರಾಂತಿಕಾರಿಣಿಯ ಹಾಗೆ ...ಖ್ಯಾನಿಸಲು ಶುರು ಮಾಡಿದ್ದು ಕೂಡಾ ...ಗ್ಯದಂತೆ ಕಾಣುತ್ತಿದೆ.



ಅದೇನೇ ಇರಲಿ, ಯಾವತ್ತೂ ...ಕ ಚಿತ್ರರಂಗ ಯಾವುದೇ ಕಲಾವಿದ, ...ಶಕ ರಾಷ್ಟ್ರಪ್ರಶಸ್ತಿ ಪಡೆದಾಗ ಇಷ್ಟೊಂದು ...ಭ್ರಮಿಸಿದ್ದನ್ನು ನಾವಂತೂ ಕಂಡಿರಲಿಲ್ಲ, ...ದ ಉಮಾಶ್ರೀ ಮಾತ್ರ ತಾವು ಅಲ್ಲೂ, ...ಲ್ಲಿ ಎಲ್ಲೆಲ್ಲೂ ಸಲ್ಲುವ ಅಪರೂಪದ ಸ್ನೇಹಜೀವಿ ...ಮು ದನ್ನು ತೋರಿಸಿಕೊಟ್ಟರು. ದುರಂತವೆಂದರೆ, ...ಉದ್ಯಮ ದವರೆಲ್ಲ ಒಟ್ಟು ಸೇರಿ, ಒಂದೇ ...ಯಲ್ಲಿ ಉಮಾಶ್ರೀ ಮತ್ತು ಪ್ರಕಾಶ್ ರೈ ...ವರು ಎಂದು ಇಲ್ಲಿಯವರೆಗೂ ...ನಿಸದಿರುವುದು. ...ಅಲ್ಲವೇ?



ಮತ್ತೆ ಬಂದಳು ಮೀನಾ

ಮೀನಾ ಎಂಬ ಕೃಷ್ಣವರ್ಣದ, ಬೊಗಸೆ ಕಂಗಳ ಸುಂದರಿ ಮತ್ತೆ ನಟಿಸಲು ಗಾಂಧಿನಗರಕ್ಕೆ ಕಾಲಿಟ್ಟಿದ್ದಾಳೆ. ಇದೇನು ಅಂತಹ ದೊಡ್ಡ ಸುದ್ದಿಯೇನಲ್ಲ, ಆದರೆ ಇತ್ತೀಚೆಗೆ ಬೆಂಗಳೂರಿನ ಕಂಪ್ಯೂಟರ್ ಸಾಫ್ಟ್‌ವೇರ್ ಹುಡುಗನೊಬ್ಬನನ್ನು ಮದುವೆಯಾದ ಮೀನಾ ಇನ್ನುಂದೆ ಚಿತ್ರಗಳಲ್ಲಿ ನಟಿಸುವುದಿಲ್ಲ ಎಂದೇ ಸುದ್ದಿಯಾಗಿತ್ತು, ಆದರೆ ಮೀನಾ ಮತ್ತೆ ಮುಖಕ್ಕೆ ಬಣ್ಣ ಹಚ್ಚುವುದು ಆಕೆಯ ಅಭಿಮಾನಿಗಳಿಗಿಂತ ಗಾಂಧಿನಗರದವರಿಗೆ ಹೆಚ್ಚು ಥ್ರಿಲ್ ನೀಡಿದೆ.

ಕಾರಣವಿಷ್ಟೇ: ಈ ಮೀನಾ ಬಹುತೇಕ ಎಲ್ಲಾ ನಾಯಕನಟರ ಫೇವರಿಟ್ ಹಿರೋಯಿನ್. ಒಂದು ಕಾಲದಲ್ಲಿ ಆಕೆಯನ್ನು 'ಚೆಲುವ' ಚಿತ್ರಕ್ಕೆ ಇಷ್ಟಪಟ್ಟು ಕರೆದುಕೊಂಡು ಬಂದವರು ಕ್ರೇಜಿ ಸ್ಟಾರ್ ರವಿಚಂದ್ರನ್. ಆ ನಂತರ ಮೀನಾ ವಿಷ್ಣು ಕ್ಯಾಂಪ್‌ನ ಪರ್ಮನೆಂಟ್ ಸದಸ್ಯೆ ಎನಿಸಿಕೊಂಡಳು. ಅದಾದನಂತರ ಮೀನಾ ದಿಢೀರನೇ ಕೃಷ್ಣವರ್ಣದ ನಾಯಕ ಐಎಎಸ್ ಅಧಿಕಾರಿ ಶಿವರಾಂ ಜೊತೆ ನಟಿಸಿ 'ಎಲ್ಲಿಯ ವಿಷ್ಣು? ಎಲ್ಲಿಯ ಶಿವರಾಂ' ಎಂದು ಗೇಲಿ ಮಾಡಿದ್ದಳು. ಆಗ ಆಕೆಯ ಕೆರಿಯರ್ ಮುಗಿದೇಹೋಯಿತೆಂದು ಎಲ್ಲರೂ ಭವಿಷ್ಯ ನುಡಿದಿದ್ದರು. ಆದರೆ ಅವರೆಲ್ಲರ ಲೆಕ್ಕಾಚಾರಗಳನ್ನು ಸುಳ್ಳು ಮಾಡಿದ ಮೀನಾ ಅನಂತರ ಯುವ ನಾಯಕ ಸುದೀಪ್‌ನ ಅಚ್ಚುಮೆಚ್ಚಿನ ನಾಯಕಿಯಾಗಿ ಒಂದೆರಡು ಚಿತ್ರಗಳಲ್ಲಿ ಕಾಣಿಸಿಕೊಂಡರು. ಸುದೀಪ್-ಮೀನಾ ಜೋಡಿ ಭರ್ಜರಿಯಾಗಿದ್ದ ಸಮಯದಲ್ಲೇ ಮೀನಾ ಮದುವೆ ವಿಷಯ ಹೊರಬಿದ್ದು ಆಕೆ ಚಿತ್ರರಂಗಕ್ಕೆ ವಿದಾಯ ಹೇಳಿದ್ದಾಳೆ ಎಂದೇ ಭಾವಿಸಲಾಗಿತ್ತು, ಆದರೀಗ, ಶ್ರೀಮತಿ ಮೀನಾ ಮತ್ತೊಮ್ಮೆ ತನ್ನ ನಟನೆಯಿಂದ ಪ್ರೇಕ್ಷಕರನ್ನು ಮೋಡಿ ಮಾಡಲು ಬಂದಿದ್ದಾಳೆ.

ಸಾಮಾನ್ಯವಾಗಿ ಮದುವೆ ನಂತರ ನಾಯಕಿಯರ ಮೇಲಿನ ಕ್ರೇಜ್ ಅಭಿಮಾನಿಗಳಿಗೆ ಕಡಿಮೆಯಾಗುತ್ತದೆ. ಆದರೆ ಸೌಂದರ್ಯ ಮತ್ತು ಒಳ್ಳೆಯ ಮೈಮಾಟ ಹೊಂದಿರುವ ಈ ದುಂಡು ಮುಖದ ಚೆಲುವೆಗೆ ಒಳ್ಳೆಯ ಪ್ರತಿಭೆಯಿರುವುದರಿಂದ ಆಕೆ ಮತ್ತೊಮ್ಮೆ ಎಲ್ಲರ ಮೆಚ್ಚುಗೆ ಪಡೆದರೂ ಆಶ್ಚರ್ಯವಿಲ್ಲ, ಅಂದಹಾಗೆ ಈಕೆ ನಟಿಸಲಿರುವ ಚಿತ್ರದ ಹೆಸರು 'ಹೆಂಗಸರೇ ಹುಷಾರ್'.



'ದಿಲ್‌ವಾಲೇ' ಗಣೇಶ್!

ಹಿಂದಿ ಚಿತ್ರರಂಗದ ಇತಿಹಾಸದಲ್ಲೇ ದಾಖಲೆ ಸೃಷ್ಟಿಸಿದ್ದ 'ದಿಲ್ ವಾಲೇ ದುಲ್ಹನಿಯಾ ಲೇ ಜಾಯೇಂಗೆ' ಚಿತ್ರದ ಕನ್ನಡ ಅವತರಿಣಿಕೆ ಸದ್ಯದಲ್ಲೇ ಆರಂಭವಾಗಲಿದೆ. ಶಾರೂಕ್ ಖಾನ್ ನಿರ್ವಹಿಸಿದ ಪಾತ್ರವನ್ನು ಕನ್ನಡದಲ್ಲಿ ಗಣೇಶ್ ನಿರ್ವಹಿಸಲಿದ್ದಾರೆ.

ಗೋಲ್ಡನ್ ಸ್ಟಾರ್ ಗಣೇಶ್ ಇತ್ತೀಚೆಗೆ ಚಿತ್ರಗಳನ್ನು ಆಯ್ಕೆ ಮಾಡುತ್ತಿರುವ ಪರಿ ನೋಡಿದರೆ ಸದ್ಯದಲ್ಲೇ ಅವರು ರಿಮೇಕ್ ಗಣೇಶ್ ಎಂಬ ಅಪಖ್ಯಾತಿಗೆ ಒಳಗಾದರೆ ಆಶ್ಚರ್ಯವಿಲ್ಲ, ತಿಂಗಳಿಗೆ ಸರಿಸುಮಾರು ಹತ್ತರಿಂದ ಹದಿನೈದು ಕಥೆಗಳನ್ನು ಕೇಳುವ ಹವ್ಯಾಸ ಹೊಂದಿರುವ ಗಣೇಶ್, ಆ ಎಲ್ಲಾ ಕಥೆಗಳನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತಿದ್ದಾರೆ. ಆದರೆ ಅದೇ ಹೊತ್ತಿಗೆ ರಿಮೇಕ್ ಚಿತ್ರಗಳಿಗೆ ಸೈ ಅನ್ನುತ್ತಿದ್ದಾರೆ. ಅದರರ್ಥ ಸ್ವತಂತ್ರ ಕಥೆಯ ಚಿತ್ರಗಳಿಗಿಂತ ಗಣೇಶ್‌ಗೆ ರಿಮೇಕ್ ಚಿತ್ರಗಳೇ ಇಷ್ಟವೆಂದಾಯಿತು.

'ಮುಂಗಾರು ಮಳೆ' ಎಂಬ ಕನ್ನಡ ಮಣ್ಣಿನ ವಾಸನೆಯನ್ನು ಸೂಸುವ ಚಿತ್ರದ ಮುಖಾಂತರ ದಿಢೀರನೆ ನಾಯಕನಟನಾಗಿ ಕಾಣಿಸಿಕೊಂಡ ಗಣೇಶ್ ಆಗ ಒಂದು ಹೊಸ ಭರವಸೆಯನ್ನು ಮೂಡಿಸಿದ್ದರು. ಆದರೆ ಒಂದೆರಡು ಒರಿಜಿನಲ್ ಚಿತ್ರಗಳು ಸೋತ ನಂತರ ಗಣೇಶ್ ಕೂಡಾ ವಿಷ್ಣು, ಉಪೇಂದ್ರ ಮೊದಲಾದ ನಟರಂತೆ ರಿಮೇಕ್ ಚಿತ್ರಗಳಿಗೆ ಶರಣಾಗಿದ್ದಾರೆ. ವಿಪರ್ಯಾಸವೆಂದರೆ, ಗಣೇಶರ ರಿಮೇಕ್ ಚಿತ್ರಗಳೂ ಗೆದ್ದಿಲ್ಲ, ಸದ್ಯಕ್ಕೆ ತೆಲುಗಿನಲ್ಲಿ ಜಯಭೇರಿ ಬಾರಿಸಿದ್ದ 'ಉಲ್ಲಾಸಂಗ, ಉತ್ಸಾಹಂಗ' ಚಿತ್ರದ ಕನ್ನಡ ಅವತರಣಿಕೆಯಲ್ಲಿ ಗಣೇಶ್ ಕಾಣಿಸಿದ್ದು ಅದರ ಬಿಡುಗಡೆ ಮತ್ತು ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ.

ಅದೇನೇ ಇರಲಿ, ತನ್ನ ವಿಭಿನ್ನವಾದ ಮ್ಯಾನರಿಸಂ, ಬಾಡಿಲ್ಯಾಂಗ್ವೇಜ್ ಮತ್ತು ಡೈಲಾಗ್ ಡೆಲಿವರಿ ಶೈಲಿಯಿಂದ ಹೀರೋ ಪಟ್ಟವನ್ನು ಅಲಂಕರಿಸಿದ ಗಣೇಶ್ ಶಾರೂಕ್ ಖಾನ್‌ನಂತಹ ನಾಯಕನ ಪಾತ್ರದಲ್ಲಿ ಹೇಗೆ ಪರಕಾಯಪ್ರವೇಶ ಮಾಡಿ ಗೆಲ್ಲುತ್ತಾರೋ ನೋಡಬೇಕು.



ಜೋಗಯ್ಯನಾದ ಜೋಗಿ...

ಈ ಬಾರಿಯ ಸಂಕ್ರಾಂತಿಯಂದು ಗಾಂಧಿನಗರದಲ್ಲಿ ಹಬ್ಬದ ವಾತಾವರಣ ಮೂಡುವುದು ಗ್ಯಾರಂಟಿ. ಯಾಕೆಂದರೆ 'ಜೋಗಿ' ಚಿತ್ರದ ಯಶಸ್ಸಿನ ನಂತರ ಪ್ರೇಮ್ ಮತ್ತು ಶಿವರಾಜ್‌ಕುಮಾರ್ ಮತ್ತೆ ಜೋಡಿಯಾಗುವ ಚಿತ್ರಕ್ಕೆ ಅಂದು ನಾಂದಿ ಹಾಡಲಿದ್ದಾರೆ.

ಪ್ರೇಮ್ ನಿರ್ದೇಶನದ ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಲಿರುವ ಈ ಚಿತ್ರದ ಹೆಸರು 'ಜೋಗಯ್ಯ'. ಇದು ಪ್ರೇಮ್ ನಿರ್ಮಾಣದ ಮೊದಲ ಚಿತ್ರವಾದರೆ ಶಿವರಾಜ್‌ಕುಮಾರ್ ಅಭಿನಯದ 100ನೇ ಚಿತ್ರವಾಗಲಿದೆ. ಅಷ್ಟೇ ಅಲ್ಲ, ಅಭಿಮಾನಿಗಳು ಸಂತೋಷಪಡುವ ರೀತಿಯಲ್ಲೇ ಪ್ರೇಮ್ 'ಜೋಗಯ್ಯ' ಚಿತ್ರದ ಕಥೆಯನ್ನು ಹೆಣೆದಿದ್ದಾರಂತೆ. ಒಂದು ಮೂಲದ ಪ್ರಕಾರ ಈ 'ಜೋಗಯ್ಯ' ಚಿತ್ರ 'ಜೋಗಿ' ಚಿತ್ರದ ಮುಂದುವರೆದ ಭಾಗವಂತೆ. ಯಾವಾಗಲೂ ಗಿಮಿಕ್‌ಗಳಲ್ಲೇ ಪ್ರಚಾರವನ್ನು ಪಡೆಯುವುದರಲ್ಲಿ ನಿಸ್ಸೀಮನಾಗಿರುವ ಪ್ರೇಮ್ ಈ ಬಾರಿಯೂ ಅದೇ ಹಾದಿಯನ್ನೇ ಹಿಡಿದಿದ್ದಾರೆ. ಸ್ವಂತ ನಿರ್ಮಾಣ, ಜೋಗಿಯ ಮುಂದುವರೆದ ಭಾಗ, ಶಿವರಾಜ್‌ಕುಮಾರ್ 100ನೇ ಚಿತ್ರ ಈ ಮೂರು ಅಂಶಗಳೇ ಪ್ರೇಮ್‌ಗೆ ಪ್ರಚಾರ ತಂದುಕೊಡಲು ಸಾಕಲ್ಲವೇ?





ನಾರಾಯಣಪ್ರೇಮ



...ನಿದು ಗಾಂಧಿನಗರದ ಲೇಟೆಸ್ಟ್ ಹಾಟ್ ನ್ಯೂಸ್.
...ವಲು ಒಂದು ವರ್ಷದ ಹಿಂದೆ ಕೈಕೈ ಮಿಲಾಯಿಸಲು ಹೊರಟ ಎಸ್. ನಾರಾಯಣ್ ಮತ್ತು ...ಶಕ ಪ್ರೇಮ್ ಈಗ ಹಳೆಯ ದ್ವೇಷವನ್ನೆಲ್ಲ ಮರೆತು ಚಡ್ಡಿದೋಸ್ತ್‌ಗಳ ತರಹ ಓಡಾಡುತ್ತಿದ್ದಾರೆ. ...ಥ ಸರಿಯಾದಲ್ಲಿ ಪ್ರೇಮ್ ನಾಯಕನಾಗಿ ನಟಿಸಲಿರುವ ಚಿತ್ರವನ್ನು ನಾಣಿ ನಿರ್ದೇಶಿಸಲಿದ್ದಾರೆ. ವಿಶೇಷವೆಂದರೆ ಸ್ವತಃ ನಾಣಿಯೇ ಈ ಚಿತ್ರವನ್ನು ನಿರ್ಮಿಸುತ್ತಿರುವುದು. ...ರಾಯಿಯ ಮಡಿಲಲ್ಲಿ' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಇವರಿಬ್ಬರ ನಡುವೆ ವೈಮನಸ್ಸು ಉಂಟಾಗಿತ್ತು, ಇಬ್ಬರು ಸಂಸ್ಕೃತದಲ್ಲಿ ಪರಸ್ಪರ ಒಬ್ಬರನ್ನೊಬ್ಬರು ...ಸಿಕೊಂಡಿದ್ದರು. ಕೊನೆಗೆ ಚೇಂಬರ್, ನಿರ್ಮಾಪಕರ ಸಂಘ ಕೂಡಾ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗದಿದ್ದಾಗ ಸಾಹಸಿಂಹ ವಿಷ್ಣುವರ್ಧನ್ ಮನೆಯಲ್ಲಿ ಅನೇಕ ... ಸಮಸ್ಯೆಯಲ್ಲಿ ಸಂಧಾನಕಾರ್ಯ ನಡೆದಿತ್ತು, ಆಗ ಅವರಿಬ್ಬರನ್ನು ನಿಭಾಯಿಸುವುದೇ ಅಲ್ಲಿದ್ದವರಿಗೆ ಕಷ್ಟವಾಗಿತ್ತು, ...ದಕ್ಕೆಲ್ಲ ಮೂಲಕಾರಣ ಆ ಚಿತ್ರದ ನಾಯಕಿ ರಕ್ಷಿತಾ. ಆಕೆಯ ಬಗ್ಗೆ ನಾರಾಯಣ್ ಏನೋ ಕೆಟ್ಟದಾಗಿ ಮಾತನಾಡಿದ್ದರು ಎಂಬ ಕಾರಣಕ್ಕಾಗಿ ಆಗಷ್ಟೇ ಆಕೆಯ ಪ್ರೇಮಿ ...ಸ್ತ ಪ್ರೇಮ್ ಆಕೆಯ ಪರವಾಗಿ ವಾದ ಮುಂದಿಟ್ಟಿದ್ದ, ಈ ಗಲಾಟೆಯ ಸಂದರ್ಭದಲ್ಲಿ ಪ್ರೇಮ್ ಮಹಾನ್ ದೊಡ್ಡ ನಿರ್ದೇಶಕನಲ್ಲ ಎಂದು ನಾರಾಯಣ್ ಕರೆಯುವರು ...ದ್ದರು. ಆದರೆ ಆಗತಾನೆ ಪ್ರೇಮ್‌ಗೆ ನಿರ್ದೇಶಕನಾಗಿ ಸ್ಟಾರ್ ವ್ಯಾಲ್ಯೂ ಬಂದಿದ್ದರಿಂದ ನಾರಾಯಣ್‌ಗೆ ಸಹಿಸಲಾಗುತ್ತಿಲ್ಲ ಎಂದು ಪ್ರೇಮ್ ಅಭಿಮಾನಿಗಳು ಉತ್ತರಿಸಿದ್ದರು. ...ಸಿಕೊಂಡರೆ ಆ ಸಂದರ್ಭದಲ್ಲಿ ಇವರಿಬ್ಬರ ಚಿತ್ರಗಳೂ ಬಾಕ್ಸಾಫೀಸ್‌ನಲ್ಲಿ ನೆಲಕಚ್ಚಿದ್ದವು. ...ಚಿತ್ರರಂಗದಲ್ಲಿ ಯಾರೂ ಜೀವನಪರ್ಯಂತ ಶತ್ರುಗಳಾಗಿರುವುದಿಲ್ಲ ಎಂಬುದನ್ನು ಪ್ರೇಮ್-ನಾರಾಯಣ್ ಜೋಡಿ ತೋರಿಸಿಕೊಟ್ಟಿದೆ.



ಮಾಲಾಶ್ರೀ ವೀರ

ಕನ್ನಡ ಚಿತ್ರರಂಗದಲ್ಲಿ ಒಬ್ಬೊಬ್ಬರಿಗೂ ಒಂದೊಂದು ಮೇನಿಯಾ.

ಮಕ್ಕಳ ಮಮಕಾರದಿಂದ ಅವರನ್ನು ಹೀರೋಗಳನ್ನಾಗಿಸಲು ಎಷ್ಟೋ ಜನ ಸಿನಿಮಾ ಮಾಡಿ ಎಕ್ಕುಟ್ಟಿಹೋಗಿದ್ದಾರೆ. ಒಂದಷ್ಟು ಜನ ನಿರ್ಮಾಪಕರು ತಮ್ಮ ಗೆಳತಿಯರಿಗಾಗಿ, ಇನ್ನೂ ಕೆಲವರು ಸ್ನೇಹಕ್ಕಾಗಿ ಸಿನಿಮಾ ಮಾಡಿ ನೆಲಕಚ್ಚಿದ್ದಾರೆ. 'ಚಪಲ'ಕ್ಕಾಗಿ ಸಿನಿಮಾ ಮಾಡಿ ಇಂದು ಚಪ್ಪರ್‌ಗಳಂತೆ ತಿರುಗುತ್ತಿರುವವರಿಗೂ ಏನು ಕಡಿಮೆಯಿಲ್ಲ.

ಆದರೆ 'ಮಡದಿ ಮೇನಿಯಾಕ್ಕೆ' ಒಳಗಾಗಿ ತನ್ನ ಮುದ್ದಿನ ಹೆಂಡತಿಗಾಗಿ ಸಿನಿಮಾ ನಿರ್ಮಿಸಿಯೇ ಬರ್ಬಾದ್ ಆದವರು ಮಾತ್ರ ಮಾಜಿ ಕೋಟಿ ನಿರ್ಮಾಪಕ ರಾಮು.

ಈಗಾಗಲೇ ರಾಮು ತಮ್ಮ ಮುದ್ದಿನ ಮಡದಿ ಮಾಲಾಶ್ರೀಗಾಗಿ 'ದುರ್ಗಿ', 'ಚಂಡಿ', 'ಚಾಮುಂಡಿ', 'ಕನ್ನಡದ ಕಿರಣ್ ಬೇಡಿ'.... ಮುಂತಾದ ಚಿತ್ರಗಳನ್ನು ರಾಮು ನಿರ್ಮಿಸಿದ್ದಾರೆ; ಆ ಚಿತ್ರಗಳಿಂದ ಸಾಕಷ್ಟು ನಷ್ಟವನ್ನೂ ಅನುಭವಿಸಿದ್ದಾರೆ. ಬಹುಶಃ ಮರಳಿ ಯತ್ನವ ಮಾಡಿ ಕಳೆಕೊಂಡ ಜಾಗದಲ್ಲೇ ಲಾಭ ಪ'ಡ'ಯ'ು ು ಪ' ಉದ್ದೇಶವೋ ಏನೋ ರಾಮು ಮಾಲಾಶ್ರೀಗಾಗಿ ಮತ್ತೊಂದು ಚಿತ್ರವನ್ನು ಆರಂಭಿಸುತ್ತಿದ್ದಾರೆ.

ನಟ ಸಾಯಿಕುಮಾರ್ ಅವರ ಸಹೋದರ ಅಯ್ಯಪ್ಪ ನಿರ್ದೇಶಿಸಲಿರುವ 'ವೀರ' ಎಂಬ ಚಿತ್ರಕ್ಕೆ ರಾಮು ಹಣ ಹೂಡುತ್ತಿದ್ದಾರೆ. ಇದೇ ತಿಂಗಳು ಆರಂಭವಾಗುತ್ತಿರುವ 'ವೀರ'ದಿಂದಾಗಿ ರಾಮು ಮತ್ತಷ್ಟು ಅಧೀರನಾಗಿ, ಅವರ ಬದುಕು ಇನ್ನಷ್ಟು ಘೋರವಾಗದಿದ್ದರೆ ಸಾಕು.


ಕಂಡೂ ಕಂಡೂ ಒಂದೇ ಕಡೆ ಎಡವಿಬೀಳುವ ರಾಮುಗೆ ಇದಕ್ಕಿಂತ ಬೇರೆ ರೀತಿಯಲ್ಲಿ ಹರಸುವುದಾದರೂ ಹೇಗೆ?



'ಮನಸಾರೆ' ನಿಧಾನವಾಗಿ ಗೆಲುವಿನ ಹಾದಿ ಹಿಡಿದಿದ್ದೇ ತಡ, ಯೋಗರಾಜ್ ಭಟ್-ದಿಗಂತ್ ಜೋಡಿಯ ಮತ್ತೊಂದು ಹೊಸ ಚಿತ್ರ ಮುಂದಿನ ತಿಂಗಳು ಸೆಟ್ಟೇರುತ್ತಿದೆ. ಈ ಹಿಂದೆಯೂ 'ಮುಂಗಾರು ಮಳೆ' ಹಿಟ್ ಆದ ಕೂಡಲೇ ಭಟ್ಟರು ಆ ಚಿತ್ರದ ನಾಯಕ ಗಣೇಶ್‌ನನ್ನು ಹಾಕಿಕೊಂಡು 'ಗಾಳಿಪಟ' ಹಾರಿಸಿದ್ದರು. ಈಗ ಅದೇ ಸೂತ್ರವನ್ನು ಅನುಸರಿಸುತ್ತಾ ಭಟ್ಟರು ದಿಗಂತನನ್ನು ಮತ್ತೆ ನಾಯಕನನ್ನಾಗಿ ಮಾಡಲು ಹೊರಟಿದ್ದಾರೆ. ವಿಶೇಷವೆಂದರೆ ಈ ಚಿತ್ರವನ್ನು ಭಟ್ಟರು ಮತ್ತು ಅವರ ಗೆಳೆಯರು ನಿರ್ಮಿಸುತ್ತಿರುವುದು.

ಈ ಚಿತ್ರದಲ್ಲೂ ಹಿಂದಿನಂತೆ ಮನೋಮೂರ್ತಿ-ಜಯಂತ್ ಕಾಯ್ಕಿಣಿ-ಸೋನು ನಿಗಮ್ ಈ ತ್ರಿಮೂರ್ತಿಗಳ ಸಮಾಗಮ ಇದ್ದೇ ಇರುತ್ತದೆ ಎಂದು ಹೇಳಲು ಭಟ್ಟರು ಮರೆಯಲಿಲ್ಲ. ಅಲ್ಲಿಗೆ 'ಮುಂಗಾರು ಮಳೆ'ಯ ನಂತರ ಭಟ್ಟರು ಮತ್ತು ತ್ರಿಮೂರ್ತಿಗಳ ಸ್ನೇಹಸಂಬಂಧ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿದೆ ಎಂದಾಯ್ತು.

ಕತ್ತಲ ರಾತ್ರಿಯಲ್ಲಿ ಕಾಕಾ ಸದ್ದು!



ಇದೇನಪ್ಪ ಹಗಲಲ್ಲಿ ಕಾಣುವ ಕಾಕ ರಾತ್ರಿ ಹೇಗೆ ಸದ್ದು ಮಾಡುತ್ತದೆ ಅಂತಾ ಕಿವಿ ನೆಟ್ಟಗೆ ಮಾಡ್ಕೋಬೇಡಿ!

ಹೀಗೆ ಸದ್ದು ಮಾಡಲು ಹೊರಟಿರುವುದು ಮರದ ಮೇಲಿನ ಕಾಕಾ ಅಲ್ಲ, ಕ್ರೈಂಸ್ಟೋರಿ ಖ್ಯಾತಿಯ ಕಾಕ ಅಲಿಯಾಸ್ ಬಾಲಕೃಷ್ಣ ಕಾಕತ್ಕರ್.

ಹೊಸ ಮದುವೆಯ ನಂತರ ಈ ಹಳೇ ಪತ್ರಕರ್ತ ಕಾಕತ್ಕರ್ ಸಖತ್ ಜೋಷ್ ಪಡೆದಿರುವಂತೆ ಕಾಣಿಸುತ್ತದೆ.

ತಮ್ಮ ಕ್ರೈಂ ಕಾರ್ಯಕ್ರಮಗಳಿಂದಲೇ ಪ್ರಸಿದ್ಧಿ ಪಡೆದ ಕಾಕತ್ಕರ್ ಈಗ ಟೀವಿ ಕಾರ್ಯಕ್ರಮಕ್ಕೆ ಅಲ್ಪ ವಿರಾಮ ಹಾಕಿ ರೇಡಿಯೋ ಕಡೆ ಮುಖಮಾಡಿದ್ದಾರೆ. ಎಫ್.ಎಂ. ರೇಡಿಯೋದಲ್ಲಿ 'ಇದು ಕ್ರೈಂ ಸ್ಟೋರಿ ಅಲ್ಲ, ಕಾಕತ್ಕರ್ಸ್ ಫ್ರೈಂ ಸ್ಟೋರಿ' ಅನ್ನೋ ಕಾರ್ಯಕ್ರಮವನ್ನು ಕಾಕಾ ಆರಂಭಿಸಿದ್ದಾರೆ.

ಪ್ರತೀ ಶನಿವಾರ ರಾತ್ರಿ 10ರಿಂದ 11ರ ತನಕ ಮೂಡಿಬರುವ 'ಪ್ರೈಮ್ ಟೈ'ನಲ್ಲಿ ಕಾಕತ್ಕರ್ ತಮ್ಮ ವಿಶಿಷ್ಟ ಕಂಠದಿಂದ ಹಳೆಯ ಹಾಡುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಡಿಟೇಲುಗಳನ್ನು ನೀಡುತ್ತಿದ್ದಾರೆ.





ದಿಗಂತನ ಬಿಸಿಲೇ!

ಕನ್ನಡ ಚಿತ್ರರಂಗ ತನ್ನ ಇತಿಹಾಸದಲ್ಲೇ ಎಂದೂ ಕಾಣದ ಅಶಿಸ್ತಿನ ನಾಯಕನಟ ದಿಗಂತ. ದಿಗಂತನ ಕಾರ್ಯವೈಖರಿ, ಟೈಂ ಸೆನ್ಸ್ ಇಲ್ಲದ ಆತನ ದಿನಚರಿ....

ಈಗ ನಿರ್ದೇಶಕ ಸಂದೀಪ್ ದಿಗಂತನ ಲೈಫ್ ಸ್ಟೈಲ್ ಅನ್ನೇ ಚಿತ್ರದ ಕಥೆಯನ್ನಾಗಿಸಿ ದಿಗಂತನನ್ನೇ ಹಾಕಿಕೊಂಡು 'ಬಿಸಿಲೇ' ಎನ್ನುವ ಚಿತ್ರವನ್ನು ನಿರ್ಮಿಸಿದ್ದಾರೆ. ಸತತ ಒಂದು ವರ್ಷಗಳ ಕಾಲ ಚಿತ್ರೀಕರಣಗೊಂಡಿರುವ 'ಬಿಸಿಲೇ' ಇನ್ನೇನು ತೆರೆಗೆ ಬರಲಿದೆಯಂತೆ.

ರಿಯಲ್ ಲೈಫ್‌ನಲ್ಲಿರುವಂತೇ ರೀಲ್ ಲೈಫ್‌ನಲ್ಲೂ ಕಾಣಿಸಿಕೊಂಡಿರುವ ದಿಗಂತ ಇಷ್ಟುದಿನ 'ಹರಾಜ್' ಆಗಿರುವ ತನ್ನ ಮಾನವನ್ನು ಬಿಸಿಲೇಯಿಂದಾದರೂ ಪಡೆದುಕೊಳ್ಳಲಿ.

ಚೆಲುವೆಯೇ ನೀರಲ್ ಬೀಳಲು...

ಪ್ರಪಂಚದ ಆರು ಅದ್ಭುತಗಳಲ್ಲಿ ಚಿತ್ರೀಕರಣಗೊಂಡಿರುವ 'ಚೆಲುವೆಯೇ ನಿನ್ನೇ ನೋಡಲು' ಚಿತ್ರ ನಿರ್ಮಾಣದ ವೇಳೆ ಆದ ಎಲ್ಲ ಅಡ್ಡಿ ಆತಂಕಗಳನ್ನೂ ದಾಟಿ ಈಗ ಮುಕ್ತಾಯದ ಹಂತಕ್ಕೆ ಬಂದು ನಿಂತಿದೆ.

ಇತ್ತೀಚಿಗೆ 'ಚೆಲುವೆ' ತಂಡ ದುಬೈಗೆ ಚಿತ್ರೀಕರಣಕ್ಕೆ ತೆರಳಿತ್ತು. ಸಂಜೆ ಚಿತ್ರೀಕರಣ ಮುಗಿದ ನಂತರ ಯೂನಿಟ್‌ನಲ್ಲಿದ್ದ ಎಲ್ಲರೂ ಅಲ್ಲೇ ಇದ್ದ ಕೃತಕ ದೋಣಿವಿಹಾರ ಕೇಂದ್ರದಲ್ಲಿ ಟೈಂ ಪಾಸ್ ಮಾಡಲು ಹೊರಟಿದ್ದಾರೆ. ಚಿತ್ರದ ನಾಯಕ ಶಿವರಾಜ್‌ಕುಮಾರ್ ಸೇರಿದಂತೆ ಚಿತ್ರತಂಡದ ಎಲ್ಲರೂ ವಾಟರ್ ಬೈಕ್ ಏರಿ ಒಂದೊಂದು ಸುತ್ತು ಹೊಡೆದು ಬಂದಿದ್ದಾರೆ.

ಕಡೆಯಲ್ಲಿ ನಿರ್ಮಾಪಕ ಎನ್.ಎಂ. ಸುರೇಶ್ ನಿರ್ದೇಶಕ ರಘುರಾಮ್‌ರನ್ನು ಕರೆದು 'ಬಾ ಗುರೂ ಒಂದ್ ರೌಂಡ್ ಹೋಗಿ ಬರೋಣ' ವೆಂದರಂತೆ. ಪ್ರೊಡ್ಯೂಸರ್ ಸಾಹೇಬ್ರು ಕರೆದ ಮೇಲೆ ಬೇಡ ಅನ್ನೋದು ಹೇಗೆ ಎಂದು ರಘು ಬೈಕ್ ಏರಿದ್ದಾರೆ.

ನೀರ ಮೇಲಿನ ಬೈಕು ಅರ್ಧ ಕಿಲೋಮೀಟರ್ ದೂರ ಹೋಗುತ್ತಿದ್ದಂತೇ ಯಮಭಾರದ ಈ ಇಬ್ಬರ ಭಾರ ತಡೆಯದೆ ದಢ್ ಅಂತಾ ದಬ್ಬಾಕಿಕೊಂಡಿದೆ. ಸುರೇಶ್‌ಗೆ ಅಲ್ಪ ಸ್ವಲ್ಪ ಈಜು ಬರುವುದರಿಂದ ಅಷ್ಟೇನೂ ಗಾಬರಿಯಾಗಿಲ್ಲ. ಆದರೆ ತನ್ನೊಟ್ಟಿಗೆ ಬೈಕ್‌ನಲ್ಲಿ ಕುಳಿತಿದ್ದ ರಘು ಮಾತ್ರ ನಾಪತ್ತೆಯಾಗಿಬಿಟ್ಟಿದ್ದರಂತೆ. 'ಏನೋ ಯಡವಟ್ಟಾಯಿತು' ಅಂದುಕೊಳ್ಳುತ್ತಿತುವಾಗಲೇ ರಘು ಬಂದು ಸುರೇಶ್ ಬೆನ್ನು ಹಿಡಿದು ಎಳೆಯಲು ಆರಂಭಿಸಿದರಂತೆ. ಮೊದಲೇ ಸುರೇಶ್ ಟೆನ್ಷನ್ ಪಾರ್ಟಿ! 'ಬಿಡು ಗುರೂ ನನ್ನನ್ನ ಮುಳುಗಿಸ್ಬೇಡ' ಎಂದು ಅರಚಲು ಶುರು ಮಾಡಿದ್ದಾರೆ.

ಇಷ್ಟು ಹೊತ್ತಾದರೂ ಇಬ್ಬರೂ ಕಾಣುತ್ತಿಲ್ಲವಲ್ಲ ಎಂಬ ಅನುಮಾನದಿಂದ ನಟ ತರುಣ್ ಸುಧೀರ್ ತನ್ನ ಕ್ಯಾಮೆರಾವನ್ನು ಫೋಕಸ್ ಮಾಡಿ ನೋಡಿದಾಗ ಈ ಎರಡೂ ಮರಿ ಆನೆಗಳು ನೀರಿನಲ್ಲಿ ಬಿದ್ದು ಹೊರಳಾಡುತ್ತಿರುವುದು ಕಾಣಿಸಿದೆ. ತಕ್ಷಣ ಇನ್ನೊಂದು ಬೋಟ್‌ನಲ್ಲಿ ಹೋಗಿ ಇಬ್ಬರನ್ನೂ ಬಚಾವು ಮಾಡಿ ಕರೆತಂದಿದ್ದಾರೆ.

● ಅರುಣ್



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...